
ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರ ಪತ್ರಿಕೆ

ಸಂಪುಟ ೧೨ ಸಂಚಿಕೆ ೧೬ ಏಪ್ರಿಲ್ ೨೯-೧೯೯೦ ರೂ. ೧.೫೦



ಭುಗಿಲೆದ್ದ ಬೆಂಕಿಯ ಜ್ವಾಲೆ ಜೀವನವೆಲ್ಲಾ ಉರಿದೀ ಜ್ವಾಲೆ

ಜಿ.ಎನ್. ನಾಗರಾಜ್

'ಅಂದು ಏಪ್ರಿಲ್ ೬ ವರ್ಗಪ್ರಜ್ಞೆಯುಳ್ಳ ಕಾರ್ಮಿಕರ ಹೃದಯಗಳೆಲ್ಲಾ ಬಾಂಬೆಗೆ ಧಾವಿಸಿದ ದಿನ. ಇಡೀ ಭಾರತದ ದುಡಿಯುವ ವರ್ಗದ ಕಣ್ಣೆಂಬ ಜನವೆಲ್ಲಾ ಬಾಂಬೆಯಲ್ಲಿ ನೆರೆದ ದಿನ. ಭಾರತದ ಸಾರ್ವಭೌಮತೆಯ ರಕ್ಷಣೆಗಾಗಿ ಅನುದಿನವೂ ಶ್ರಮಿಸುವ ನೈಜ ದೇಶಭಕ್ತರೆಲ್ಲಾ ಕಣ್ಣೀರು ಹರಿಸಿದ ದಿನ. ತಾಯಿ ಭಾರತಾಂಬೆಯ ಅಪ್ರತಿಮ ಪುತ್ರನೊಬ್ಬ ಜನರ ಮಧ್ಯದಿಂದುದಿಸಿ ದೇಶದಲ್ಲೆಲ್ಲಾ ಪ್ರಜ್ವಲಿಸಿ ಜನರ ನಡುವೆ ಕರಗಿಹೋದ ದಿನ.

ಅದು ಬಾಂಬೆ. ಭಾರತದ ಕಾರ್ಮಿಕ ಹೋರಾಟದ ಜ್ವಾಲೆ ಉದಿಸಿದ ಕನ್ನೆಲ. ಬಿರುಗಾಳಿಯಂತೆ ದೇಶದಲ್ಲೆಲ್ಲಾ ಹೊತ್ತಿ ಉರಿಯಲು ಆರಂಭಿಸಲು ಅನುವಾದ ಉಗುಮಸ್ಥಾನ. ಭಾರತದ ಕಾರ್ಮಿಕ ವರ್ಗದ ಅಗ್ರನಾಯಕ ಬಿ.ಟಿ.ಆರ್ ರವರನ್ನು ಗಿರಣಿ ಹೋರಾಟದ ಕುಲುಮೆ ಗಿಟ್ಟು ಮೂರ್ತಿಗೈದು ದೇಶಕ್ಕರ್ಪಿಸಿದ ನಾಡು. ಬಿ.ಟಿ.ಆರ್. ತಮ್ಮ ಜೀವನದ ಹಲವಾರು ದಶಕಗಳನ್ನು ಕಳೆದ ಸ್ಥಳ.

ಬಿ.ಟಿ.ಆರ್. ಸಾಮಾನ್ಯ ಕಾರ್ಯಕರ್ತನಿಂದ, ಮಹಾರಾಷ್ಟ್ರ ರಾಜ್ಯ ಕಾರ್ಯದರ್ಶಿಯಾಗಿ ದೇಶದ ಕಮ್ಯುನಿಸ್ಟ್ ಚಳುವಳಿಯ ಪ್ರಧಾನ ಕಾರ್ಯದರ್ಶಿಯಾಗಿ ಬೆಳೆದ ಬೆಳಗಿದ ಜಾಗ.

ಆ ಬಾಂಬೆ ಹರಿಸಿತ್ತು ಕಣ್ಣೀರ ಹೊಳೆಯನ್ನು. ಬಾಂಬೆಯ, ಮಹಾರಾಷ್ಟ್ರದ ಕಾರ್ಮಿಕ ವರ್ಗ ನೆರೆದಿತ್ತು ಅಲ್ಲಿ ತನ್ನ ನಾಯಕನಿಗೆ ಕೊನೆಯ ನಮನವನ್ನು ಸಲ್ಲಿಸಲು.

೮೬ ಜನರ ಕೆಂಪುದಳ ಸಾಗಿತ್ತು ಮುಂದೆ ಕೆಂಬಾವುಟವನ್ನು ತೆಲೆವಾಗಿಸಿ. ನಡೆದಿದ್ದರೆಲ್ಲಾ ಕೇಂದ್ರ ಸಮಿತಿಯ ಸದಸ್ಯರು ತಮಗಾಗಿ ಕಾದಿರಿಸಿದ್ದ ವಾಹನವನ್ನು ನಿರಾಕರಿಸಿ. ಸಾವಿರ ಸಾವಿರ ಕಾರ್ಮಿಕರು, ರೈತರು, ಆದಿವಾಸಿಗಳು, ಮಹಿಳೆಯರು, ವಿದ್ಯಾರ್ಥಿಗಳು ಯುವಕರು ಮೊಳಗಿಸಿದ ಘೋಷಣೆಗಳು ಬಾನೆತ್ತರಕ್ಕೇರಿದುವು: "ಕಾಂ। ಬಿ.ಟಿ.ಆರ್. ಲಾಲ್ ಸಲಾಮ್", "ಕಾಂ।ಬಿ.ಟಿ.ಆರ್ ಅಮರ್ ರಹೇ". "ಮಾರ್ಕ್ಸ್‌ವಾದ-ಲೆನಿನ್‌ವಾದ ಚಿರಾಯುವಾಗಲಿ." "ಸಿ.ಪಿ.ಐ. (ಎಂ)ಗೆ ಜಯವಾಗಲಿ"

ಅನಾರೋಗ್ಯದಲ್ಲಿದ್ದ ಕಾಂ। ನೃಪೇನ್ ಹೊರತಾಗಿ ಎಲ್ಲ ಪೊಲಿಟ್ ಬ್ಯುರೋ ಸದಸ್ಯರು, ಎಲ್ಲಾ ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯರು, ಅನೇಕ ಜನ ಕೇಂದ್ರ ಸಮಿತಿ ಸದಸ್ಯರು, ಬಂಗಾಳ, ಕೇರಳಗಳ ಮಂತ್ರಿಗಳು, ಕಿಸಾನ್‌ಸಭಾ ಎಸ್.ಎಫ್.ಐ., ಡಿ.ವೈ.ಎಫ್.ಐ. ನಾಯಕರು ಸೇರಿದ್ದರಲ್ಲಿ. ಕರ್ನಾಟಕದಿಂದ ಕಾಂ। ಪಿ.ರಾಮಚಂದ್ರ ರಾವ್, ಕಾಂ। ಸೂರ್ಯನಾರಾಯಣರಾವ್ ಧಾವಿಸಿದ್ದರು ಕರ್ನಾಟಕದ ಪರವಾಗಿ.

ದಹನಭೂಮಿಯ ಬಳಿ ನೆರೆದ ಜನ ಸಾಗರದ ಮುಂದೆ ದುಃಖತಪ್ತ ನಾಯಕ ವರ್ಗ-ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ। ಇ.ಎಂ.ಎಸ್.ನಂಬೂದರಿಪಾದ್.

ಪುಟ ೩ಕ್ಕೆ

ಹೊಸ ಉತ್ಸಾಹ ಮೂಡಿಸಿದ ದುಡಿಯುವ ಮಹಿಳೆಯರ ಸಮಾವೇಶ

ಏಪ್ರಿಲ್ ೯ ರಂದು ಬೆಂಗಳೂರಿನ ನಾಗರೀಕರು ಒಂದು ವಿಶಿಷ್ಟ ದೃಶ್ಯ ಕಂಡರು. 'ಸಮಾನ ಕೆಲಸಕ್ಕೆ ಸಮಾನ ವೇತನ' 'ಬೀಡಿ ಕಾರ್ಮಿಕರಿಗೆ ಐದು ದಿನದ ಕೆಲಸ', "ಮಹಿಳಾ ಕಾರ್ಮಿಕರಿಗೆ ಕನಿಷ್ಟ ಸೌಲಭ್ಯ" ಮತ್ತಿತರ ಬೇಡಿಕೆಗಳನ್ನು ಒತ್ತಾಯಿಸುತ್ತಿದ್ದ ಎರಡು ಸಾವಿರಕ್ಕೂ ಹೆಚ್ಚು ದುಡಿಯುವ ಮಹಿಳೆಯರು ಆಡಳಿತಗಾರರ ಕಿವಿಯ ಮೇಲೆ ತಮ್ಮ ಬೇಡಿಕೆಗಳನ್ನು ಹಾಕಲು ಬೆಂಗಳೂರಿನ ದೊಡ್ಡ ಬೀದಿಗಿಳಿದಿದ್ದರು ಎಂಬುದಲ್ಲ ಈ ವಿಶೇಷತೆ. ತಮ್ಮಲ್ಲಿ ವಿಶ್ವಾಸವಿಟ್ಟು ಆರಿಸಿಕಳುಹಿಸಿದ ಜನಗಳನ್ನೇ ನಂಬಲಾರದ, ಅವರ ಅಹವಾಲುಗಳನ್ನು ಒಂದು ಕಿಲೋಮೀಟ್ ದೂರದಿಂದಲಷ್ಟೇ ಕೇಳುತ್ತೇವೆ. ವಿಧಾನಸೌಧದ ಒಂದು ಕಿಲೋಮಿಟರ್ ವ್ಯಾಪ್ತಿಯ ಜಾಗ ತಮ್ಮ ಸುರಕ್ಷಿತ ಜಾಗ ಎಂಬ ಆಳರಸರ ಭಯದ ಪ್ರತೀಕಗಳಾದ ಪೋಲೀಸರಿಗೆ ಆ ಮೂಲಕ ಚುನಾಯಿತ ಪ್ರತಿನಿಧಿಗಳಿಗೇ ದುಡಿಯುವ ಮಹಿಳೆಯರು ಸವಾಲೆಸೆದ ಘಟನೆ. ಜನತೆಯ ಸೇವೆಗೆಂದು ನಾವೇ ಚುನಾಯಿಸಿದ ಪ್ರತಿನಿಧಿಗಳೇ ನೇಮಿಸಿದ ರಾಜ್ಯಪಾಲರ ದೊಡ್ಡ ಭವನಗಳ ಜೈಲೆತ್ತರದ ಗೋಡೆಗಳಿಂದ, ಜೈಲು ದ್ವಾರಗಳಿಂದಲೂ ರಕ್ಷಣೆಯ ಧೈರ್ಯ ಸಾಲದೆ ಈ ದ್ವಾರದ, ಗೋಡೆಗಳ ಮಾರದ್ದ ದೂರದಲ್ಲೇ ಊಳಿಗಮಾನ್ಯ ಪ್ರಭುಗಳೆದುರು ಅರಿಕೆ ಮಾಡಿಕೊಳ್ಳುವಂತೆ ಕೈ ಕಟ್ಟಿ ನಿಲ್ಲಬೇಕೆಂಬ ಪ್ರಜಾಪ್ರಭುತ್ವ ವಿರೋಧಿ ನಿಯಮಗಳನ್ನೆ ಅವರು ಸವಾಲೆಸೆದರು. ಪೋಲೀಸರ ತಡೆಗಡ್ಡುಗಳನ್ನು ಅಲ್ಲಲ್ಲಿ ಮುರಿದು ಅವರು ಮುಂದೊತ್ತುತ್ತಿದ್ದುದು ಈ ಮೆರವಣಿಗೆಯ ವಿಶೇಷತೆಯಾಗಿತ್ತು. ಮಹಿಳೆಯೊಬ್ಬರು ಎ.ಸಿ.ಪಿ. ಯವರನ್ನು ಅವರ ಸಿಬ್ಬಂದಿ ಯೆದುರೇ ಬಹಿರಂಗ 'ವಿಚಾರಣೆ' ನಡೆಸಿದ ಮೆರವಣಿಗೆಯದು. ನಮ್ಮ ಸಮಾಜದಲ್ಲಿ ಆಗಲೇ ಮೂಡಿಬಂದಿರುವ ವಿಭಾಗವೊಂದರ ಸಮರಧೀರತೆಯ ಪ್ರತೀಕವಾಗಿತ್ತದು.



ಏಪ್ರಿಲ್ ೯ ರಂದು ರಾಜ್ಯದ ಮೂಲೆ ಮೂಲೆಗಳಿಂದ ಬಂದಿದ್ದ ೧೫೦೦ಕ್ಕೂ ಮಿಕ್ಕಿದ ದುಡಿಯುವ ಮಹಿಳೆಯರ ಪ್ರತಿನಿಧಿಗಳು ತಮ್ಮ ಸಮಸ್ಯೆಗಳನ್ನು ದಿನವಿಡೀ ಚರ್ಚಿಸಿ ರೂಪಿಸಿದ ನಿರ್ಣಯಗಳನ್ನು, ಬೇಡಿಕೆಗಳನ್ನು ತಮ್ಮ ಆಳರಸರ ಕಿವಿಯ ಮೇಲೆ ಹಾಕಲೆಂದು ಸಂಘಟಿಸಿದ ಮೆರವಣಿಗೆಗೆ ಅಲ್ಲಲ್ಲಿ ಹಲವು ಬಾರಿ ಪೋಲೀಸರು ಅಡೆ-ತಡೆಯೊಡ್ಡಲಾರಂಭಿಸಿದರು. ಅವನ್ನು ಮುರಿದು ಮಹಿಳೆಯರು ಮುನ್ನುಗ್ಗಲಾರಂಭಿಸಿದಾಗ ಪೋಲೀಸರ ಲಾಠಿ ಚಲಿಸಲಾರಂಭಿಸಿ ಒಬ್ಬ ಮಹಿಳೆ, ಹೋಟೇಲ್ ಯೂನಿಯನ್ ಉಪಾಧ್ಯಕ್ಷ ಕಪನೀಪತಯ್ಯ ಹಾಗೂ ಹಾಗೂ ಸಿ.ಪಿ.ಐ(ಎಂ) ರಾಜ್ಯಸೆಕ್ರೆಟಾರಿಯಟ್ ಸದಸ್ಯರಾದ ಶ್ರೀರಾಮರೆಡ್ಡಿ ಮತ್ತಿತರರನ್ನು ಗಾಯಗೊಳಿಸಿದ್ದನ್ನು ಪ್ರತಿಭಟಿಸಿ ಮಹಿಳೆಯರು ರಸ್ತೆಯಲ್ಲೇ ಧರಣಿ ಕೂತರು. ರೊಚ್ಚಿಗೆದ್ದ ಮಹಿಳೆಯರನ್ನು ಉದ್ದೇಶಿಸಿ ಸಿ.ಐ.ಟಿ.ಯು. ರಾಜ್ಯ ಪ್ರಧಾನಕಾರ್ಯದರ್ಶಿ ವಿ.ಜೆ.ಕೆ. ನಾಯರ್ ಮಾತನಾಡಿದರು. ನಂತರ ಮಹಿಳಾ ಸಂಘಟನೆಯ ರಾಜ್ಯ ಸಂಚಾಲಕರಾದ ಹರಿಣಿ ಕಕ್ಕೇರಿ, ಲೀಲಾವತಿ, ಶಾಂತ ಕುಮಾರಿ, ಸಿ.ಐ.ಟಿಯು. ಬೆಂಗಳೂರು ಜಿಲ್ಲಾ ಮುಖಂಡರು ಈ ದುರ್ವರ್ತನೆಯನ್ನು ಖಂಡಿಸಿ ಮಾತನಾಡಿದರು. ಪೋಲೀಸರೊಡನೆ ಸೆಣಸುತ್ತಲೇ ರಾಜಭವನದ ಗೇಟಿನ ಹತ್ತಿರದವರೆಗೆ ಬಂದ ನಂತರ ದುಡಿಯುವ ಮಹಿಳೆಯರ ನಿಯೋಗವೊಂದು ರಾಜ್ಯಪಾಲರನ್ನು ಭೇಟಿ ಮಾಡಿ ತಮ್ಮ ಬೇಡಿಕೆಗಳ ಬಗ್ಗೆ ಚರ್ಚಿಸಿತು. ರಾಜ್ಯಮಟ್ಟದ ಸಮಾವೇಶ ಆರಿಸಿದ ಸಮನ್ವಯ ಸಮಿತಿಯ ಸಂಚಾಲಕಿಯಾದ ಕಾಂ. ರಾಜಮ್ಮನವರ ನೇತೃತ್ವದಲ್ಲಿ ತೆರಳಿದ್ದ ಈ ನಿಯೋಗದಲ್ಲಿದ್ದ ಇತರ ಮುಖಂಡರೆಂದರೆ ಪದ್ಮಾವತಿ, ವಿಮಲಾ, ವಿಜಯಾ, ನಾಗರತ್ನ, ಮೂರ್ತಿ ಮಹಾದೇವಿ, ಸಲೀಮಾಬಿ, ವಾರಿಜಾ ಮುಂತಾದವರು.

ಏಪ್ರಿಲ್ ೯ ರ ಬೆಳಿಗ್ಗೆ ೧೦ ಗಂಟೆಗೆ ಬೆಂಗಳೂರಿನ ವರದಾಚಾರ್ ಕಲಾಕ್ಷೇತ್ರದಲ್ಲಿ ಆರಂಭಗೊಂಡ ದುಡಿಯುವ ಮಹಿಳೆಯರ ಎರಡನೇ ರಾಜ್ಯ ಸಮಾವೇಶ ಆರಂಭವಾಗುವ ಹಿಂದಿನ ದಿನದಿಂದಲೇ ರಾಜ್ಯದ ಹದಿನಾಲ್ಕು ಜಿಲ್ಲೆಗಳಿಂದ ನೂರಾರು ಮಹಿಳೆಯರು ಬಂದು ಸೇರಲಾರಂಭಿಸಿದ್ದರು. ಸಮಾಜದಲ್ಲಿ ಬದಲಾವಣೆ ತರಲು ಶಿಸ್ತು ಬದ್ಧವಾದ ಸುಸಂಘಟಿತ ಚಳುವಳಿಯ ಅವಶ್ಯಕತೆಯನ್ನು ಎತ್ತಿ ತೋರುವಂತೆ ಸಮಯಕ್ಕೆ ಸರಿಯಾಗಿ ಸಮಾವೇಶದ ಹಾಲಿನಲ್ಲಿ ಎಲ್ಲ ಮಹಿಳೆಯರ ಸೇರಿದರು. ಪ್ಲಾಂಟೇಶನ್, ಬೀಡಿ ಮಹಿಳಾ ಕಾರ್ಮಿಕರು, ಹೆಚ್ಚು ಸಂಖ್ಯೆಯಲ್ಲಿದ್ದರೆ ಬೆಂಗಳೂರಿನ ವಿವಿಧ ಕಾರ್ಖಾನೆಗಳ ಕಛೇರಿಗಳಲ್ಲಿ, ದುಡಿಯುವ ಅಂಗನವಾಡಿ, ಬಾಲವಾಡಿಗಳಲ್ಲಿ ದುಡಿ

ಪುಟ ೮ ಕ್ಕೆ


ಆನಂದ ಮಾರ್ಗಿಗಳ ನಿಜರೂಪ ಮತ್ತೊಮ್ಮೆ ಬಯಲಿಗೆ

ಏಪ್ರಿಲ್ ೧೩ ರಂದು ಗಡಿರಕ್ಷಣಾದಳದ ಅಡಿಷನಲ್ ಡಿ.ಐ.ಜಿ. ಬಿಎಸ್.ಬಿಷ್ಟ್ ರವರು ಅಮೃತಸರದಲ್ಲಿ ನೀಡಿದ ಹೇಳಿಕೆ ಸನ್ಯಾಸಿಗಳ ವೇಷ ತೊಟ್ಟ ಆನಂದಮಾರ್ಗಿಗಳ ಫ್ಯಾಸಿಸ್ಟ್ ವಿಧಾನಗಳನ್ನು ಮತ್ತೊಮ್ಮೆ ಜನರ ಮುಂದೆ ಇಟ್ಟಿದೆ. ಜತೆಗೆ ಅವರ ವಕೀಲಿ ಮಾಡುವ ಪಿ.ಯು.ಸಿ.ಎಲ್. ಬಿ.ಜೆಪಿ.ಗಳ ಪಟ್ಟಭದ್ರ ಹಿತಾಸಕ್ತಿಯನ್ನು ಬಯಲು ಮಾಡಿದೆ.

ಆನಂದ ಮಾರ್ಗಿಗಳು ಅಯ್ದ ಸಿ.ಪಿ.ಐ.(ಎಂ) ನಾಯಕರನ್ನು ಕಾರ್ಯಕರ್ತರನ್ನು ಹತ್ಯೆ ಮಾಡುವ ಹಂಚಿಕೆ ಹಾಕಿರುವ ಸುಳಿವು ಇಬ್ಬರು ಆನಂದಮಾರ್ಗಿಗಳ ಬಂಧನದಿಂದ ಸಿಕ್ಕಿದೆಯೆಂದು ಶ್ರೀಯುತ ಬಿಷ್ಟ್ ತಿಳಿಸಿದ್ದಾರೆ. ಪಾಕಿಸ್ತಾನದಿಂದ ಶಸ್ತ್ರಾಸ್ತ್ರ ಪಡೆಯುವಾಗ ಗಡಿಪಟ್ಟಣ ಅಜ್ನಾಲಾದಲ್ಲಿ ಸುರೇಶ್ ಕುಮಾರ್ ಮತ್ತು ರವೀಂದ್ರಸಿಂಗ್ ಯಾದವ್ ಉರ್ಫ್ ಸುನಿಲ್ ಶರ್ಮ ಎಂಬುವ ಯುವಕರು ಗಡಿ ರಕ್ಷಣಾ ಪಡೆಗಳ ಕೈಗೆ ಸಿಕ್ಕಿ ಬಿದ್ದರು. ಅವರಿಂದ ೧೩ ವಿದೇಶಿ ಸ್ವಯಂಚಾಲಿತ ಪಿಸ್ತೂಲುಗಳು ೨೪ ನಾಡ ತೋಪುಗಳು ೬೪೬ ಸುತ್ತಿನ ಮದ್ದು ಗುಂಡುವಶವಾಗಿದೆ. ಈ ಯುವಕರ ವಿಚಾರಣೆ ನಡೆಸಿದಾಗ ಈ ವರ್ಷದ ಆರಂಭದಲ್ಲಿ ಸಿ.ಪಿ.ಐ.(ಎಂ) ಮುಖಂಡರನ್ನು, ಕಾರ್ಯಕರ್ತರನ್ನು ಕೊಲೆ ಮಾಡಲೆಂದೇ ಪ್ರತ್ಯೇಕ ಸಶಸ್ತ್ರ ವಿಭಾಗವೊಂದು ರಚನೆಯಾಗಿದೆಯೆಂದು ಅವರು ತಿಳಿಸಿದರು. ಮಾರ್ಗಿ 'ಆಧ್ಯಾತ್ಮಿಕತೆ' ಸೋಗಿನ ಪರಂಪರೆಗೆ ತಕ್ಕಂತೆ ಅದಕ್ಕೆ "ಮಾನವ ಮುಕ್ತಿ ಮೋರ್ಚಾ" ಎಂದು ಹೆಸರಿಡಲಾಗಿದೆ ಎಂದೂ ತಿಳಿದು ಬಂದಿದೆ.

"ಸಿ.ಪಿ.ಐ.(ಎಂ)ನ ಹಲ್ಲೆಗಳನ್ನು ಎದುರಿಸುವುದು ಇದರ ಉದ್ದೇಶ" ಎಂದು ಆ ಯುವಕರು ತಿಳಿಸಿದ್ದಾರಂತೆ. ಆದರೆ ಈ ಇಬ್ಬರು ಯುವಕರು ಆನಂದಮಾರ್ಗಿಗಳೇ ಅಲ್ಲ. ಸಿ.ಪಿ.ಐ. (ಎಂ)ನವರು ಎಂದು ಮಾರ್ಗಿಗಳು ತಿರುವನಂತಪುರದ ವ್ಯಾಖ್ಯಾನಕಾರರೊಬ್ಬ ಹೇಳಿಕೊಂಡಿದ್ದಾನೆ. ಹಿಂಸಾಚಾರದಲ್ಲಿ ತಮಗೆ ನಂಬಿಕೆಯಿಲ್ಲವೆಂದು ತೋರಿಸುವ ಹಿಡಿದು ಶಾಂತತೆ ... ಮಾಡುವ ಈ ಸಂಘಟನೆಯ ಈ ...

ಪುಟ ೮ ಕ್ಕೆ



ಜೀವನವೆಲ್ಲಾ ಹೋರಾಡಿ ಬೆಳಗಿದ ಚೇತನ

ಕಳೆದ ಸಂಚಿಕೆಯಿಂದ ಮುಂದುವರಿದುದು

ಈಗಿನ ಸಿ.ಪಿ.ಐ(ಎಂ) ಮುಖಂಡರು ವರ್ಗ ಶಾಮೀಲಿನ ಮಾರ್ಗದ ವಿರುದ್ಧ ಮಾಡಿದ ಹೋರಾಟಗಳು ಕೆಲವು ಭಾರಿ ವೈಯಕ್ತಿಕವಾಗಿ ಬಿ.ಟಿ.ಆರ್ ರವರ ಹೆಸರನ್ನೇ [illegible] ಅವುಗಳಲ್ಲಿ ಬಹುಪಾಲು ಎಷ್ಟೊಂದು ಸ್ಮರಣೀಯವೆಂದರೆ ಕ್ರಾಂತಿಕಾರಿಗಳ ವೇಷ ತೊಟ್ಟ ಸುಧಾರಣಾ ವಾದಿಗಳಿಗೆ ಅಗ್ರ ಪಕ್ಷದಲ್ಲಿ ಪ್ರಬಲ ಸ್ಥಾನ ಹೊಂದಿದವರಿಗೆ ಈಗಲೂ ದುಃಸ್ವಪ್ನಗಳೇ ಆದ್ದರಿಂದ ಅಂತವರಿಗೆ ಬಿ.ಟಿ.ಆರ್. ಭಾರತದ ಕಮ್ಯುನಿಸ್ಟ್ ಆಂದೋಲನದ ಗಲಭೆಕೋರ ನಾಗಿಯಲ್ಲದೆ ಬೇರೆ ರೀತಿಯಾಗಿ ಕಾಣಿಸಿಕೊಳ್ಳಲು ಸಾಧ್ಯವಿಲ್ಲ.

ಸಿ.ಪಿ.ಐ.(ಎಂ) ಸ್ಥಾಪನೆಯಾದ ತಕ್ಷಣದ ದಿನಗಳಲ್ಲಿ, ಅವರ ಲೇಖನಗಳಲ್ಲಿ ಬಲಪಂಥೀಯ, ಎಡಪಂಥೀಯ ಮಾರ್ಗ ಚ್ಯುತಿಗಳ ವಿರುದ್ಧ ಹೋರಾಟ ಹಾಗೂ ವಿಶ್ವ ಕಮ್ಯುನಿಸ್ಟ್ ಆಂದೋಲನದ ಬಗ್ಗೆ ಅವರು ನಡೆಸಿದ ಆಳವಾದ ವಿಶ್ಲೇಷಣೆಗಳು ಕಂಡು ಬರುತ್ತವೆ. ಈ ಸೈದ್ಧಾಂತಿಕ ತೀವ್ರತೆ ಅವರ ವಿಶಿಷ್ಟ ಗುರುತಾಗಿ ಉಳಿದಿದೆ. ಸುಧಾರಣಾ ವಾದಿಗಳಾಗಲಿ, ಪಂಥವಾದಿಗಳಾಗಲಿ ಯಾವ ಮಾರ್ಗ ಭ್ರಷ್ಟವನ್ನು ಅವರು ಬಿಡಲಿಲ್ಲ. ಅವರ ವಾಗ್ಯುದ್ಧ ಕೆಲವೊಮ್ಮೆ ಎಷ್ಟು ತೀಕ್ಷ್ಣವಾಗಿತ್ತೆಂದರೆ ಬಹಳ ಸಲ ಅದು ಖಾಯಂಗಾಯದ ಗುರುತು ಗಳನ್ನೇ ಬಿಡದಿರಲು ಸಾಧ್ಯವಿರಲಿಲ್ಲ. ಆಂದೋಲನದ ಒಳಿತಿಗಾಗಿಯೇ ಅವರು ಇದನ್ನೆಲ್ಲಾ ಮಾಡಿದರು. ಪಕ್ಷ ಒಡೆದ ಹಿಂದಿನ ಮಹಾಧಿ ವೇಶನದಲ್ಲಿ ಕಾಂ. ಬಿ.ಟಿ.ಆರ್. ಡಾಂಗೆ ಮತ್ತಿತರ ವರ್ಗ ಶಾಮೀಲಿನ ಮಾರ್ಗದ ಬಗ್ಗೆ ವ್ಯಕ್ತಗೊಂಡ ವಿರೋಧದ ನೇತೃತ್ವ ವಹಿಸಿದ್ದರು. ಆನಂತರ ಒಂದು ಮರಾಠಿ ಪತ್ರಿಕೆ ನವಕಾಲ್‌ಗೆ ನೀಡಿದ ಸಂದರ್ಶನ ಹೆಸರಿನಲ್ಲಿ ಅವರನ್ನು ಸುಮಾರು ನಾಲ್ಕು ವರ್ಷಗಳ ಬಂಧನದಲ್ಲಿಡಲಾಯಿತು.

ಸ್ವಾತಂತ್ರ್ಯಾ ನಂತರದ ಅವಧಿ ಪಕ್ಷಕ್ಕೆ ತೀವ್ರ ಪರೀಕ್ಷೆಯ ಅವಧಿ. ಎರಡನೇ ಮಹಾಧಿವೇಶನದಲ್ಲಿ ಕಲ್ಕತ್ತಾ ಪ್ರಬಂಧ ವನ್ನು ಅಂಗೀಕರಿಸಿ ಪಿ.ಸಿ. ಜೋಷಿಯ ಸುಧಾರಣಾವಾದಿ ನೇತೃತ್ವವನ್ನು ಎಸೆದು ಇಂ ಬಿ.ಟಿ.ಆರ್ ರವರನ್ನು ಮುಖಂಡ ರಾಗಿ ಚುನಾಯಿಸಿದ ಕೆಲವೇ ದಿನಗಳಲ್ಲಿ ಪಕ್ಷ ಮತ್ತು ಅದರ ನೇತೃತ್ವದ ಸಂಘಟನೆ ಗಳನ್ನು ನಿಷೇಧಿಸಲಾಯಿತು. ಕಾಂ. ಬಿ.ಟಿ.ಆರ್. ಭೂಗತರಾದರು. ಅತ್ಯಂತ ಸಮರ ಧೀರ ಅವಧಿಯಲ್ಲಿ ಪಕ್ಷದ ನೇತೃತ್ವ ವಹಿಸಿದ ಖ್ಯಾತಿ ಅವರದ್ದು. ೧೯೪೮ ರಲ್ಲಿ ಅವರ ಪ್ರತಿಪಾದನೆಯನ್ನು ಅಮಿತೋತ್ಸಾಹದಿಂದ ಪಕ್ಷ ಅಂಗೀಕರಿ ಸುವ ಮೊದಲೇ ದೇಶದೆಲ್ಲೆಡೆ ಸಮರ ಧೀರ ಹೋರಾಟಗಳು ಹೊಮ್ಮಿ ಬಂದಿದ್ದವು. ವಿಶೇಷವಾಗಿ ತೆಲಂಗಾಣ, ತೆಭಾಗಾ, ಪುನ್ನಪ್ರ ವಾಯಲಾರ್ ಇತ್ಯಾದಿ. ೧೯೪೭ ರಲ್ಲಿ ಪಕ್ಷದ ಆಂತರಿಕ ಹೋರಾಟದ ಫಲವಾಗಿ ಸಮರ ಧೀರ ಮಾರ್ಗ ಅಂಗೀಕರಿಸಿ ಈ ಹೋರಾಟಗಳಿಗೆ ಸ್ಫೂರ್ತಿ ನೀಡಿತು.

ಇದರ ಮೊದಲು ಎರಡನೇ ಮಹಾಯುದ್ಧ ಆರಂಭವಾದ ನಂತರದ ಕೆಲವೇ ದಿನಗಳಲ್ಲಿ ಕಾಂ. ಬಿ.ಟಿ.ಆರ್. ಜೈಲಿನಲ್ಲಿದ್ದರು. ೧೯೪೦ ರಲ್ಲಿ ಅವರನ್ನು ಭಾರತ ರಕ್ಷಣಾ ಕಾನೂನು (ಡಿ.ಐ.ಆರ್.) ಪ್ರಕಾರ ಬಂಧಿಸಿ ರಾಜಸ್ತಾನದ ದೇವಲಿ ಜೈಲಿನಲ್ಲಿಡಲಾಗಿತ್ತು. ಅಲ್ಲಿ ಅವರ ಬಂಧನದ ಕಾಲದಲ್ಲೇ ಯುದ್ಧ ಗುಣಾತ್ಮಕವಾದ ಹೊಸ ಘಟ್ಟವೊಂದನ್ನು ತಲುಪಿತು. ಹಿಟ್ಲರ ಸೋವಿಯತ್ ಒಕ್ಕೂಟದ ಮೇಲೆ ಆಕ್ರಮಣ ನಡೆಸಿದ. ದೇವಲಿ ಜೈಲಿನಲ್ಲಿದ್ದ ಕಾಂ. ಬಿ.ಟಿ.ಆರ್. ಮತ್ತಿತರ ಸಂಗಾತಿಗಳು ಈ ಗುಣಾತ್ಮಕ ಬದಲಾವಣೆಯನ್ನು 'ಜನತಾ ಯುದ್ಧ' ಎಂದು ವಿಶ್ಲೇಷಿಸಿದರು. ಎರಡನೇ ಮಹಾಧಿವೇಶನಕ್ಕೆ ಬಿ.ಟಿ.ಆರ್. ವರದಿ ಪ್ರಕಾರ ಪಿ.ಸಿ. ಜೋಷಿ ನೇತೃತ್ವದ ಈ ಬದಲಾವಣೆಯನ್ನು ಗಮನಿಸಲು ಆರು ತಿಂಗಳು ತಗೊಂಡಿತು. ದೇವಲಿ ಪೇಪರ್'ಗಳು ಯುದ್ಧ ಸಮಯದಲ್ಲಿ 'ರಾಷ್ಟ್ರೀಯ ಸರಕಾರ' ವೊಂದರ ಸ್ಥಾಪನೆಯಾಗಬೇಕೆಂದು ಬಯಸಿದ್ದವು. ಅವು ಭಾರತದಲ್ಲಿ ಬ್ರಿಟಿಶ್ ಸರಕಾರ ದೊಂದಿಗೆ ಸಹಕರಿಸುವ ವರ್ಗಶಾಮೀಲಿನ ಮಾರ್ಗವನ್ನು ವಿರೋಧಿಸಿದ್ದವು ಎಂದೂ ಎರಡನೇ ಮಹಾಧಿವೇಶನದ ವರದಿ ತಿಳಿಸಿತು. ಇದು ಬ್ರಿಟಿಶರೊಂದಿಗೆ ಶಾಮೀಲಿನ ಮಾರ್ಗ ಪ್ರತಿಪಾದಿಸುತ್ತಿದ್ದ ರಾಯ್‌ವಾದಿಗಳ ಮಾರ್ಗ ಎಂದು ವರದಿ ವಿಶ್ಲೇಷಿಸಿತ್ತು.


ಹೀಗೆ ೧೯೪೦ ರಿಂದ ೧೯೬೦ ರವರೆಗಿನ ಅವಧಿ ಪೂರ್ಣವಾಗಿ ಪಕ್ಷದೊಳಗೆ ಹೋರಾಟದ ಅವಧಿ. ಮೊದಲು ಸುಧಾ ರಣಾವಾದದ ವಿರುದ್ಧ, ಈ ಹೋರಾಟದಲ್ಲಿ ೧೯೪೮-೫೧ ರಲ್ಲಿ ಆಮೇಲೆ ಕಂಡು ಬಂದ ಪಂಥವಾದಿ ತಪ್ಪುಗಳು, ನಂತರ ಈಗ ಪರಿಷ್ಕರಣವಾದಿಗಳೆಂದು ಹೆಸರಿಸಿದ 'ಸುಧಾರಣಾವಾದಿ'ಗಳ ವಿರುದ್ಧ ಹೋರಾಟ ದಲ್ಲಿ ಸಿ.ಪಿ.ಐ(ಎಂ) ಸ್ಥಾಪನೆ, ಪಕ್ಷದೊಳಗೆ ಎಡ ಪಂಥವಾದದ ವಿರುದ್ಧ ಹೋರಾಟ, ನಕ್ಸಲ್‌ವಾದಿ ಗುಂಪುಗಳು ಸಿಡಿದು ಹೋದದ್ದು. ಸುಧಾರಣಾವಾದಿಗಳ ವಿರುದ್ಧ ಹೋರಾಟ ಮುಂದು ವರೆಯಿತು. ಅಳಿದುಳಿದ ಸಿ.ಪಿ.ಐ ವಿರುದ್ಧ ಹೋರಾಟದ ರೂಪದಲ್ಲಿ. ಈ ಅವಧಿಯಲ್ಲಿ ಅಂತರಾಷ್ಟ್ರೀಯ ರಂಗದಲ್ಲಿ ಮಹಾನ್ ಬದಲಾವಣೆಗಳು ಕಂಡು ಬಂದವು ಅವಕ್ಕೆ ಪ್ರತಿಕ್ರಿಯೆಗಳು ಭಿನ್ನವಾಗಿದ್ದವು. ಮೊದಲು ಮಹಾ ಯುದ್ಧ. ನಂತರ ವಸಾಹತುಗಳ ವಿಘಟನೆಯ (ನಿರ್ವಸಾಹ ತೀಕರಣದ) ಪ್ರಕ್ರಿಯೆ. ರಾಷ್ಟ್ರೀಯ ವಿಮೋಚನಾ ಆಂದೋಲನಗಳು, ಸಿ.ಪಿ.ಎಸ್.ಯು.

ಪಿ.ಜೆ.ಕೆ.ನಾಯರ್

೨೦ನೇ ಮಹಾಧಿವೇಶನ ಮತ್ತು ಅದರ ಪರಿಣಾಮಗಳು, ಕಮ್ಯುನಿಸ್ಟ್ ಪಕ್ಷಗಳ ಅಂತರಾಷ್ಟ್ರೀಯ ಸಮ್ಮೇಳನಗಳು, ದಸ್ತಾವೇಜುಗಳ ಅಂಗೀಕಾರ ನಂತರ ಸೋವಿಯತ್ ಮತ್ತು ಚೀಣಾ ಪಕ್ಷಗಳ ನಡುವಿನ ದೊಡ್ಡ ಭಿನ್ನಾಭಿಪ್ರಾಯ. ಈ ಎಲ್ಲಾ ಅವಧಿಯಲ್ಲಿ ನಮ್ಮ ಆಂದೋಲನ ಎಂದೂ ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆ ಯ ದಾರಿಯನ್ನು ಬಿಡಲಿಲ್ಲವೆಂಬುದು ನಮ್ಮ ಮುಖಂಡತ್ವದ ವಿಶೇಷ ಸಾಧನೆ. ಇದರಲ್ಲಿ ಕಾಂ. ಬಿ.ಟಿ.ಆರ್. ರವರದ್ದು ಅತ್ಯಂತ ಮಹತ್ವದ ಪಾತ್ರ. 'ದೇವಲಿ ಪೇಪರ್'ಗಳಲ್ಲಿ, ನಂತರ ಭಾರತ ಚೀಣಾ ಯುದ್ಧದ ಸಮಯದಲ್ಲಿ ಇದನ್ನು ಕಾಣಬಹುದು ಆದರೆ ಜತೆಗೆ ಅವರು ಎಂದೂ ಸೋದರ ಪಕ್ಷಗಳನ್ನೂ ಬಿಡಲಿಲ್ಲ. ಅವುಗಳಲ್ಲಿ ಬಲ ಅಥವಾ ಎಡ ತಪ್ಪುಗಳು ಕಂಡು ಬಂದಾಗ ಟೀಕಿಸದೆ ಬಿಡಲಿಲ್ಲ. ಯುರೋ ಕಮ್ಯುನಿಸಂ ಬಗ್ಗೆ ಕಾಂ. ಬಿ.ಟಿ.ಆರ್. ರವರ ವಿಮರ್ಶೆ ಕೂಡಾ ಓದಲೇ ಬೇಕಾದ್ದು.

ಸಮರ ಧೀರ ಘಟ್ಟ

ಈಗ ನಾವು ಕಾಂ. ಬಿ.ಟಿ.ಆರ್. ರವರ ಆರಂಭದ ಘಟ್ಟವನ್ನು ನೋಡೋಣ. ಇದನ್ನು ಮೊದಲ ದಶಕ ಎನ್ನಬಹುದು. ಇದು ದಶಕಕ್ಕಿಂತ ತುಸು ದೀರ್ಘ ವಾಗಿತ್ತು. ಹನ್ನೆರಡು ವರ್ಷಗಳು ಮೀರಟ್ ಪಿತೂರಿ ಮೊಕದ್ದಮೆ (೧೯೨೯) ಯಲ್ಲಿ ಸಂಗಾತಿಗಳ ಬಂಧನದ ವಿರುದ್ಧ ಪ್ರತಿಭಟನೆಯೊಂದಿಗೆ ಅವರ ಚಟುವಟಿಕೆ ಆರಂಭವಾದಂತೆ ಕಾಣುತ್ತದೆ. ಅದರ ಮೊದಲು ಗಿರಣಿ ಕಾಮಗಾರ್ ಯೂನಿಯನ್ನಿನಲ್ಲಿ ಸಕ್ರಿಯರಾಗಿದ್ದರು. ೧೯೨೯ರ ಗಿರಣಿ ಕಾರ್ಮಿಕರ ಮುಷ್ಕರದ ಪ್ರಮುಖ ಮುಖಂಡರಲ್ಲಿ ಒಬ್ಬ ರಾಗಿದ್ದರು. ೧೯೩೦ ರ ಮಧ್ಯದಲ್ಲಿ ಅವರು ಈ ಕಾರ್ಮಿಕರ ನಡುವೆ ಯುವ ಕಾರ್ಮಿಕರ ಲೀಗ್ ಸ್ಥಾಪಿಸಿದರು. (ಸುಭೋದ್‌ರಾಯ್‌ರವರ ಅಪ್ರಕಟಿತ ದಸ್ತಾವೇಜುಗಳು ೧೯೨೫-೩೪ ರಲ್ಲಿ ಇದರ ವಿವರ ಪಡೆಯಬಹುದು. ಆದರೆ ಇವು ಬ್ರಿಟಿಷ್ ಸರಕಾರದ ಅಭಿಪ್ರಾಯಗಳಾದ್ದ ಎಚ್ಚರ ವಹಿಸಬೇಕು. ಸುಕೋಮಲ್‌ಸೆನ್‌ರವರ, ಕಾರ್ಮಿಕ ಆಂದೋಲನದ ಇತಿಹಾಸ ಕೂಡಾ ಈ ಅವಧಿಯ ಬಗ್ಗೆ ಹೇಳುತ್ತದೆ ಇದರಿಂದ ಸಮುಕೋಲನದ ದೃಷ್ಟಿ ಸಿಗುತ್ತದೆ) ಕಾಂ. ಬಿ.ಟಿ.ಆರ್. ರವರಲ್ಲದೆ ಎಸ್.ವಿ. ದೇಶಪಾಂಡೆ ಈ ಲೀಗಿನ ನೇತೃತ್ವ ವಹಿಸಿದ್ದರು. ಕಾರ್ಮಿಕ ಸಂಘಗಳನ್ನು ಮಾರ್ಕ್ಸ್‌ವಾದದ ಶಾಲೆಗಳಂತೆ ಬಳಸ ಬೇಕೆಂಬ ನಿಲುವಿನಲ್ಲಿ ಬಿ.ಟಿ.ಆರ್. ಗಟ್ಟಿಯಾಗಿ ನಿಂತಿದ್ದರೆ. ಇದರಲ್ಲಿ ಅವರು ಎಲ್ಲಾ ಕಡೆಗಳಿಂದ ತೀವ್ರ ವಿರೋಧ ಎದುರಿಸಬೇಕಾಗಿ ಬಂದಿತ್ತು. ಈ ಅವಧಿಯ ಬಗ್ಗೆ ಹೇಳುತ್ತಾ ಸುಕೋಮಲ್‌ಸೆನ್ ಈ ಅವಧಿಯಲ್ಲಿ ಹಲವು ಪಂಥವಾದಿ ತಪ್ಪುಗಳಾದ್ದವು. ಆದರೆ ಇವೆಲ್ಲಾ ಆಗ ಸ್ವತಃ ಪಂಥವಾದಿ ಯಂತೆ ವರ್ತಿಸುತ್ತಿದ್ದ ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ ಮಾರ್ಗದರ್ಶನದ ಪ್ರಕಾರ ನಡೆದ ತಪ್ಪುಗಳು ಎನ್ನುತ್ತಾರೆ. ಈ ಅವಧಿ ಗಮನಾರ್ಹ. ರಾಷ್ಟ್ರೀಯ ಆಂದೋಲನ ತಣ್ಣಗಾಗಿತ್ತು. ಕಮ್ಯುನಿಸ್ಟರು ಸಂಘಟಿತರಾಗುತ್ತಿದ್ದರು. ಬ್ರಿಟಿಷ್ ಸರಕಾರದಿಂದ ತೀವ್ರ ದಮನ ಎದುರಿಸು ತ್ತಿದ್ದರು. ಎಂ.ಎನ್. ರಾಯ್‌ರವರನ್ನು ಅಂತರ್ರಾಷ್ಟ್ರೀಯದಿಂದ ಹೊರಹಾಕಲಾಗಿತ್ತು. ಅವರು ಭಾರತಕ್ಕೆ ಬಂದು ಬ್ರಿಟಿಶರೊಂದಿಗೆ ಶಾಮೀಲಿನ



ಮಾರ್ಗ ಅಂಗೀಕರಿಸಿದ್ದರು. ೧೯೩೧ರಲ್ಲಿ ರಾಯ್‌ವಾದಿಗಳು ಎ.ಐ.ಟಿ. ಯು.ಸಿ. ಮೇಲೆ ಹಿಡಿತ ಹೊಂದಿದ್ದರು. ರಾಷ್ಟ್ರೀಯವಾದಿಗಳು ೧೯೨೯ ರಲ್ಲೇ ನಾಗಪುರ ಅಧಿವೇಶನದಲ್ಲಿ ಸಿಡಿದು ಹೋಗಿದ್ದರು. ಮುಂಬೈಯ ಗಿರಣಿ ಕಾಮಗಾರ್ ಯೂನಿಯನ್ನಿನ ಸದಸ್ಯತ್ವ ನಾಗಪುರದಲ್ಲೂ, ಕಲ್ಕತ್ತಾದಲ್ಲೂ ಸದಾ ವಿವಾದದ ಪ್ರಶ್ನೆಯಾಗಿತ್ತು. ಇನ್ನು ಕಾಂ. ಬಿ.ಟಿ.ಆರ್. ಮತ್ತು ಅವರ ಸಂಗಾತಿಗಳು ಕೆಲಸ ಮಾಡುತ್ತಿದ್ದ ಗಿರಣಿ ಕಾಮಗಾರ್ ಯೂನಿಯನ್ ಮತ್ತು ರೈಲ್ವೇ ಕಾರ್ಮಿಕ ಸಂಘಗಳಲ್ಲಿ ಕಮ್ಯುನಿಸ್ಟರ ಸದಸ್ಯತ್ವ ವಿವಾದದ ಪ್ರಶ್ನೆಯಾಗಿತ್ತು. ಆ ಮೊದಲ ದಿನಗಳಲ್ಲಿ ಆ ಸಂಗಾತಿಗಳು ಎಷ್ಟೊಂದು ಕೆಲಸ ಮಾಡಿದರು ಎಂಬುದನ್ನು ನಾವು ಗಮನಿಸಬೇಕು.

ಹೀಗೆ ಮೊದಲ ದಶಕ ಆರಂಭದ ಅವಧಿಯಾಗಿತ್ತು. ಆದರೆ ಅಲ್ಲಿಯೂ ನಂತರದ ವಿಚಾರಧಾರೆಯ ಕಾರ್ಯಾ ಚರಣೆಯ ಬೀಜಗಳನ್ನು ನೇರವಾಗಿ ಕಾಣ ಬಹುದು. ಚಟುವಟಿಕೆಗಳು, ಕಾರ್ಮಿಕರ ನೇರ ಸಂಘಟನೆಯ ದೃಷ್ಟಿಯಿಂದ ಅದು ಅತ್ಯಂತ ಸಮರ ಧೀರ ಘಟ್ಟವಾಗಿದ್ದರೆ ಮೂರು ದಶಕಗಳವರೆಗೆ ವ್ಯಾಪಿಸಿದ ಎರಡನೇ ಘಟ್ಟ ಪಕ್ಷದೊಳಗೆ ಹೋರಾಟದ, ತಪ್ಪುಗಳನ್ನು ಮಾಡಿದ, ಅವನ್ನು ಸರಿಪಡಿಸಿಕೊಂಡ, ಆದರೆ ಸದಾ ಕಾರ್ಮಿಕ ವರ್ಗದ ಹೋರಾಟಗಳ ಪರವಾಗಿ ನಿಂತ ಘಟ್ಟವಾಗಿತ್ತು. ಎರಡು ದಶಕಗಳ ಅಂತಿಮ ಘಟ್ಟ ಈ ಮಾರ್ಗ ದೇಶದ ಅತ್ಯಂತ ಪ್ರಭಾವಶಾಲಿ ಕಾರ್ಮಿಕ ವರ್ಗದ ಆಂದೋಲನವನ್ನು ಕಟ್ಟುವ ಕಾರ್ಯಾ ಚರಣೆಯಾಗಿ ಅರಳಿದ ಸಮಯ.

'ಅಕ್ಟೋಬರ್ ಕ್ರಾಂತಿಯೆದುರು ಸೀಮೆಎಣ್ಣೆಯೊಂದು ಪ್ರಶ್ನೆಯೇ?'

ಇತಿಹಾಸದ ಪುಟಗಳಿಂದ

ಎಸ್.ವೈ. ಗುರುಶಾಂತ್

ಸೋವಿಯತ್ ಅಧಿಕಾರ ಹಿಡಿಯುವ ಹೋರಾಟ ಉಚ್ಛ್ರಾಯ ಸ್ಥಿತಿಯಲ್ಲಿರು ವಾಗ ನಡೆದ ಈ ಒಂದು ಘಟನೆ ತುಂಬಾ ಸಣ್ಣದೆಂದೇ ಹೇಳಬಹುದು. ಆದರೆ ಒಂದು ಐತಿಹಾಸಿಕ ಸಂದರ್ಭದಲ್ಲಿ ಅದನ್ನು ಅರ್ಥೈಸಿದಾಗ ಅದಕ್ಕೊಂದು ಮಹತ್ವಉಂಟು. ಜನ ಸಮುದಾಯದ ಮೇಲೆ ಗಾಢವಾಗಿ ಪರಿಣಾಮದ ಮುದ್ರೆ ಯೊತ್ತಿದ ಈ ಘಟನೆಯಾದರೂ ಏನು?

ಪ್ರಾಂತೀಯ ಸರ್ಕಾರ ಅಧಿಕಾರ ವಹಿಸಿಕೊಂಡು ಎರಡೋ ಅಥವಾ ಮೂರು ದಿನಗಳಿರಬೇಕು. ನರ್ವ ಜಿಲ್ಲೆಯ ಪೆಟ್ರೋ ಗ್ರಾಡ್‌ನಲ್ಲಿ ಕ್ರಾಂತಿಕಾರಿಗಳಿದ್ದ ಕಛೇರಿ ಯತ್ತ ಕಾರ್ಮಿಕನೊಬ್ಬ ನಡೆಯುತಿದ್ದ. ಆತನ ಕೈಯಲ್ಲೊಂದು 'ಸೀಮೆಎಣ್ಣೆ'ಯ ಡಬ್ಬವಿತ್ತು. ಬಾಗಿಲ ಬಳಿ ಬಂದಾಗ ಸಂಗಾತಿಗಳು ತಡೆದು ನಿಲ್ಲಿಸಿ ವಿಚಾರಿಸಿ ದರು. ತನ್ನ ಹೆಸರು ಸರ್ಗೆಯೇವ್‌ನೆಂದೂ, ತಾನು ಪುಟಿನೋವ ಕಾರ್ಖಾನೆಯಿಂದ ಬಂದಿದ್ದು ತಮ್ಮ ಹಾಸ್ಟೆಲ್‌ನಲ್ಲಿ ಹಲವಾರು ದಿನಗಳಿಂದಲೂ ರಾತ್ರಿಯಲ್ಲಿ ಬೆಳಕನ್ನೇ ಕಂಡಿಲ್ಲವೆಂದೂ ಅದಕ್ಕಾಗಿ ಸೀಮೆಎಣ್ಣೆ ಬೇಕಾಗಿದ್ದು ಸಂಗಾತಿ ಇಲಿಚ್ (ಲೆನಿನ್) ರವರನ್ನು ಕಾಣ ಬೇಕಿದೆಯೆಂದ.

ಲೆನಿನ್‌ರವರು ಕಛೇರಿಯ ಕೋಣೆ ಯೊಂದರಲ್ಲಿದ್ದರು. ಅವರೊಂದಿಗಿದ್ದ ಹಲವು ಸಂಗಾತಿಗಳೊಂದಿಗೆ ಗಂಭೀರವಾದ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದರು. ಅವರನ್ನೂ ಕಾಣಲು ಅವಕಾಶ ಮಾಡಿ ಕೊಡುವುದು ಅಸಾಧ್ಯವೆಂದು ಸೆಂಟ್ರಿ ತಿಳಿಸಿದ. ಆದರೆ ಇದನ್ನು ಆ ಕಾರ್ಮಿಕ ಲಕ್ಷ್ಯಕ್ಕೆ ತೆಗೆದುಕೊಂಡಂತೆ ಕಾಣಲಿಲ್ಲ. ಅವರನ್ನೂ ಭೇಟಿಯಾಗಲೇ ಬೇಕೆಂದು ಪಟ್ಟು ಹಿಡಿದ. "ಬಿರುಗಾಳಿ"ಯಂತೆ ಸೆಣಸಿ ಅರಮನೆಯನ್ನು ವಶಪಡಿಸಿಕೊಂಡ ನಾವು ಒಂದಿನಿಂತು ಬೆಳಕಿನ ಕಿರಣ ಕಾಣದೇ ಜೀವಿಸುವುದಾದರೂ ಹೇಗೆ? ಇಲ್ಯಿಚ್‌ರನ್ನು ಕಂಡೇ ಬರಬೇಕೆಂದು ಕಾರ್ಮಿಕ ಬಂಧುಗಳು ಹೇಳಿಕಳಿಸಿದ್ದಾರೆ. ಸೀಮೆಎಣ್ಣೆಯಿಲ್ಲದೇ ನಾನಂತೂ ಹಿಂತಿರುಗಲಾರೆ ಎಂದ ಸೆರ್ಗೆಯೋವ್. ತುಂಬಾ ಜಿಗುಟು ಮನುಷ್ಯನನ್ನೇ ತಮ್ಮ ರಾಯಭಾರಿಯನ್ನಾಗಿ ಆರಿಸಿಕೊಂಡಿದ್ದಾ ರೆಂದು ಭದ್ರತಾ ನಿರತ ಸಂಗಾತಿಗಳು ಮಾತನಾಡಿಕೊಂಡರು. ನಿನಗಷ್ಟು ಅನಿವಾರ್ಯವಿದ್ದರೆ ಒಳಗೆ ಹೋಗಬಹು ದೆಂದರು.

ಆರನೆಯ ನಂಬರಿನ ಕೋಣೆಯಲ್ಲಿ ಲೆನಿನ್ ಇದ್ದಾರೆಂದು ತಿಳಿದು ಆ ಕಡೆ ಹೆಜ್ಜೆ ಹಾಕಿದ. ಕೋಣೆ ಸಮೀಪಿಸು ತ್ತಿದ್ದಂತೆಯೇ ಒಳಗಿನ ಮಾತುಗಳು ಕೇಳಿಸತೊಡಗಿದವು. ಸೆರ್ಗೆಯೇವ್ ಕ್ಷಣ ಕಾಲ ನಿಂತ. ಅವರು ಕ್ರಾಂತಿಯರಕ್ಷಣೆ ಎದುರು ತೊಡರುಗಳು, ಜಾಗತಿಕವಾಗಿ ಇದನ್ನೂ ವಿಸ್ತರಿಸುವ ಬಗ್ಗೆ ಹಾಗೂ ವಿಶ್ವದ ಕಾರ್ಮಿಕವರ್ಗ ಇದಕ್ಕೆ ಸೌಹಾರ್ದತೆಯಿಡಿ ಆಣಿ ನೆರೆಸುವ ಬಗ್ಗೆ, ಮುಂತಾಗಿ ಚರ್ಚಿಸುತ್ತಿದ್ದರು. 'ಈ ಸ್ಥಿತಿಯಲ್ಲಿ ಅವರಿಗೆ ತೊಂದರೆ ಕೊಡುವುದೇ' ಎಂದು ಕ್ಷಣಕಾಲ ಚಿಂತಿತನಾದ. ಆದರೆ ಸಮಸ್ಯೆ ಕೊರೆಯುತ್ತಿತ್ತು.

'ಎರಡು ಸೆಕೆಂಡುಗಳು ಮಾತ್ರವೇ ತಾನು ಇಲಿಚ್‌ರನ್ನು ಕಾಣಬೇಕೆಂದ ಸೆರ್ಗೆಯೇವ್ ತಿಳಿಸಿದ. ಆದರೆ ಅದು ಸುಲಭವಿರಲಿಲ್ಲ. ಸ್ವಲ್ಪ ಬಿರುಸಿನ ಈ ಒಂದು ಚಿಕ್ಕ ಚರ್ಚೆಯನ್ನು ಗಮನಿಸಿದ ಲೆನಿನ್ ತಾವೇ ಈ ಕಡೆ ಬಂದರು. ಏನೆಂದು ವಿಚಾರಿಸಿದರು. 'ತಾವೆಲ್ಲಾ ಕಗ್ಗತ್ತಲಿನಲ್ಲಿ ಜೀವಿಸುತ್ತಿದ್ದೇವೆಂದೂ, ಏನಾದರೂ ಮಾಡಿ ಸೀಮೆಯೆಣ್ಣೆಯನ್ನು ವ್ಯವಸ್ಥೆಗೊಳಿಸಬೇಕೆಂದು ವಿನಂತಿಸಿದ.

ಈ ಮಾತುಕತೆ ನಡೆದಿರುವಾಗಲೇ ಒಳಗಿದ್ದ ಗುಂಗುರು ಕೂದಲಿನ ಸಂಗಾತಿ ಯೊಬ್ಬ 'ಏನು ಇಲ್ಯಿಚ್, ಇಷ್ಟೊಂದು ಸಿಕ್ಕುಸಿಕ್ಕಾದ ಸಮಸ್ಯೆಗಳ ಬಿಸಿಯಲ್ಲಿ ಆ ಸಣ್ಣ ಸಮಸ್ಯೆಯೇ ನಿಮಗೆ ಪ್ರಮುಖ ವಾಯಿತೆ? ಇದೊಂದು ನಮಗೆ ಅರ್ಥ ವಾಗುವುದಿಲ್ಲ' ಸ್ವಲ್ಪ ಗಡುಸಾಗಿಯೇ ಹೇಳಿದ. ಇವೆಲ್ಲವುಗಳನ್ನು ಬಹಳ ಜಾಗ್ರತೆ ಯಿಂದ ಸೆರ್ಗೆಯೋವ್ ಗಮನಿಸುತ್ತಿದ್ದ. ಲೆನಿನ್‌ರವರು ಸೀದಾ ಒಳಗೆ ಹೋದವರೇ ಬಂದು ಚೀಟಿಯನ್ನು ತುರ್ತಾಗಿ ಬರೆದು ಆತನ ಕೈಗಿತ್ತರು. ವಿಳಾಸವೊಂ ದನ್ನು ವಿವರಿಸಿ ಹೇಳಿ ಅಲ್ಲಿ ಪೆಟ್ರೋವ್ ಎಂಬ ಸಂಗಾತಿಯೂ ಸೀಮೆಎಣ್ಣೆ ಒದಗಿಸುವನೆಂದು ಹೇಳಿ ಒಳನಡೆದರು.

ತುಂಬಾ ಸಂತೋಷಗೊಂಡ ಸೆರ್ಗೆ ಯೋವ್ ಲೆನಿನ್‌ಗೆ ಹೃದಯಪೂರ್ವಕವಾಗಿ ವಂದನೆಗಳನ್ನು ಹೇಳಬೇಕೆಂದುಕೊಂಡ. ಆದರೆ ಈಗಾಗಲೇ ಅವರ ಅಮೂಲ್ಯ ಸಮಯ ತಾನು ಬಳಸಿಕೊಂಡದ್ದರಿಂದ ಬೇಡವೆಂದು ಮನಸ್ಸಿನಲ್ಲೇ ಧನ್ಯವಾದ ಗಳನ್ನು ಹೇಳಿಕೊಳ್ಳುತ್ತಾ ಮೆಟ್ಟಲು ಇಳಿಯತೊಡಗಿದ.

ಒಳಗಿನ ಮಾತುಗಳು ಮತ್ತೇ ಕೇಳ ತೊಡಗಿದವು. ಲೆನಿನ್ ಅವರೇ ಹೇಳು ತ್ತಿದ್ದರು. "ಸಂಗಾತಿಗಳೇ, ನಾವು ಅತ್ಯಂತ ನಿರ್ಣಾಯಕ ಪ್ರಶ್ನೆಗಳ ಬಗ್ಗೆ ಚರ್ಚಿಸು ತ್ತಿದ್ದೇವೆ ನಿಜ. ಒಂದು ಕ್ಯಾನ್ ಸೀಮೆ ಎಣ್ಣೆ ಪೂರೈಸುವುದು ಭಾರೀ ಮಹತ್ವ ದ್ದಾಗಿರಲಿಕ್ಕಿಲ್ಲ. ಆದರೆ, ಅದು ಜನತೆ ಯನ್ನು ಅತೀವವಾಗಿ ಭಾಧಿಸುತ್ತಿರುವ ಪ್ರಶ್ನೆಯದು. ಕ್ಷಣಕಾಲವಾದರೂ ದೀಪದ ಬೆಳಕಿಲ್ಲದೇ ಅವರು ಬಾಳಬೇಕೆಂದು ಭಾವಿಸುವುದಾದರೂ ಹೇಗೆ? ಈ ಅಕ್ಟೋಬರ್ ಮಹಾನ್‌ಕ್ರಾಂತಿ ಈ ಕಠಿಣ ಪರಿಶ್ರಮ ಅವರಿಂದಲ್ಲವೇ? ಅದು ಕಾರ್ಮಿಕ ವರ್ಗಕ್ಕಲ್ಲದೇ ಮತ್ಯಾರಿಗೆ? ಈ ಸಣ್ಣ ಸಮಸ್ಯೆ ನೀಗದಿದ್ದರೆ ಕ್ರಾಂತಿಗೇನಿದೆ ಅರ್ಥ..." ಲೆನಿನ್ ತುಂಬಾ ತಾಳ್ಮೆಯಿಂದ ತೀಕ್ಷ್ಣವಾಗಿ ವಿವರಿಸುತ್ತಿದ್ದರು. ಇದನ್ನು ಕೇಳಿಸಿಕೊಂಡ ಸರ್ಗೆಯೇವ್‌ನಲ್ಲಿ ಭಾವ ವೇಶದ ಬುಗ್ಗೆಗಳೆದ್ದವು. "ಬಂದಿದ್ದೇನೋ ಸೀಮೆಎಣ್ಣೆಗಾಗಿ ಆದರೆ ಪಡೆದದ್ದು...." ಇವೆಲ್ಲವನ್ನೂ ಸಣ್ಣ ಸ್ನೇಹಿತರಗೆಲ್ಲಾ ಹೇಳಬೇಕೆಂದು ಹೆಜ್ಜೆ ತೀವ್ರಗೊಳಿಸಿದ. ನಾಯಕತ್ವ ಜನಪಾತಳಿಯಲ್ಲಿ ಇಳಿದು. ವ್ಯವಹರಿಸಬೇಕೆಂಬುದಕ್ಕೆ ಒಂದು ಉಜ್ವಲ ನಿದರ್ಶನವಿದು.

ಕಾಮ್ರೇಡ್ ಬಿ.ಟಿ.ಆರ್.ಗೆ ಶ್ರದ್ಧಾಂಜಲಿ

ಮಂಗಳೂರು

ಸಾವಿರ ಗಟ್ಟಲೆ ಕಾರ್ಮಿಕರು ಕಪ್ಪು ಬ್ಯಾಡ್ಜ್ ಧರಿಸಿ ಮೌನ ಮೆರವಣಿಗೆ ನಡೆ. ಶ್ರದ್ಧಾಂಜಲಿ ಸಭೆಯಲ್ಲಿ ಪಾಲ್ಗೊಂಡರು ಈ ಸಭೆಯಲ್ಲಿ, ಸಿಪಿಐ (ಎಂ) ಜಿಲ್ಲಾ ಸಮಿತಿ ಸದಸ್ಯ ಕೆ. ಶಂಕರ, ಸಿಐಟಿಯು ದ.ಕ. ಜಿಲ್ಲಾ ಸಮಿತಿ ಅಧ್ಯಕ್ಷರಾದ ಕೆ. ಮೂಸಬ್ಬ, ಸಿಐಟಿಯು ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಬಿ. ಮಾಧವ, ಸಿ.ಪಿ.ಐ.(ಎಂ) ದ.ಕ. ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕೆ.ಆರ್. ಶ್ರಿಯಾನ್ ಮುಂತಾದವರು ಉಪಸ್ಥಿತರಿದ್ದು ಈ ಸಭೆಯನ್ನು ಯಶಸ್ವಿಯಾಗಿ ನಡೆಸಿ ಕೊಟ್ಟರು. ಈ ಸಭೆಯಲ್ಲಿ ಅಧ್ಯಕ್ಷರು ಮಂಡಿಸಿದ ಸಂತಾಪ ಸೂಚಕ ನಿರ್ಣಯವನ್ನು ಅಂಗೀಕರಿಸಿ ಸಭೆಯು ಎರಡು ನಿಮಿಷಗಳ ಮೌನವನ್ನು ಆಚರಿಸುವ ಮೂಲಕ ಅಗಲಿದ ನಾಯಕನಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿತು.

ಬಂಟ್ವಾಳ

ಕಾಂ॥ ಬಿ.ಟಿ.ಆರ್. ರವರ ನಿಧನದ ಸುದ್ದಿ ಕೇಳಿ ಬಂಟ್ವಾಳದಲ್ಲಿ ನೂರಾರು ಮಂದಿ ಸಿ.ಪಿ.ಐ.(ಎಂ)ನ ಅನುಯಾಯಿಗಳು ಶೋಕ ಮೆರವಣಿಗೆ ನಡೆಸಿ ಸಾರ್ವಜನಿಕ ಸಭೆಯೊಂದನ್ನು ಜರುಗಿಸಿದರು. ಈ ಸಭೆಯಲ್ಲಿ ಬಂಟ್ವಾಳ ತಾಲ್ಲೂಕಿನ ಮುಖಂಡರುಗಳಾದ, ಶ್ರೀ ಬಿ. ವಾಸು ಗಟ್ಟಿ, ಶ್ರೀ ಬಿ.ಹೂವಯ್ಯ, ಬಂಗೇರ ಮುಂತಾದವರು ಮಾತನಾಡಿ. ಕಾಂ॥ ಬಿ.ಟಿ.ಆರ್. ಹಾಕಿಕೊಟ್ಟ ಮಾರ್ಕ್ಸ್‌ವಾದಿ ಲೆನಿನ್‌ವಾದಿ ಪಥವನ್ನು ಅನುಸರಿಸುವಂತೆ ಕರೆ ನೀಡಿದರು.

ಬಂಟ್ವಾಳ ತಾಲ್ಲೂಕಿನ ಡಿ.ವೈಎಫ್.ಐ. ಘಟಕವು ತೀವ್ರ ಸಂತಾಪ ವ್ಯಕ್ತಪಡಿಸಿದೆ. ತಾ। ೮-೪-೯೦ ರಂದು ಶ್ರೀ ಜನಾರ್ಧನ ಕುಲಾಲ್‌ರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕಾಂ॥ ಬಿ.ಟಿ.ಆರ್. ಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

ಧಾರವಾಡ

ದಿನಾಂಕ ೯-೪-೯೦ ರಂದು ಧಾರವಾಡದ ವಿಧ್ಯಾವರ್ಧಕ ಸಂಘದಲ್ಲಿ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಕಾಂ॥ ಬಿ.ಟಿ.ಆರ್. ರವರಿಗೆ ಶ್ರದ್ಧಾಂಜಲಿ ಅರ್ಪಿಸಲು ಸಾರ್ವಜನಿಕ ಸಭೆಯನ್ನು ಕರೆಯಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಕಾಂ. ಎ.ಎನ್. ದೇಶಪಾಂಡೇಯವರು ವಹಿಸಿದ್ದರು. ಈ ಸಭೆಯಲ್ಲಿ ಸಿಪಿಐ(ಎಂ) ಪಕ್ಷದ ಸದಸ್ಯರು, ಹಿತೈಷಿಗಳೂ, ಮಿತ್ರ ಪಕ್ಷಗಳಾದ ಸಿಪಿಐ ಮತ್ತು ಜನತಾದಳದ ಪ್ರತಿನಿಧಿಗಳು, ಸಿ.ಐ.ಟಿ.ಯು, ಎ.ಐ.ಟಿ.ಯು.ಸಿ. ಡಿ.ವೈ.ಎಫ್.ಐ. ಎಸ್.ಎಫ್.ಐ. ಎ.ಐ.ಡಿ.ಡಬ್ಲ್ಯೂ.ಎ. ಎ.ಐ.ಎಸ್.ಎಫ್. ಸಮುದಾಯ, ಇಪ್ಟಾ ಮುಂತಾದ ಸಾಮೂಹಿಕ ಸಂಘಟನೆಗಳು, ಹಾಗೂ ವಿಮಾ, ಪ್ಲಾಯವುಡ್, ಮೈಸೂರ್ ಕಿರ್ಲೊಸ್ಕರ್, ಬೀಡಿ ಮುಂತಾದ ಕಾರ್ಮಿಕ ಸಂಘಟನೆಗಳೂ ಭಾಗವಹಿಸಿದ್ದವು.

ಭಾರತದಲ್ಲಿ ಪ್ರಜಾಪ್ರಭುತ್ವವಾದಿ ಹೋರಾಟ ನಿರ್ಣಾಯಕ ಹಂತದಲ್ಲಿರುವಾಗ ಕಾಂ. ಬಿ.ಟಿ.ಆರ್. ಅಗಲುವಿಕೆ ಇನ್ನಷ್ಟು ಆಘಾತ ಉಂಟುಮಾಡಿದೆ ಎಂದು ಸಭೆ ಅಭಿಪ್ರಾಯ ಪಟ್ಟಿತು. ಕಾಂ. ಬಿ.ಟಿ.ಆರ್. ರವರು ತಮ್ಮ ತಾರುಣ್ಯದಿಂದ ಎಂಬತ್ತೈದು ವರ್ಷ ಪ್ರಾಯದವರೆಗಿನ ದೀರ್ಘ ಕಾಲಾವಧಿಯಲ್ಲಿ ಯಾವ ಧ್ಯೇಯೋದ್ದೇಶಗಳಿಗೆ ಜೀವನಪರ್ಯಂತ ಹೋರಾಡಿದರೋ, ಆ ಆದರ್ಶಗಳಿಗಾಗಿ ನಾವು ನಮ್ಮ ಐಕ್ಯ ಹೋರಾಟವನ್ನು ಮುಂದುವರಿಸಲು, ಭಾರತದಲ್ಲಿ ಶೋಷಣಾರಹಿತ ಸಮಾಜವಾದಿ ಸಮಾಜವನ್ನು ತರಲು ದೃಢ ನಿಶ್ಚಯ ಮಾಡೋಣ ಎಂದು ಸರ್ವಾನುಮತದಿಂದ ಸಭೆ ನಿರ್ಧರಿಸಿತು.

ಈ ಸಭೆಯಲ್ಲಿ ಸಂಗಾತಿಗಳಾದ, ಬಿ.ಟಿ. ಪಡಕಿ (ಜನತಾದಳ), ಸಿದ್ಧನಗೌಡ ಪಾಟೀಲ (ಸಿಪಿಐ), ಎಂ.ಕೆ. ದೇಶಪಾಂಡೆ (ವಿಮಾ ನೌಕರರ ಸಂಘ), ವಿ.ಬಿ. ಪೂಜಾರ್ (ಸ್ವಾತಂತ್ರ ಹೋರಾಟಗಾರ), ಕೆ.ಪಿ. ಜೋಷಿ (ಸಿಐಟಿಯು), ಸಿ.ಆರ್. ಭಟ್, (ಸಮುದಾಯ), ಸುರೇಶ ತಾಂಡೇಲ್ (ಎಸ್.ಎಫ್.ಐ). ಸಾದಿಕ್ ಸಾದಾಗರ್ (ಡಿವೈಎಫ್‌ಐ). ಪಾರ್ವತಿ ಕಲಾಲ್ (ಮಹಿಳಾ ಸಂಘಟನೆ). ಮತ್ತು ಕಾಂ. ವಿ.ಎಸ್. ದೇಶಪಾಂಡೆ ಮಾತನಾಡಿ, ಅವರ ಕೊಡುಗೆಯನ್ನು ಮಾರ್ಗದರ್ಶನವನ್ನು ನೆನೆಸಿದರು.

ಬೆಂಗಳೂರು

ಬಿ.ಟಿ.ಆರ್.ರವರಿಂದ ನೇರ ಮಾರ್ಗದರ್ಶನವನ್ನು ಹಲವು ಬಾರಿ ಪಡೆಯುವ ಅವಕಾಶ ಪಡೆದಿದ್ದ ಬೆಂಗಳೂರಿನ ಕಾರ್ಮಿಕರು, ನೌಕರರು, ಏಪ್ರಿಲ್ ೧೧ ರಂದು ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಸಭೆ ಸೇರಿ ದುಡಿಯುವ ವರ್ಗದ ಮಹಾನ್ ಚಿಂತಕ ಧೀಮಂತ ಮುಖಂಡರಿಗೆ ತಮ್ಮ ಶ್ರದ್ಧಾಂಜಲಿ ಅರ್ಪಿಸಿದರು. ಸಿ.ಪಿ.ಐ.(ಎಂ) ಹಾಗೂ ಸಿ.ಐ.ಟಿ.ಯುವಿನ ಬೆಂಗಳೂರು ಜಿಲ್ಲಾ ಸಮಿತಿಗಳು ಏರ್ಪಡಿಸಿದ್ದ, ಈ ಸಭೆಯಲ್ಲಿ ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿ ಪಿ. ರಾಮಚಂದ್ರರಾವ್ ಇತರ ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯರುಗಳಾದ ಹಾಗೂ ಸಿ.ಐ.ಟಿ.ಯು ಮುಖಂಡರುಗಳಾದ ವಿ.ಜೆ.ಕೆ. ನಾಯರ್ ಮತ್ತು ಎಸ್. ಸೂರ್ಯನಾರಾಯಣರಾವ್‌ರವರಲ್ಲದೆ. ಸಿ.ಪಿ.ಐ.ನ ರಾಜ್ಯ ಕಾರ್ಯದರ್ಶಿ ಎಂ.ಎಸ್. ಕೃಷ್ಣನ್ ಹಾಗೂ ಬಿ.ಜೆ.ಪಿ.ಯ ಒಬ್ಬ ಪ್ರಮುಖ ರಾಜ್ಯ ಮುಖಂಡ ಎಸ್.ವಿ ಶ್ರೀಕಾದ್ರಿಯವರು ಕಾ.ಬಿ.ಟಿ.ಆರ್. ರವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ಮಾತನಾಡಿದರು.

ಕೆ.ಜಿ.ಎಫ್.

ದಿನಾಂಕ ೮-೪-೯೦ರಂದು ರಾಬರ್ಟ್‌ಸನ್ ಪೇಟೆಯಲ್ಲಿ ಕಾಂ। ಬಿ.ಟಿ.ಆರ್. ರವರಿಗೆ ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಕಾಂ। ಟಿ.ಎಸ್.ಮಣಿ ವಹಿಸಿದ್ದರು. ಈ ಸಭೆಯಲ್ಲಿ ಕಾಂ। ಅಬ್ದುಲ್ ಮಜೀದ್, ಜಿಲ್ಲಾ ಸಮಿತಿಸದಸ್ಯರು, ಕಾಂ। ಸವರಿದಾಸ್, ಜಿಲ್ಲಾ ಸಮಿತಿ ಸದಸ್ಯರು ಕಾಂ। ಜಿ.ಅರ್ಜುನ್, ಜಿಲ್ಲಾ ಸಮಿತಿ ಸದಸ್ಯರು ಮಾತನಾಡಿದರು. ಕಾಂ। ಆದಿಶೇಷನ್ ಸ್ವಾಗತಿಸಿ, ಕಾಂ। ಪಿ.ಶ್ರೀನಿವಾಸನ್ ವಂದಿಸಿದರು.

ರಾಮದುರ್ಗ

ದಿನಾಂಕ ೮-೪-೧೯೯೦ ರಂದು ಕಾಮ್ರೇಡ್ ಬಿ.ಟಿ.ರಣದಿವೆ ರವರ ನಿಧನಕ್ಕೆ ಸಿ.ಪಿ.ಐ(ಎಂ) ರಾಮದುರ್ಗ ಘಟಕ ಶ್ರದ್ಧಾಂಜಲಿ ಹಾಗು ಸಂತಾಪ ಸೂಚಕ ಸಭೆಯನ್ನು ಏರ್ಪಡಿಸಿತ್ತು.

ದಿನಾಂಕ ೭ರಂದು ಮುಂಜೈನಲ್ಲಿ ನಡೆದ ಕಾಂ। ಬಿ.ಟಿ.ಆರ್ ರವರ ಅಂತ್ಯಸಂಸ್ಕಾರಕ್ಕೆ ವಿ.ಸಿ.ಕುಲಕರ್ಣಿ ಹಾಗು ಮತ್ತಿತರ ಸಂಗಾತಿಗಳು ಪಾಲ್ಗೊಂಡಿದ್ದರು.

ಶಿರಗುಪ್ಪ

ಡಿ.ವೈಎಫ್.ಐ. ರಾಜ್ಯ ಕಾರ್ಯದರ್ಶಿಗಳಾದ ಕಾಂ। ಎಸ್. ಶಿವರಾಂ, ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿಗಳಾದ ಕಾಂ॥ ಎಲ್. ಮಂಜಾನಾಥ್‌ರ ಮುಖಂಡತ್ವದಲ್ಲಿ, ಮೂರು ನಿಮಿಷ ಮೌನಾಚರಣೆ ಮಾಡುವುದರೊಂದಿಗೆ, ಅಗಲಿದ ಕ್ರಾಂತಿಕಾರಿ ನಾಯಕನಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.



ಜೀವನವೆಲ್ಲಾ ಉರಿದೀ ಜ್ವಾಲೆ

ಪು ೧ ರಿಂದ

ಸಿ.ಪಿ.ಐ. ನ ಎ.ಬಿ.ಬರ್‌ದಾನ್, ಜನತಾದಳದ ಮೃಣಾಲ್ ಗೋರೆ, ಕಾಂಗ್ರೆಸ್‌ನ ಎನ್. ಎಂ. ಕಂಬ್ಳೆ.

ಮಹಾರಾಷ್ಟ್ರದ ರೈತ - ಕಾರ್ಮಿಕ ಪಕ್ಷ.ಆರ್.ಎಸ್.ಪಿ., ಡಿ.ಎಂ.ಕೆ, ಲಾಲ್ ನಿಶಾನ್ ಪಕ್ಷದ ಪ್ರತಿನಿಧಿಗಳು ಕೇಂದ್ರ ಕಾರ್ಮಿಕ ಸಂಘಟನೆಗಳ ಘಟಕ, ಎಚ್.ಎಂ.ಎಸ್., ಎಚ್.ಎಮ್.ಕೆ.ಪಿ., ಬಿ.ಎಮ್.ಎಸ್. ಹಾಗೂ ಸಿ.ಐ.ಟಿ.ಯುನ ಪ್ರಭಾಕರ್ ಸಾಂಜ್‌ಗಿರಿ-ಶೋಕತಪ್ತ ಸಂದೇಶ ನೀಡಿದರು.

ಬಿ.ಟಿ.ಆರ್‌ರವರ ಏಕಮಾತ್ರ ಪುತ್ರ ಉದಯ್ ಬಳಿಯೇ ಇದ್ದರೂ ಬಿ.ಟಿ.ಆರ್ ರವರ ಇಚ್ಛೆಯ ಪ್ರಕಾರ ಎಂದೆಂದೂ ಪಕ್ಷದ ಆಸ್ತಿಯಾಗಿಯೇ ಇದ್ದ ಕಾಮ್ರೇಡ್ ಬಿ.ಟಿ.ಆರ್ ಅವರ ಪಾರ್ಥಿವ ಶರೀರಕ್ಕೆ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ। ಇ.ಎಂ.ಎಸ್. ಅಗ್ನಿಸ್ಪರ್ಶ ಮಾಡಿದರು.

ಭುಗಿಲೆದ್ದಿತು ಭೀಷಣ ಬೆಂಕಿಯ ಜ್ವಾಲೆ
ಜೀವನವೆಲ್ಲಾ ಉರಿಯುತ್ತಲೇ ಇದ್ದ
ನಿಗಿ ನಿಗಿ ಕೆಂಡವ ಸಂದಿಸುವ ಜ್ವಾಲೆ
ಮುಗಿಲಿಗೇರಿತು ನೆರೆದ ಜನಗಳ ಶೋಕ
ನೆರೆದುಮ್ಮಳಿಸಿತು ಬಾಂಬೆಯ ಕಡಲು.

ಕಮ್ಯುನಿಸ್ಟ್ ಚಳುವಳಿಯಲ್ಲಿ ಮಹಾನ್ ಕಂದರ

ಕಾಂ। ಇ.ಎಂ.ಎಸ್.

ನಾವಿಂದು ಕಾಮ್ರೇಡ್ ಬಿ.ಟಿ.ಆರ್‌ರವರನ್ನು ಕೊನೆಯದಾಗಿ ಬೀಳ್ಕೊಡುತ್ತಿದ್ದೇವೆ. ಹಲವು ದಶಕಗಳ ಕಾಲ ಕಟ್ಟಿದ ಕಮ್ಯುನಿಸ್ಟ್ ಚಳುವಳಿಯಲ್ಲಿ, ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ಶೂನ್ಯವೊಂದು, ಮಹಾನ್ ಕಂದರವೊಂದು ನಿರ್ಮಾಣವಾಗಿದೆ. ತುಂಬಲು ಸುಲಭವಲ್ಲದ ಶೂನ್ಯವದು.

ಬಿ.ಟಿ.ಆರ್ ಅವರನ್ನು ನಮ್ಮ ಹಿರಿಯಣ್ಣನಂತೆ ಕಾಣುತ್ತಿದ್ದೆವು ನಾವೆಲ್ಲ. ನವಭಾರತದ ನಿರ್ಮಾಣಕ್ಕಾಗಿ ದುಡಿಯುವ ಜನಗಳ ಮಹಾನ್ ಚಳುವಳಿಯನ್ನು ಕಟ್ಟುವಲ್ಲಿ ನಮ್ಮೊಡನೆ ಜತೆಯಾಗಿ ದುಡಿಯುತ್ತಿದ್ದ, ನಮಗೆಲ್ಲ ಮಾರ್ಗದರ್ಶನ ನೀಡುತ್ತಿದ್ದ ಬಿ.ಟಿ.ಆರ್ ಇನ್ನಿಲ್ಲ. ನಮ್ಮ ನಷ್ಟ ಎಷ್ಟೇ ಇದ್ದರು ಈ ಕ್ಷಣದಲ್ಲಿ ಹಲುಬುತ್ತ ಧೈರ್ಯಗೆಟ್ಟು ಕೂಡುವುದು ಬಿ.ಟಿ.ಆರ್ ರವರ ಧ್ಯೇಯಗಳಿಗೆ, ಯಾವ ಧ್ಯೇಯಗಳಿಗಾಗಿ ನಾವೆಲ್ಲಾ ದುಡಿದೆವೋ, ಸ್ವಲ್ಪ ಯಶಸ್ಸನ್ನೂ ಗಳಿಸಿದೆವೋ ಆ ಧ್ಯೇಯಗಳಿಗೆ ಸಲ್ಲದ ಕೆಲಸ. ಆ ಧ್ಯೇಯಗಳನ್ನು ಮುಂದೆ ಕೊಂಡೊಯ್ಯಲು ನಾವಿಂದು ಪಣತೊಡೋಣ. ನಮ್ಮ ದೇಶದಲ್ಲಿ ಬಲವಾದ ಕಾರ್ಮಿಕ ವರ್ಗದ, ಪ್ರಜಾಸತ್ತಾತ್ಮಕ ಜನತೆಯ ಚಳುವಳಿ ಕಟ್ಟಲು ದುಡಿಯೋಣ. ಇದೊಂದೇ ನಾವು ನಮ್ಮನ್ನಿಂದು ಅಗಲಿದ ನಾಯಕನಿಗೆ ನೀಡುವ ಅತ್ಯುತ್ತಮ ಕಾಣಿಕೆ."

ಇ.ಎಂ.ಎಸ್ ಪ್ರಶ್ನೋತ್ತರ

ಖಾಸಗೀಕರಣದಿಂದ ಕಾರ್ಮಿಕ ವರ್ಗದ ಆಳ್ವಿಕೆಯನ್ನು ಭದ್ರಪಡಿಸಲು ಸಾಧ್ಯವೇ? ಖಾಸಗಿ ಪದ್ಧತಿ ಉಳಿಸಿಕೊಂಡರೆ ವೈರುಧ್ಯಗಳು ಇಲ್ಲದಾಗುತ್ತವೆಯೇ? ಖಾಸಗಿ ಆಸ್ತಿಯ ಪದ್ಧತಿಯನ್ನು ಜಾರಿಗೊಳಿಸುವುದರಿಂದ ಶೋಷಕ ಶೋಷಿತರ ನಡುವಿನ ವೈರುಧ್ಯಗಳು ಹೆಚ್ಚುವುದಿಲ್ಲವೇ? ಹಾಗಾದರೆ ಸಮಾಜವಾದವನ್ನು ಪುಷ್ಟಿಗೊಳಿಸಲು ಕಮ್ಯುನಿಸಂಗೆ ಒಯ್ಯಲು ಹೇಗೆ ಸಾಧ್ಯ? ಸೋವಿಯತ್ ಅಧ್ಯಕ್ಷ ಮಿಖಾಯಿಲ್ ಗೋರ್ಬಚೆವ್‌ರವರು. ವಿಶ್ವದ ಎಲ್ಲ ಸಮಾಜವಾದಿ ರಾಷ್ಟ್ರಗಳಿಗೂ ಪಾರ್ಲಿಮೆಂಟರಿ ಪ್ರಜಾತಾಂತ್ರಿಕ ಮಾರ್ಗಕ್ಕೆ ಬರಲು ಕೇಳಿಕೊಂಡಿದ್ದಾರೆ. ಇದು ಸಮಾಜವಾದ ಹಾಗೂ ಕಮ್ಯೂನಿಸಂನ್ನ ಕೈಬಿಟ್ಟಂತಲ್ಲವೇ?

ಖಾಸಗಿ ಆಸ್ತಿ ಮತ್ತು ಸಮಾಜವಾದ

ಉತ್ತರ

ಹಲವು ಬಗೆಯ ಖಾಸಗಿ ಆಸ್ತಿಗಳಿವೆ. ಉದಾ: ಉಳುವವನೇ ಹೊಲದೊಡೆಯ ಎಂಬ ಘೋಷಣೆಯನ್ನೆ ತೆಗೆದುಕೊಳ್ಳುವ ಈ ಘೋಷಣೆ ಒಳಗೊಂಡಿರುವುದು ರೈತನ ಖಾಸಗಿ ಆಸ್ತಿಯಾಗಿ ಭೂಮಿಯನ್ನು ಉಪಯೋಗಿಸಲು ಮತ್ತು ಅನುಭವಿಸಲು ಇರುವ ಹಕ್ಕಲ್ಲವೇ? ಎಲ್ಲಾ ವರ್ಗದ ಜನತೆಗೂ ವಾಸಕ್ಕೆ ಸ್ವಂತವಾದ ಮನೆ ಒಂದು ವಿಧದ ಖಾಸಗಿ ಆಸ್ತಿಯಲ್ಲವೇ?

ಇದರಂತೆಯೇ, ವೈಯುಕ್ತಿಕವಾಗಿ ಉಪಯೋಗಿಸಬಹುದಾದ ಹಲವು ವಸ್ತುಗಳು ಸ್ವಂತವಾಗಿ ಇರಬೇಕೆಂಬ ಆಸೆ ಸಮಾಜವಾದಕ್ಕೆ ವಿರುದ್ಧವಲ್ಲ. ಪ್ರಮುಖವಾದ ಉತ್ಪಾದನೆಯ ಸಾಧನಗಳನ್ನು ಸಾರ್ವಜನಿಕ ಒಡೆತನದಲ್ಲಿರುವುದೇ ಹೊರತು ಉತ್ಪನ್ನಗಳನ್ನು. ಸಾರ್ವಜನಿಕ ಆಸ್ತಿಯನ್ನಾಗಿಸುವುದಲ್ಲ, ಸಮಾಜವಾದದ ತಿರುಳು.

ಈ ಸತ್ಯಾಂಶಕ್ಕೆ ವಿರುದ್ಧವಾದ ಚಿಂತನೆ ಸಮಾಜವಾದಿ ಚಳುವಳಿಯ ಒಳಗಡೆಯೇ ಇದೆ ಅದರ ನಗ್ನ ರೂಪ ಚೀನಾದ 'ಸಾಂಸ್ಕೃತಿಕ ಕ್ರಾಂತಿ'ಯ ಕಾಲದಲ್ಲಿ ರೂಪತಳೆದ ಕಮ್ಯೂನ್‌ಗಳು ಸಮಾಜವಾದದ ಎರಡನೇ ಘಟ್ಟ ಅಥವಾ ಕಮ್ಯೂನಿಸಂ ಎಂದು ಮಾರ್ಕ್ಸ್‌ಕರೆದಂತಹ ವಿಶಿಷ್ಟ ಸ್ಥಿತಿ ಚೀನಾದಲ್ಲಿ ತರುವ ಸಮಯವಾಗಿದೆ ಎಂಬ ದೃಷ್ಟಿಕೋನ ಚೀನೀ ನಾಯಕತ್ವಕ್ಕೆ ಇತ್ತು. ಇಲ್ಲಿಯವರೆಗೂ ತಲುಪದಿದ್ದರೂ ಈ ದೃಷ್ಟಿಕೋನದ ಇತರೆ ರೂಪಗಳು ಸೋವಿಯತ್ ಒಕ್ಕೂಟದಲ್ಲಿಯೂ. ಇತರೆ ಸಮಾಜವಾದಿ ರಾಷ್ಟ್ರಗಳಲ್ಲಿಯೂ ಪ್ರಕಟಗೊಂಡಿದ್ದವು. ಸೋವಿಯತ್ ಒಕ್ಕೂಟವೂ ಸೇರಿದಂತೆ ಸಮಾಜವಾದಿಗಳ ರಾಷ್ಟ್ರಗಳಲ್ಲಿ, ಇಂದು ನಡೆಯುತ್ತಿರುವುದು ಈ ತಪ್ಪುಗಳನ್ನು ತಿದ್ದಿಕೊಳ್ಳುವ ಕ್ರಮಗಳೇ ಆಗಿವೆ.

ಸೋವಿಯತ್ ಒಕ್ಕೂಟದಲ್ಲಿ ಈಗ ಮಂಡಿಸಲ್ಪಟ್ಟಿರುವ ಖಾಸಗಿ ಆಸ್ತಿಯ ಅಧಿನಿಯಮದ ವಿಶದಾಂಶಗಳನ್ನು 'ರಾಯಿಟರ್' ಎಂಬ 'ಸುದ್ದಿ ಸಂಸ್ಥೆ ಮಾಸ್ಕೋವಿನಿಂದ ಕಳುಹಿಸಿದ್ದನ್ನು 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯ ಫೆ. ೧೭ರಂದು ರವರದಿ ಮಾಡಿದೆ. ಅದರ ಪ್ರಸ್ತುತ ಭಾಗಗಳನ್ನು ಭಾಷಾಂತರಿಸಿ ಕೆಳಗೆ ಕೊಡಲಾಗಿದೆ.

"ಸೋವಿಯತ್ ಪಾರ್ಲಿಮೆಂಟಿನ ಮುಂದಿನ ಸಭೆ ಅಂಗೀಕರಿಸಲು ಉದ್ದೇಶಿಸುವ ಕರಡುನಿಯಮ ಜನತೆಯ ಖಾಸಗಿ ಆಸ್ತಿಯ ಹಕ್ಕಿಗೆ ಕಾನೂನು ಬದ್ಧವಾದ ತಳಹದಿ ಹಾಕುತ್ತದೆ.

ವಾಸಿಸಲು ಒಂದು ಮನೆ ಮುಂತಾದ ವೈಯುಕ್ತಿಕ ಉಪಯೋಗದ ವಸ್ತುಗಳು ಮಾತ್ರವಲ್ಲದೆ ಟ್ರಾಕ್ಟರ್‌ಗಳು, ಮತ್ತಿತರೆ ಬೇಸಾಯದ ಯಂತ್ರೋಪಕರಣಗಳು ಮುಂತಾದವುಗಳನ್ನು ಸ್ವಂತವಾಗಿ ಇಟ್ಟುಕೊಳ್ಳಲು ಈ ನಿಯಮ ಅನುವು ಮಾಡಿಕೊಡುತ್ತದೆ.

ಆದರೆ ಬೃಹತ್ ಪ್ರಮಾಣದ ಖಾಸಗಿ ಸಂಸ್ಥೆಗಳನ್ನು ವ್ಯಕ್ತಿಗಳ ಖಾಸಗಿ ಆಸ್ತಿಯನ್ನಾಗಿಸಲು ಒಪ್ಪುತ್ತಿಲ್ಲ. ಖಾಸಗಿಸಂಸ್ಥೆಗಳಲ್ಲಿ ಕಾರ್ಮಿಕರನ್ನು ಇಟ್ಟು ಕೆಲಸ ಮಾಡಿಸುವುದು ಎಂಬರ್ಥದ ಶೋಷಣೆಯನ್ನು ನಿಷೇಧಿಸಲಾಗಿದೆ". (ಒತ್ತು ನಮ್ಮದು)

ಅಲ್ಲದೆ, ಸರ್ಕಾರದ ಒಡೆತನಲ್ಲಿರುವ ಸಂಸ್ಥೆಗಳಲ್ಲಿ ಪಾಲುದಾರರನ್ನು ಸೇರಿಸುವ ಸಂಧರ್ಭಗಳಲ್ಲಿ, ಆ ಸಂಸ್ಥೆಗಳಲ್ಲಿರುವ ಕಾರ್ಮಿಕರಿಗೆ ಮಾತ್ರ ಪಾಲು ಕೊಡಬೇಕು. ಎಂದು ಸ್ಪಷ್ಟವಾಗಿ ವ್ಯವಸ್ಥೆಗೊಳಿಸಲಾಗಿದೆ.


ಪ್ರಶ್ನೆಯ ಕರ್ತೃ ತಿಳಿದಿರುವಂತೆ, ಸೋವಿಯತ್ ಒಕ್ಕೂಟದಲ್ಲಿ ನಿಯಂತ್ರಿತವಾದ ಖಾಸಗಿ ಆಸ್ತಿಯ ಒಡತನಕ್ಕೆ ಅನುಮತಿ ಇಲ್ಲ ಎಂಬ ಅಂಶ ಇದರಿಂದ ಸ್ಪಷ್ಟವಾಗುತ್ತಿಲ್ಲವೇ?

ಸ್ಪಷ್ಟವಾದ ಕೆಲವು ನಿಬಂಧನೆಗೊಳಪಟ್ಟು, ಪ್ರಮುಖ ಉತ್ಪಾದನೋಪಕರಣಗಳೆಲ್ಲವೂ ಸಾರ್ವಜನಿಕ ಒಡೆತನದಲ್ಲಿರುವುದು ಎಂಬರ್ಥದಲ್ಲಿರುವ ಸಮಾಜವಾದೀ ಆರ್ಥಿಕ ವ್ಯವಸ್ಥೆಯ ಚೌಕಟ್ಟಿನೊಳಗೇ ಖಾಸಗೀ ಒಡೆತನಕ್ಕೆ ಅನುಮತಿ ಕೊಡಲಾಗುತ್ತಿದೆ ಯಾತಕ್ಕಾಗಿ ಈ ಸುಧಾರಣೆಗಳು?

ಸಮಾಜವಾದಿ ಸಮಾಜದ ಒಡೆತನಕ್ಕೆ ಧಕ್ಕೆ ಉಂಟಾಗದಂತೆ ಉಪಭೋಗ ಸಾಮಗ್ರಿಗಳನ್ನು ಪರಿಮಿತ ಪ್ರಮಾಣದಲ್ಲಿ ಸಹ ಉತ್ಪಾದನೋಪಕರಣಗಳನ್ನು ಖಾಸಗಿಯಾಗಿ ಇಟ್ಟುಕೊಳ್ಳಲು ಪೌರರಿಗೆ ಅವಕಾಶವುಂಟು ಮಾಡುವುದಾದರೆ, ಉತ್ಪಾದನೆಯನ್ನು ಹೆಚ್ಚಿಸಲು ಅದು ಸಹಾಯಕವಾಗುತ್ತದೆ. ಅದೇ ರೀತಿ ಉತ್ಪಾದನೆಗಳ ಗುಣಮಟ್ಟವನ್ನೇರಿಸಲು ಅಥವಾ ಉತ್ಪಾದನಾರಂಗಗಳಲ್ಲಿ, ಕಾರ್ಯ ನಿರ್ವಹಿಸುವ ಪೌರರಿಗೆ ಪ್ರೇರಣೆಯೂ ಆಗುತ್ತದೆ. ಹೀಗೆ ರಾಷ್ಟ್ರದಾದ್ಯಂತ ಉತ್ಪಾದನಾರಂಗಗಳಲ್ಲಿ. ಕಾರ್ಯ ಉತ್ಪನ್ನಗಳು ಗುಣಮಟ್ಟ ಏರಿಕೆಯೂ ಆಗುತ್ತದೆ.

ಒಂದೊಂದು ಸಮಾಜವಾದಿ ರಾಷ್ಟ್ರಗಳಲ್ಲಿ ಒಂದೊಂದು ರೀತಿಯಲ್ಲಿ ಈ ಅವಶ್ಯಕತೆಗಳು ಪ್ರಕಟಗೊಳ್ಳುತ್ತಿವೆ. ಚೀನಾ ಒಂದು ಸಮಾಜವಾದಿ ರಾಷ್ಟ್ರವಾದರೂ, ಒಂದು ಅಭಿವೃದ್ಧಿಶೀಲ ರಾಷ್ಟ್ರವಾಗಿದೆ. ಅಲ್ಲಿಯ ಆರ್ಥಿಕ ವ್ಯವಸ್ಥೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಮಟ್ಟಕ್ಕೇರಬೇಕಾದರೆ, ವ್ಯಕ್ತಿಗತ ಚೀನೀಯರ ಲಾಭೇಚ್ಛೆಗೆ ಮಾನ್ಯತೆ ಕೊಡಬೇಕು. ಸೋವಿಯತ್ ಒಕ್ಕೂಟ ತಕ್ಕಮಟ್ಟಿಗೆ ಬೆಳೆದ ರಾಷ್ಟ್ರ. ಆದರೂ ಕಳೆದ ಕೆಲವು ವರ್ಷಗಳಿಂದ ಅಲ್ಲಿಯ ಬೆಳವಣಿಗೆಗಿಂತ ಆಷ್ಟೇ ಹಿಂದೆ ಬಿದ್ದಿದೆ. ಈ ಸ್ಥಿತಿಯನ್ನು ಕೊನೆಗೊಳಿಸಿ ಸೋವಿಯತ್ ಒಕ್ಕೂಟದ ಬೆಳವಣಿಗೆಯನ್ನು ಮುಂದುವರಿಸುವುದರ ಜೊತೆಗೆ ಉತ್ಪನ್ನಗಳ ಗುಣ ಮಟ್ಟವನ್ನೇರಿಸುವಂತೆ ಮಾಡಲು ಪ್ರಮುಖ ಉತ್ಪಾದನೋಪಕರಣಗಳೆಲ್ಲವೂ ಸಾರ್ವಜನಿಕ ಒಡೆತನದಲ್ಲಿ, ಎಂಬ ತತ್ವಕ್ಕೆ ಧಕ್ಕೆಯಾಗದಂತೆ ಖಾಸಗೀ ಆಸ್ತಿಯ ಹಕ್ಕಿಗೆ ಮನ್ನಣೆ ಕೊಡಬೇಕು.

[illegible]



ದುಡಿಯುವ ಜನಗಳ ಆಂದೋಲನ ತನ್ನದೇ ಪ್ರಭಾವ
ಬೆಳೆಸಿಕೊಂಡಿರುವ, ಇದರಿಂದಾಗಿ ವಿವಿಧ ಜನ ವಿಭಾಗಗಳ
ಆಕಾಂಕ್ಷೆಗಳಿಗೆ, ಸಮಸ್ಯೆಗಳಿಗೆ ದನಿಗೊಡುವ ಸಾಮೂಹಿಕ
ಸಂಘಟನೆಗಳು ಸಕ್ರಿಯವಾಗಿರುವ ತಾಲೂಕು ದಕ್ಷಿಣ ಕನ್ನಡ ಜಿಲ್ಲೆಯ
ಕುಂದಾಪುರ. ಇಲ್ಲಿಯ ಪುರಸಭೆಯಲ್ಲಿ ೧೯೫೪ ರಿಂದಲೂ ಪ್ರಾತಿನಿಧ್ಯ
ಪಡೆದಿರುವ ಎರಡುಬಾರಿ ಉಪಾಧ್ಯಕ್ಷ ಸ್ಥಾನ ಪಡೆದ ಸಿ.ಪಿ.ಐ(ಎಂ) ಈ
ಬಾರಿ ಜನತಾದಳದ ಅಹಂಭಾವದ ಕಾರ್ಮಿಕರ ವರ್ಗದ ಶಕ್ತಿಯನ್ನು
ಹೀಗಳೆಯುವ ನಿಲುವಿನಿಂದಾಗಿ ೧೯ ರಲ್ಲಿ ೧೭ ಸ್ಥಾನಗಳಲ್ಲಿ
ಸ್ಪರ್ಧಿಸುತ್ತಿದೆ.

-- ಕುಮಾರ್ ಕುಂದಾಪುರ

ಕುಂದಾಪುರ ಪುರಸಭಾ ಚುನಾವಣೆ

ಸವಾಲಾಗಿ ಪರಿಣಮಿಸಿರುವ ಸಿ.ಪಿ.ಐ(ಎಂ) ಸ್ಪರ್ಧೆ

ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕು ಕಾರ್ಮಿಕ ವರ್ಗ ತನ್ನದೇ ಆದ ಪ್ರಭಾವವನ್ನು ಹೊಂದಿರುವ ಸ್ಥಳ. ಹಲವಾರು ಏರಿಳಿತಗಳನ್ನು ಕಂಡರೂ ಗ್ರಾಮಾಂತರ ಪ್ರದೇಶಗಳಲ್ಲಿ ರೈತ ಸಂಘಟನೆ ಇಂದಿಗೂ ಪ್ರಭಾವಯುತವಾಗಿದೆ. ಪಾಳೆಗಾರಿ ದಬ್ಬಾಳಿಕೆ ದೌರ್ಜನ್ಯಗಳಿಗೆದುರಾಗಿ ಇಲ್ಲಿನ ಕಾರ್ಮಿಕ ರೈತ ಸಮುದಾಯ ನಡೆಸಿದ ಧೀರ ಚಳುವಳಿ ಪ್ರತಿ ಸವಾಲಿನ ಫಲವಾಗಿಯೇ ಪ್ರಜಾಪ್ರಭುತ್ವದ ಗಾಳಿ ಬೀಸಲಾರಂಭಿಸಿತು. ಡಿ.ವೈ.ಎಫ್.ಐ., ಎಸ್‌ಎಫ್.ಐ. ಎ.ಐ.ಡಿ. ಡಬ್ಲ್ಯು.ಎ., ಸಮುದಾಯ, ವಿಜ್ಞಾನ ಪರಿಷತ್ ಹೀಗೆ ಎಲ್ಲಾ ಸಾಮೂಹಿಕ ಸಂಘಟನೆಗಳೂ ಇಲ್ಲಿ ತಮ್ಮದೇ ಆದ ಪ್ರಭಾವವನ್ನು ಬೆಳಸಿಕೊಂಡಿವೆ. ಅಭಿಪ್ರಾಯ ರೂಪಿಸುವಲ್ಲಿ ಪಾಲುದಾರರಾಗಿವೆ.

ರಾಜ್ಯದ ತುಘಲಕ್ ದರ್ಬಾರಿನ ವೀರೇಂದ್ರ ಪಾಟೀಲರ ಎಡೆಬಿಡಂಗಿ ನಿರ್ಧಾರಗಳ ಫಲವಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಅನುಮಾನಾಸ್ಪದವಾಗಿರುವಾಗಲೇ ಮತ್ತೆ ಏಪ್ರಿಲ್ ೨೯ ರ ದಿನಾಂಕ ನಿಗದಿಯಾಗಿದೆ. ಕುಂದಾಪುರ ಪುರಸಭೆಯಲ್ಲಿ ೧೯ ಸ್ಥಾನಗಳಿದ್ದು ಸಿ.ಪಿ.ಐ.(ಎಂ) ಮೊದಲ ಬಾರಿಗೆ ೧೭ ಸ್ಥಾನಗಳಲ್ಲಿ ತನ್ನ ಅಭ್ಯರ್ಥಿಗಳನ್ನು ನಿಲ್ಲಿಸಿದ್ದು ಭೂಮಾಲಕ ಬಂಡವಾಳಶಾಹಿ ಪರ ಪಕ್ಷಗಳು ನಿಬ್ಬೆರಗಾಗುವ ಪರಿಸ್ಥಿತಿ ನಿರ್ಮಿಸಿದೆ. ಬದಲಾವಣೆ ಬಯಸುವ ನಾಗರೀಕರು ಪ್ರಗತಿಪರ ಶಕ್ತಿಗಳ ಪಕ್ಷವು ಸ್ವತಂತ್ರವಾಗಿ ಸ್ಪರ್ಧಿಸುತ್ತಿರುವುದನ್ನು ಸ್ವಾಗತಿಸಿದ್ದಾರೆ. ಈಗಾಗಲೇ ನಡೆದಿರುವ ಎರಡು ಸುತ್ತಿನ ಪ್ರಚಾರ್ಯದ ಸಂದರ್ಭದಲ್ಲಿ ಮೂಡಿಬಂದಿರುವ ಅಭಿಪ್ರಾಯವಿದು.

ಈ ಹಿಂದಿನ ಪುರಸಭೆಯಲ್ಲಿ ಆಗಿನ ಜನತಾ ಪಕ್ಷದೊಂದಿಗೆ ಸೀಟಿನ ಹೊಂದಾಣಿಕೆ ಮಾಡಿ ಸ್ಪರ್ಧಿಸಿದ್ದ ಸಿ.ಪಿ.ಐ.(ಎಂ) ೫ ಸ್ಥಾನಗಳಲ್ಲಿ ಜಯಗಳಿಸಿತ್ತು. ಸ್ಪರ್ಧಿಸಿದ್ದ ಇನ್ನೊಂದು ಸ್ಥಾನದಲ್ಲಿ ಕಾಂಗ್ರೆಸ್ಸಿಗೆ ಪ್ರಬಲ ಸ್ಪರ್ಧೆ ಕೊಟ್ಟಿತ್ತು. ೧೩ ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ಜನತಾ ಪಕ್ಷ ಕೇವಲ ೪ ಸ್ಥಾನಗಳನ್ನು ಪಡೆದು ಕೇವಲ ೧ ಸೀಟಿನ ಅಂತರದಲ್ಲಿ ಪುರಸಭೆಯನ್ನು, ೧೦ ಸ್ಥಾನಗಳನ್ನು ಪಡೆದ ಕಾಂಗ್ರೆಸ್ಸಿಗೆ ಒಪ್ಪಿಸ ಬೇಕಾಯಿತು. ಬಹುತೇಕ ಎಲ್ಲಾ ಸ್ಥಾನಗಳಿಗೆ ಸ್ಪರ್ಧಿಸಿದ್ದ ಬಿ.ಜೆ.ಪಿ. ಯಾವ ಸ್ಥಾನವನ್ನೂ ಪಡೆಯಲಿಲ್ಲ.

ಈ ಬಾರಿ ಜನತಾದಳ ಪಕ್ಷದ ಅಹಂಭಾವದ ಹಟಮಾರಿ ಧೋರಣೆಯ ಫಲವಾಗಿ ಮಾತುಕತೆ ಮುರಿಯುವ ವಾತಾವರಣ ನಿರ್ಮಾಣವಾಯಿತು. ಜನತಾದಳ ಪಕ್ಷದ ದೊಡ್ಡಣ್ಣ ನೀತಿ-ಕಾರ್ಮಿಕ ವರ್ಗದ ಶಕ್ತಿಯನ್ನು ಹೀಗಳೆಯುವ ಪ್ರವೃತ್ತಿಗೆ ಸವಾಲೆಸೆಯಲು ನಿರ್ಧರಿಸಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಒಟ್ಟು ೧೭ ಸ್ಥಾನಗಳಿಗೆ ಸ್ಪರ್ಧಿಸಿದೆ. ಎರಡು ಸ್ಥಾನಗಳಲ್ಲಿ ಜನತಾದಳದ ಅಭ್ಯರ್ಥಿಗಳಿಗೆ ಬೆಂಬಲಿಸಲಿದೆ. ಜನತಾದಳವು ೧೪ ಸ್ಥಾನಗಳಿಗೆ ಸ್ಪರ್ಧಿಸುತ್ತಿದ್ದು ಕಾಂಗ್ರೆಸ್(ಐ) ಪಕ್ಷವು ೧೯ ಸ್ಥಾನಗಳಲ್ಲೂ ಅಭ್ಯರ್ಥಿಗಳನ್ನು ನಿಲ್ಲಿಸಿವೆ. ಕಾಂಗ್ರೆಸ್‌ನಲ್ಲಿ ಅತೃಪ್ತರಾದ ಜನರ ಒಂದು ಗುಂಪು ಹಾಗೂ ಲಾಭಕೋರರ ಏಜೆಂಟ್ ಪಕ್ಷವಾಗಿರುವ ಬಿ.ಜೆ.ಪಿ. ಪಕ್ಷದ ಜೊತೆಗೂಡಿ "ಪೌರಸಮಿತಿ" ಎಂಬ ಇನ್ನೊಂದು ಬಣವನ್ನು ರಚಿಸಿದ್ದು ಎಲ್ಲಾ ೧೯ಸ್ಥಾನಗಳಲ್ಲೂ ಸ್ಪರ್ಧೆಗೆ ಇಳಿದಿದೆ. ಆದ್ದರಿಂದ ಈ ಬಾರಿಯ ಚುನಾವಣೆ ಜನರ ಕುತೂಹಲ ಕೆರಳಿದ್ದು ಚತುಷ್ಕೋನ ಸ್ಪರ್ಧೆಏರ್ಪಟ್ಟಿದೆ.

ನಿಜವಾದ ಸ್ಪರ್ಧೆ ಸಿ.ಪಿ.ಐ.(ಎಂ) ಮತ್ತು ಕಾಂಗ್ರೆಸ್(ಐ) ನಡುವೆಯೇ ನಡೆಯಲಿದೆ ಎಂದು ನಾಗರೀಕರು ಮಾತನಾಡಲಾರಂಭಿಸಿದ್ದಾರೆ.

ಒಂದು ಹಿನ್ನೋಟ

೧೯೮೧ ರ ಜನಗಣತಿ ಪ್ರಕಾರ ೨೪ ಸಾವಿರ ಜನಸಂಖ್ಯೆ ಹೊಂದಿದ ಕುಂದಾಪುರ ನಗರದಲ್ಲಿ ೧೯೩೫ ರಿಂದ ಟಾನ್ ಪಂಚಾಯತ್ ಕಾರ್ಯಪ್ರವೃತ್ತಿಸುತ್ತಿದ್ದು. ಕಾಂಗ್ರೆಸ್ ಪುರಸಭೆಯಲ್ಲಿ ಬಹುಕಾಲದಿಂದಲೂ ಪ್ರಭಾವ ಹೊಂದಿದ್ದಾಗ್ಯೂ ೧೯೫೭ ರ ಸುಮಾರಿಗೆ ಕಾಂಗ್ರೆಸ್ ವಿರುದ್ಧ ಪ್ರಜಾ ಸೋಷಲಿಸ್ಟ್ ಪಾರ್ಟಿ (ಪಿ.ಎಸ್.ಪಿ) ಶಕ್ತಿಗೂಡಿಸಿಕೊಳ್ಳಲಾರಂಬಿಸಿತು. ೧೯೬೯ ರಲ್ಲಿ ಇದರ ಶಕ್ತಿ ಪರೀಕ್ಷೆಯಾಗಿ ಸಿ.ಪಿ.ಐ.(ಎಂ)/ ಪಿ.ಎಸ್.ಪಿ. ಪಕ್ಷಗಳ ಮೈತ್ರಿ ಕೂಟವು ೧೪ ಸ್ಥಾನಗಳನ್ನು ಗೆದ್ದು. ಪುರಸಭೆಯಲ್ಲಿ ಅಧಿಕಾರವನ್ನು ಪಡೆಯಿತು. ಕಾಂಗ್ರೆಸ್ ಸೋತಿತು. ಪಕ್ಷದ ಮುಖಂಡರಾದ ಕಾಂ. ಅಬ್ರಹಾಂ ಕರ್ಕಡರವರು ಪುರಸಭೆಯ ಉಪಾಧ್ಯಕ್ಷರಾಗಿ ಆಯ್ಕೆಯಾದರು. ಸಿ.ಪಿ.ಐ. (ಎಂ) ೪ ಸ್ಥಾನಗಳಲ್ಲಿ ಜಯ ಸಾಧಿಸಿತು. ಆದರೆ ೧೯೭೧ ರಲ್ಲಿ ಪರಿಸ್ಥಿತಿ ಬದಲಾಗಿ ಪಿ.ಎಸ್.ಪಿ. ಪಕ್ಷ ತನ್ನ ಕಾಂಗ್ರೆಸ್ ವಿರೋಧಿ ಧೋರಣೆಯನ್ನು ಕಡೆಗಣಿಸಿ ಕಾಂಗ್ರೆಸ್‌ನೊಂದಿಗೇ ವಿಲೀನವಾಯಿತು. ಸಿ.ಪಿ.ಐ.(ಎಂ) ಪಿ.ಎಸ್‌ಪಿ.ಯ ನಿಲುಮೆಯನ್ನುದೃಢವಾಗಿ ವಿರೋಧಿಸಿತು.

೧೯೭೫ ರಲ್ಲಿ ಪುರಸಭೆಗೆ ಮತ್ತೆ ಚುನಾವಣೆ ನಡೆದಾಗ ಸಿ.ಪಿ.ಐ. (ಎಂ) ಕಾಂಗ್ರೆಸ್ (ಐ) ವಿರುದ್ಧ ಪೌರಸಮಿತಿಯನ್ನು ರೂಪಿಸಿತು. ಪ್ರಬಲವಾದ ಸ್ಪರ್ಧೆ ನೀಡಿ ೧೦ ಸೀಟುಗಳನ್ನು ಪಡೆದ ಪೌರಸಮಿತಿ ಅಧಿಕಾರಕ್ಕೆ ಬಂದಿತು. ಸಿ.ಪಿ.ಐ. (ಎಂ) ಐದು ಸ್ಥಾನಗಳಲ್ಲಿ ಜಯಗಳಿಸಿತು. ಕಾಂ. ಅಬ್ರಹಾಂ ಕರ್ಕಡವರು ಮತ್ತೆ ಉಪಾಧ್ಯಕ್ಷರಾಗಿ ಆಯ್ಕೆಯಾದರು. ಆದರೆ ಆಗಿನ ದೇವರಾಜ್ ಅರಸ್ ನೇತೃತ್ವದ ಕಾಂಗ್ರೆಸ್ ಸರಕಾರ ಕೇವಲ ೧ ೧/೨ ವರ್ಷಗಳ ಅವಧಿಯನ್ನಷ್ಟೇ ಮುಗಿಸಿದ್ದ ಪೌರಸಮಿತಿಯ ಆಡಳಿತದಲ್ಲಿ ಅಭಿವೃದ್ಧಿ ಕೆಲಸಗಳು ನಡೆದಿಲ್ಲ"ವೆಂಬ ನೆಪ ಒಡ್ಡಿ ಸೂಪರ್‌ಸೀಡ್ (ವಜಾ) ಮಾಡಿತು. 'ಈ ಅಪ್ರಜಾಸತ್ತಾತ್ಮಕ ಕ್ರಮದ ವಿರುದ್ಧ ಪೌರಸಮಿತಿ ಹೈಕೋರ್ಟಿನಲ್ಲಿ ದಾವೆ ಹೂಡಿ ಜಯ ಸಾಧಿಸಿತು. ಪೌರಸಮಿತಿ ಮತ್ತೆ ಅಧಿಕಾರ ಪಡೆಯಿತು.

ಹೀಗೆ ಕುಂದಾಪುರ ಪುರಸಭೆಯಲ್ಲಿ ಅಧಿಕಾರದಲ್ಲಿದ್ದು, ವಿರೋಧ ಪಕ್ಷದ ನೆಲೆಯಲಿದ್ದು-ನಿರಂತರವಾಗಿ ತನ್ನ ಪ್ರಾತಿನಿಧ್ಯವನ್ನು ಉಳಿಸಿಕೊಂಡಿರುವ ಸಿ.ಪಿ.ಐ. (ಎಂ) ಇಂದು ಪೇಟೆಯ ಪರಿಸರದಲ್ಲಿ ಪ್ರಭಾವಯುತ ಪಕ್ಷವಾಗಿ ಬೆಳೆದಿದೆ. ತನ್ನ ಸಾಮೂಹಿಕ ಸಂಘಟನೆಗಳ ಚಟುವಟಿಕೆಗಳ ಪ್ರಭಾವದಿಂದ ನಿರಂತರವಾಗಿ ಜನರ ಪ್ರಶ್ನೆಗಳ ಪರಿಹಾರಕ್ಕಾಗಿ ಹೋರಾಟ ರೂಪಿಸುತ್ತಾ ಬರುತ್ತಿರುವ ಕಾರಣದಿಂದಾಗಿ ಕಾರ್ಮಿಕರು, ರೈತರು, ಮಧ್ಯಮ ವರ್ಗದವರು, ಮಹಿಳೆಯರು-ವಿದ್ಯಾರ್ಥಿ-ಯುವಜನರ ನಡುವೆ ಉತ್ತಮ ಅಭಿಪ್ರಾಯವನ್ನು ಹೊಂದಿದೆ. ರಾಜಕೀಯ ಶಕ್ತಿಯಾಗಿ ಬೆಳೆದಿದೆ.

ಮುಂಬರುವ ಚುನಾವಣೆಯಲ್ಲಿ

ಏಪ್ರಿಲ್ ೨೯ ರ ಚುನಾವಣೆ ಅತ್ಯಂತ ಮಹತ್ವದ್ದಾಗಿದ್ದು ಕಾರ್ಮಿಕ ವರ್ಗದ ಮುಖಂಡತ್ವದಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಇತರೇ ಬಂಡವಾಳ ಶಾಹಿ-ಭೂಮಾಲಕ ಪರ ಪಕ್ಷಗಳಿಗೆ ಪ್ರಬಲ ಸವಾಲನ್ನು ಕುಂದಾಪುರದಲ್ಲಿ ಒಡ್ಡಲಿದೆ. ಈ ನಿಟ್ಟಿನಲ್ಲಿ ತನ್ನೆಲ್ಲಾ ಸಂಘಟನಾ ಶಕ್ತಿಯೊಂದಿಗೆ ಸ್ಪರ್ಧಾ ಕಣಕ್ಕೆ ಪಕ್ಷವು ಎಲ್ಲಾ ವರ್ಗಗಳನ್ನು ಪ್ರತಿನಿಧಿಸುವ ಜನ ಮೆಚ್ಚುಗೆಯ ಈ ಕೆಳಗಿನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ.

೧ನೇ ಡಿವಿಜನ್ (೧-೨ನೇವಾರ್ಡ್):

ಅಲ್ಪಸಂಖ್ಯಾತ ಮುಸ್ಲಿಂ ಜನಾಂಗ ಹಾಗು ಮೀನುಗಾರ ಶ್ರಮಜೀವಿಗಳು ಅಧಿಕ ಸಂಖ್ಯೆಯಲ್ಲಿರುವ ಈ ಡಿವಿಜನ್ನಿನಲ್ಲಿ ಪಕ್ಷವು ಇದೇ ಮೊದಲಬಾರಿಗೆ ಸ್ಪರ್ಧಿಸುತ್ತಿದೆ. ಇಲ್ಲಿನ ಮದ್ದು ಗುಡ್ಡೆ ಹಾಗು ಖಾರ್ವಿಕೇರಿ ಪ್ರದೇಶಗಳಲ್ಲಿ ಡಿ.ವೈ.ಎಫ್.ಐ. ಘಟಕಗಳಿದ್ದು ಜನಪರ ವಾದ ಕೆಲಸಗಳನ್ನು ಮಾಡಿವೆ. ಮದ್ದು ಗುಡ್ಡೆ ಡಿ.ವೈ.ಎಫ್.ಐ ಘಟಕದ ಕಾರ್ಯದರ್ಶಿಯೂ, ಕುಂದಾಪುರ ತಾಲೂಕು ಸಮಿತಿಯ ಸಹಕಾರ್ಯದರ್ಶಿಯೂ ಆಗಿರುವ ಕೃಷ್ಣ.ಜಿ.ಮೆಂಡನ್ ಮದ್ದುಗುಡೆ ಡಿ.ವೈ.ಎಫ್.ಐ. ಅಧ್ಯಕ್ಷರಾದ ಬಸವ ಖಾರ್ವಿ, ಖಾರ್ವಿಕೇರಿ ಡಿ.ವೈ.ಎಫ್.ಐ. ಘಟಕದ ಸಂಚಾಲಕರೂ ಸಮುದಾಯದ ಉತ್ತಮ ಗಾಯಕರೂ ಆದ ರಾಧಾಕೃಷ್ಣ ಸಾರಂಗ್ ಇನ್ನೋರ್ವ ಪಕ್ಷದ ಅಭ್ಯರ್ಥಿಯಾಗಿದ್ದಾರೆ. ಇಲ್ಲಿನ ಮಹಿಳಾ ಮೀಸಲು ಸ್ಥಾನದಲ್ಲಿ ಪಕ್ಷವು ಜನತಾದಳಕ್ಕೆ ಬೆಂಬಲಿಸಲಿದೆ. ಈ ಹಿಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ೪ ಸ್ಥಾನಗಳನ್ನು ಪಡೆದಿತ್ತು.

೨ನೇ ಡಿವಿಜನ್ (೩-೬ನೇವಾರ್ಡ್):

ಕಾರ್ಮಿಕ ವರ್ಗ ಹಾಗು ಮಧ್ಯಮ ವರ್ಗ ಗಣನೀಯ ಸಂಖ್ಯೆಯಲ್ಲಿರುವ ಸ್ಥಳ ಇದಾಗಿದೆ. ಮೊದಲ ಬಾರಿಗೆ ಪಕ್ಷವು ಇಲ್ಲಿ ಎಲ್ಲಾ ಸ್ಥಾನಗಳಿಗೂ (೪ ಸ್ಥಾನ) ಸ್ಪರ್ಧಿಸುತ್ತಿದೆ. ಡಿ.ವೈ.ಎಫ್.ಐ. ಸದಸ್ಯರೂ ಸೈಕಲ್ ಅಂಗಡಿಯೊಂದರ ಮಾಲಿಕರೂ ಆಗಿರುವ ಪುರುಷೋತ್ತಮ ಈ ಪ್ರದೇಶದಲ್ಲಿ ಸಾಕಷ್ಟು ಪರಿಚಿತ ವ್ಯಕ್ತಿ. ರಿಕ್ಷಾ ಚಾಲಕರೂ ಆಗಿದ್ದು ರಿಕ್ಷಾ ಚಾಲಕರ ಸಂಘದ ಸದಸ್ಯರೂ ಆಗಿರುವ ವಿಜಯ ಪುತ್ರನ್ ಪಕ್ಷದ ಇನ್ನೋರ್ವ ಹುರಿಯಾಳು. ಪಕ್ಷದ ತಾಲೂಕು ಸಮಿತಿ ಸದಸ್ಯರೂ - ಹಂಚಿನ ಕಾರ್ಮಿಕರ ಸಂಘದ ಮುಖಂಡರೂ ಆದ ವಿ. ನಾಗ ಇನ್ನೋರ್ವ ಸ್ಪರ್ಧಿಯಾಗಿದ್ದಾರೆ. ಮಹಿಳಾ ಮೀಸಲು ಸ್ಥಾನದಿಂದ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ರಾಜ್ಯ ಸಮಿತಿ ಸದಸ್ಯ ಹಾಗು ಕುಂದಾಪುರ ತಾಲೂಕು ಸಂಚಾಲಕಿಯಾದ ಎಸ್.ಆರ್. ಲೀಲಾವತಿ ಸ್ಪರ್ಧಿಸಿದ್ದಾರೆ. ಈ ಹಿಂದಿನ ಚುನಾವಣೆಯಲ್ಲಿ ಮೂರು ಸ್ಥಾನಗಳಲ್ಲಿ ಕಾಂಗ್ರೆಸ್ ಹಾಗು ಒಂದರಲ್ಲಿ ಜನತಾದಳ ಜಯಗಳಿಸಿತ್ತು.

೩ನೇ ವಾರ್ಡ್ (೪-೫ ವಾರ್ಡ್)

ಇದು ವಿರೋಧ ಪಕ್ಷಗಳ ಸ್ಪರ್ಧಿಗಳು ನಿರಂತರ ಗೆಲುವು ಸಾಧಿಸುವ ಸ್ಥಳವಾಗಿದ್ದು ಕಳೆದ ಚುನಾವಣೆಯಲ್ಲಿ ಇಲ್ಲಿನ ೩ ಸ್ಥಾನಗಳಲ್ಲಿ ಸಿ.ಪಿ.ಐ(ಎಂ) ಬೆಂಬಲದೊಂದಿಗೆ ಜನತಾ ಪಕ್ಷವು ಗೆದ್ದಿತ್ತು. ಮಧ್ಯಮ ವರ್ಗ ಹಾಗೂ ಕಾರ್ಮಿಕ ವರ್ಗ ಸರಿಸಮವಾಗಿ ಹಂಚಲ್ಪಟ್ಟಿರುವ ಕ್ಷೇತ್ರವಿದು.ಇಲ್ಲಿ ಪಕ್ಷವು ಪ್ರಭಾವ ಹೊಂದಿದ್ದು ತನ್ನದೇ ಆದ ಖಾತರಿ ಮತದಾರರನ್ನು ಹೊಂದಿದೆ. ಜನತಾದಳ ಕಾಂಗ್ರೆಸ್(ಐ) ಹಾಗೂ ಪೌರ ಸಮಿತಿ ಬಿ.ಜೆ.ಪಿ. ಪಕ್ಷಗಳ ಸ್ವಘೋಷಿತ ಭಾವೀ ಪುರಸಭಾ ಅಧ್ಯಕ್ಷರುಗಳು ಪ್ರಮುಖ ಮುಂದಾಳುಗಳು ಈ ಕ್ಷೇತ್ರದಲ್ಲಿ ಸ್ಪರ್ಧೆಯಲ್ಲಿದ್ದು ಎಲ್ಲರ ಕುತೂಹಲವನ್ನು ಕೆರಳಿಸಿದೆ. ಜಿಲ್ಲಾ ಡಿ.ವೈ.ಎಫ್.ಐ. ಕಾರ್ಯದರ್ಶಿ ಆರ್. ಜಯಕುಮಾರ್, ಪಕ್ಷದ ತಾಲೂಕು ಸಮಿತಿ ಸದಸ್ಯರೂ ಟೈಲ್ ಯೂನಿಯನ್ನಿನ ಕಾರ್ಯದರ್ಶಿಗಳೂ ಆಗಿರುವ ಕೆ. ಶಂಕರ್ ಮತ್ತು ಪಕ್ಷದ ತಾಲೂಕು ಸಮಿತಿ ಸದಸ್ಯರೂ ಡಿ.ವೈ.ಎಫ್.ಐ. ಮುಖಂಡರೂ ಆಗಿರುವ ಎಚ್. ನರಸಿಂಹ ರವರುಗಳು ಪಕ್ಷದ ಅಭ್ಯರ್ಥಿಗಳಾಗಿ ಇಲ್ಲಿ ಸ್ಪರ್ಧಿಸಿದ್ದಾರೆ.

೪ನೇ ಡಿವಿಜನ್ (೮-೯ನೇ ವಾರ್ಡ್)

ಇದು ಪಕ್ಷವು ಅತ್ಯಂತ ಹೆಚ್ಚು ಪ್ರಭಾವ ಹೊಂದಿರುವ ಡಿವಿಜನ್ ಹಲವು ವರ್ಷಗಳಿಂದ ಪಕ್ಷವು ಇಲ್ಲಿನ ಎಲ್ಲಾ ಸ್ಥಾನಗಳನ್ನು ಪ್ರಚಂಡ ಬಹುಮತಗಳಿಂದ ಗೆಲ್ಲುತ್ತಿದೆ. ೫ ಸ್ಥಾನಗಳನ್ನು ಹೊಂದಿರುವ ಈ ಡಿವಿಜನ್ ಪುರಸಭೆಯಲ್ಲೇ ಅತ್ಯಂತ ಹೆಚ್ಚು ಮತದಾರರನ್ನು ಹೊಂದಿದ ದೊಡ್ಡ ಕ್ಷೇತ್ರ. ಕಾರ್ಮಿಕ ವರ್ಗವೇ ಪ್ರಬಲವಾಗಿರುವ ಈ ಪ್ರದೇಶದಲ್ಲಿ ಈಗ ಮಧ್ಯಮ ವರ್ಗದವರೂ ಗಣನೀಯ ಸಂಖ್ಯೆಯಲ್ಲಿ ನೆಲೆಸಲಾರಂಭಿಸಿದ್ದಾರೆ. ಪಕ್ಷದ ರಾಜ್ಯ ಸಮಿತಿ ಸದಸ್ಯರೂ ತಾಲೂಕು ಸಮಿತಿ ಕಾರ್ಯದರ್ಶಿಗಳೂ ಆಗಿರುವ ಅಬ್ರಹಾಂ ಕರ್ಕಡ, ಪಕ್ಷದ ತಾಲೂಕು ಸಮಿತಿ ಸದಸ್ಯರೂ ಟೈಲ್ ಯೂನಿಯನ್ ಮುಂದಾಳು ಆಗಿರುವ ವಿ. ನರಸಿಂಹ, ರಿಕ್ಷಾ ಚಾಲಕರ ಸಂಘದ ಮುಖಂಡರಾದ ಆನಂದ್, ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ನಾಯಕಿ ಗುಲಾಬಿ (ಮಹಿಳಾ ಮೀಸಲು), ಟೈಲ್ ಯೂನಿಯನ್ ಮುಖಂಡರು ಡಿ.ವೈ.ಎಫ್.ಐ. ಘಟಕದ ಕಾರ್ಯದರ್ಶಿಯೂ ಆಗಿರುವ ವಿ.ಎಂ. ನಾರಾಯಣ (ಪ ಜಾ. ಮೀಸಲು) ರವರುಗಳು ಪಕ್ಷದ ಅಭ್ಯರ್ಥಿಗಳಾಗಿದ್ದಾರೆ.

೫ನೇ ಡಿವಿಜನ್ (೭ನೇ ವಾರ್ಡ್)

ಮೀನುಗಾರ ಜನ, ರೈತ ಹಾಗೂ ಕಾರ್ಮಿಕ ವರ್ಗ ಸಾಕಷ್ಟು ಸಂಖ್ಯೆಯಲ್ಲಿರುವ ಈ ಡಿವಿಜನ್ನನಲ್ಲಿ ೩ ಸ್ಥಾನಗಳಿದ್ದು ಪಕ್ಷವು ೨ ಸ್ಥಾನಗಳಿಗೆ ಅಭ್ಯರ್ಥಿಗಳನ್ನು ನಿಲ್ಲಿಸಿದೆ. ಒಂದರಲ್ಲಿ ಜನತಾದಳಕ್ಕೆ ಬೆಂಬಲ ವ್ಯಕ್ತಪಡಿಸಿದೆ. ಕಳೆದ ಚುನಾವಣೆಯಲ್ಲಿ ಇಲ್ಲಿ ಒಂದು ಸ್ಥಾನಕ್ಕೆ ಸ್ಪರ್ಧಿಸಿ ಕಾಂಗ್ರೆಸ್ಸಿಗೆ ಅತ್ಯಂತ ಪ್ರಬಲ ಸ್ಪರ್ಧೆ ನೀಡಿತ್ತು. ರಿಕ್ಷಾ ಚಾಲಕರ ಸಂಘದ ಕಾಳ ಮರಕಾಲ ಹಾಗು ಟೈಲ್ ಯೂನಿಯನ್ ಮುಖಂಡ ಬಾಬುರವರು ಗಳು ಪಕ್ಷದ ಹುರಿಯಾಳುಗಳಾಗಿದ್ದಾರೆ.

ಕುತೂಹಲ ಕೆರಳಿಸಿರುವ ಕುಂದಾಪುರ ಪುರಸಭಾ ಚುನಾವಣೆಯ ಜನಪರ ಆಡಳಿತವನ್ನು ತರಲು ಜನತೆಗೆ ಉತ್ತಮ ಅವಕಾಶ ಕಲ್ಪಿಸಿದೆ. ಪ್ರಮುಖ ಸ್ಪರ್ಧೆ ಇರುವ ಕಾರಣ ಜನತೆನಿಜವಾದ ಕಾರ್ಯಶೀಲರನ್ನು ಗುರುತಿಸಲು ಸಾಧ್ಯವಿದೆ. ಕಳೆದ ೫ ವರ್ಷಗಳ ಕಾಂಗ್ರೆಸ್ ಆಡಳಿತ ಪುರಸಭೆಯ ಅಭಿವೃದ್ಧಿಗೆ ಯಾವ ಗಮನವನ್ನು ನೀಡಿಲ್ಲ. ಒಳ ಚರಂಡಿ, ಕುಡಿಯುವ ನೀರು, ನೈರ್ಮಲ್ಯ, ರಸ್ತೆ - ದೀಪ ಹೀಗೆ ಪ್ರಶ್ನೆಗಳು ಬಗೆ ಹರಿಯದೇನೇ ಉಳಿದಿದೆ. ಇರುವ ಸಂಪನ್ಮೂಲಗಳನ್ನು ಆದ್ಯತೆಯ ಮೇರೆಗೆ ವ್ಯಯಿಸಿ ಉತ್ತಮ ಜನಪರ ಆಡಳಿತದ ಭರವಸೆಯನ್ನು ಸಿ.ಪಿ.ಐ.(ಎಂ) ನೀಡಿದೆ.

ಪ್ರತಿಯೊಂದೂ ಕ್ಷೇತ್ರಗಳಲ್ಲೂ ೧೪ ರಿಂದ ೨೦ ಜನ ಅಭ್ಯರ್ಥಿಗಳು ಸ್ಪರ್ಧಾ ಕಣದಲ್ಲಿದ್ದಾರೆ ಸಾಕಷ್ಟು ಸಂಖ್ಯೆಯಲ್ಲಿ ಸ್ವತಂತ್ರ ಅಭ್ಯರ್ಥಿಗಳೂ ಸ್ಪರ್ಧಿಸಿದ್ದು ಮತಗಳು ಹರಿದು ಹಂಚಿ ಹೋಗುವ ಸಾಧ್ಯತೆಗಳು ಅಧಿಕವಾಗಿದೆ.

ತಾನು ಈ ಹಿಂದೆ ಗೆದ್ದ ಡಿವಿಜನ್ (೪ನೇ ಡಿವಿಜನ್) ನಲ್ಲಿ ಹಲವಾರು ಜನಪರ ಕೆಲಸಗಳನ್ನು ಮಾಡಿ ಜನ ಮೆಚ್ಚುಗೆ ಪಡೆದಿರುವ ಸಿ.ಪಿ.ಐ(ಎಂ) ಇನ್ನಷ್ಟು ಉತ್ತಮ ಕೆಲಸ ನಿರ್ವಹಿಸುವ ಭರವಸೆಯೊಂದಿಗೆ, ಉತ್ಸಾಹ ಶೀಲ ಕಾರ್ಯಕರ್ತರ ತಂಡದೊಂದಿಗೆ ಪ್ರಚಾರಕ್ಕೆ ಇಳಿದಿದೆ. ಭೂಮಾಲಕ ಬಂಡವಾಳಶಾಹಿ ಪಕ್ಷಗಳಿಗೆ ಸಿ.ಪಿ.ಐ(ಎಂ) ಪಕ್ಷದ ಸ್ವತಂತ್ರ ಸ್ಪರ್ಧೆ ಸವಾಲಾಗಿರುವುದಂತೂ ಖಂಡಿತ.

ಕುಂದಾಪುರ ಪುರ ಸಭೆ - ಈ ಹಿಂದೆ ಗೆದ್ದ ಅಭ್ಯರ್ಥಿಗಳು

೧೯೬೯-೪ ಸ್ಥಾನಗಳು	೧೯೭೫-೫ ಸ್ಥಾನಗಳು	೧೯೮೪-೫ ಸ್ಥಾನಗಳು
ಅಬ್ರಹಾಂ ಕರ್ಕಡ	ಅಬ್ರಹಾಂ ಕರ್ಕಡ	ಅಬ್ರಹಾಂ ಕರ್ಕಡ
ಟೈಲರ್ ಶಂಕರ್	ಸಿ. ನಾರಾಯಣ	ವಿ. ನರಸಿಂಹ
ಪದ್ಮಾವತಿ ಕರ್ಕಡ	ಟೈಲರ್ ಶಂಕರ್	ಆನಂದ್
ಮಾರಿಂಗ	ವಿ. ನರಸಿಂಹ	ಬಿ. ಗುಲಾಬಿ
	ಮಾಸ್ತಿ	ಮಾಸ್ತಿ



ಕೇವಲ ಸಂಚಿಕೆಯಿಂದ ಮುಂದುವರಿದುದು

ಕಾಮ್ರೇಡ್ ಬಿ.ಟಿ. ರಣದಿವೆಯವರಿಗೆ - ಕೆಂಪು ನಮನ

ಸಿ.ನಂಜುಂಡಪ್ಪ

ಕಾರ್ಮಿಕ ವರ್ಗದ ಐಕ್ಯತೆಗಾಗಿ ನಡೆಯುವ ಹೋರಾಟದ ಭಾಗವಾಗಿ ಕಾರ್ಮಿಕ ಸಂಘಗಳ ಐಕ್ಯತೆಗಾಗಿ ಹೋರಾಟವು ಮುಂದುವರಿಯಿತು. ಬಿ.ಟಿ. ರಣದಿವೆಯವರು ಕಾರ್ಮಿಕರ ಒಗ್ಗಟ್ಟಿಗೆ, ಕಾರ್ಮಿಕ ಸಂಘಗಳ ಒಗ್ಗಟ್ಟಿಗೆ, ಐಕ್ಯ ಹೋರಾಟಕ್ಕೆ ಕ್ರಾಂತಿಕಾರಿ ಮಾರ್ಗದರ್ಶನವನ್ನು ಕೊಡುತ್ತಿದ್ದರು.

ನಿರುದ್ಯೋಗಿಗಳು ಕಾರ್ಮಿಕವರ್ಗದ ಒಂದು ಭಾಗ ಎಂದು ಬಿ.ಟಿ. ರಣದಿವೆ ಬೋಧಿಸಿದರು. ೧೯೮೭ರ ಪ್ರಾರಂಭದಲ್ಲಿ ಕಲ್ಕತ್ತದಲ್ಲಿ ನಡೆದ ಸಿಐಟಿಯು ಜನರಲ್ ಕೌನ್ಸಿಲ್ ಸಭೆಯಲ್ಲಿ 'ನಿರುದ್ಯೋಗವನ್ನು ಕುರಿತು ಔಪಚಾರಿಕವಾಗಿ ನಿರ್ಣಯಗಳನ್ನು ಅಂಗೀಕರಿಸುತ್ತಾ ಬಂದಿದ್ದೇವೆ. ಇಂದು ನಿರುದ್ಯೋಗವು ದೈತ್ಯಾಕಾರದ ಸಮಸ್ಯೆಯಾಗಿ ಬೆಳೆದು ಬಂದಿದೆ. ಮೇ ದಿನದ (ಹೇ ಮಾರ್ಕೆಟ್ ಘಟನೆಯ) ಶತಮಾನೋತ್ಸವದ ಈ ವರ್ಷ ಮೇ ತಿಂಗಳಿನ ಒಂದು ದಿವಸವನ್ನು ನಿರುದ್ಯೋಗ ಸಮಸ್ಯೆಗಾಗಿ ಕಾರ್ಯಾಚರಣೆಗಾಗಿ ಸಿಐಟಿಯು ರಾಜ್ಯ ಸಮಿತಿಗಳು ಮೀಸಲಿಡಬೇಕು'' ಎಂದು ರಣದಿವೆ ಕರೆಕೊಟ್ಟರು. ೧೯೮೭ರ ಮೇ ೨೨ ರಂದು ಬೆಂಗಳೂರು ಪುರಭವನದಲ್ಲಿ ''ನಿರುದ್ಯೋಗದ ವಿರುದ್ಧ ಕರ್ನಾಟಕ ರಾಜ್ಯ ಸಮಾವೇಶ''ವನ್ನು ಉದ್ಘಾಟಿಸುತ್ತಾ ಬಿ.ಟಿ. ರಣದಿವೆಯರು ಈ ಸಮಾವೇಶ 'ವನ್ನು ಸಂಘಟಿಸಿದುದಕ್ಕಾಗಿ ಸಿಐಟಿಯು ಕರ್ನಾಟಕ ರಾಜ್ಯ ಸಮಿತಿಯನ್ನು ಶ್ಲಾಘಿಸಿದರು. ೧೯೮೭ರ ಮೇಯಲ್ಲಿ ಮುಂಬಯಿಯಲ್ಲಿ ಸಿಐಟಿಯು ಆರನೆಯ ಅಖಿಲ ಭಾರತ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಮಾತನಾಡುತ್ತಾ ನಿರುದ್ಯೋಗ ಸಮಸ್ಯೆಯ ನಿವಾರಣೆಗಾಗಿ 'ಕೆಲಸದ ಹಕ್ಕನ್ನು ಭಾರತದ ಸಂವಿಧಾನದಲ್ಲಿ ಮೂಲಭೂತ ಹಕ್ಕನ್ನಾಗಿ ಸೇರಿಸಬೇಕು' ಎಂಬ ಏಕೈಕ ಬೇಡಿಕೆಗಾಗಿ ಭಾರತದ ಉದ್ದಗಲಕ್ಕೂ ನಿರುದ್ಯೋಗಿಗಳ ಜಾತಾ ನಡೆದು ನವದೆಹಲಿಯನ್ನು ತಲುಪಿ ಸಂಸತ್ತಿಗೆ ಈ ಬೇಡಿಕೆ ಇರುವ ಒಂದು ಸಾಮೂಹಿಕ ಮನವಿಯನ್ನು ಅರ್ಪಿಸಬೇಕು ಎಂದು ಕರೆ ಕೊಟ್ಟರು. ೧೯೮೯ರ ನವಂಬರಿನಲ್ಲಿ ಲೋಕಸಭಾ ಚುನಾವಣೆಗೆ ಸ್ಪರ್ಧಿಸುವಾಗ ತನ್ನ ಚುನಾವಣಾ ಘೋಷಣೆಯಲ್ಲಿ 'ಕೆಲಸದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಭಾರತದ ಸಂವಿಧಾನದಲ್ಲಿ ಸೇರಿಸುವ' ಆಶ್ವಾಸನೆಯನ್ನು ರಾಷ್ಟ್ರೀಯ ರಂಗವು ಕೊಟ್ಟಿತು. ಆರನೆಯ ಸಮ್ಮೇಳನದಲ್ಲಿ ಬಿ.ಟಿ. ರಣದಿವೆಯರು ಕೊಟ್ಟ ಕರೆಯನ್ನು ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ೧೯೯೦ ಏಪ್ರಿಲ್ ೨ ಮತ್ತು ೩ರಂದು ದುರ್ಗಾಪುರದಲ್ಲಿ ನಡೆದ ಕೆಲಸದ ಹಕ್ಕಿನ ಮೇಲಿನ ಅಖಿಲ ಭಾರತ ಸಮಾವೇಶಕ್ಕೆ ಬಿ.ಟಿ. ರಣದಿವೆಯವರು ಮೂಳೆಯ ಕ್ಯಾನ್ಸರಿನಿಂದ ವಿಪರೀತವಾದ ಯಾತನೆಯನ್ನು ಅನುಭವಿಸುತ್ತಿದಾಗ್ಯೂ, 'ಕೆಲಸದ ಹಕ್ಕಿಲ್ಲದ್ದ ಉಳಿದೆಲ್ಲಾ ಹಕ್ಕುಗಳೂ ಔಪಚಾರಿಕ' ಎಂಬ ಲೇಖನವನ್ನು ಬರೆದು ಕಳುಹಿಸಿದರು. ಅಸಂಘಟಿತ ಕಾರ್ಮಿಕರ ಚಳುವಳಿ ಸಂಘಟನೆಗಳ ಆವಶ್ಯಕತೆಯನ್ನು ಬಿ.ಟಿ. ರಣದಿವೆಯವರು ೧೯೮೩ರಿಂದ, ಅದರಲ್ಲೂ ವಿಶೇಷವಾಗಿ ೧೯೮೭ರಿಂದ ಒತ್ತಿಹೇಳುತ್ತಾ ಬಂದಿದ್ದಾರೆ.

ಕಾರ್ಖಾನೆಗಳಲ್ಲಿ ಹೊಸದಾಗಿ ಕೆಲಸಕ್ಕೆ ಸೇರುವ ಯುವಕರ ಬೇಡಿಕೆಗಳ ಬಗ್ಗೆ ಮತ್ತು ಅವರ ಸಂಘಟನೆಯ ಬಗ್ಗೆ ಕಾರ್ಮಿಕ ಸಂಘಗಳು ವಿಶೇಷಗಮನವನ್ನು ಹರಿಸಬೇಕೆಂದೂ, ವಿದೇಶಗಳಲ್ಲಿ, ಕಾರ್ಮಿಕ ಸಂಘಗಳಲ್ಲಿ ಯುವ ಕಾರ್ಮಿಕರಿಗೆ ಗಮನ ಕೊಡಲೆಂದೇ ಒಂದು ಪ್ರತ್ಯೇಕವಾದ ಇಲಾಖೆ ಇರುವುದಾಗಿ ಬಿ.ಟಿ.ರಣದಿವೆ ಹೇಳಿದರು.

ಕಾರ್ಮಿಕ ವರ್ಗದ ಐಕ್ಯತೆಯನ್ನು ಬೆಳೆಯಲು ದುಡಿಯುವ ಮಹಿಳೆಯರ, ನಿರುದ್ಯೋಗಿಗಳು, ಅಸಂಘಟಿತ ಕಾರ್ಮಿಕರ, ಯುವ ಕಾರ್ಮಿಕರ ಸಮಸ್ಯೆಗಳಿಗೆ ಗಮನ ಕೊಡುವುದು,



(ಕಾನ್‌ಫೆಡರೇಷನ್) ದ ರಚನೆಯ ಅವಶ್ಯಕತೆಗಳನ್ನು ಅವರು ಬೋಧಿಸಿದರು.

''ಜನತಾ ಪ್ರಜಾಪ್ರಭುತ್ವ ರಂಗದ ತಿರುಳು ಹಾಗೂ ತಳಹದಿಯು ಕಾರ್ಮಿಕ ವರ್ಗ ರೈತ ಸಮುದಾಯಗಳ ದೃಢವಾದ ಸಖ್ಯತೆಯೇ ಆಗಿದೆ. ರಾಷ್ಟ್ರೀಯ ಸ್ವಾತಂತ್ರ್ಯವನ್ನು ರಕ್ಷಿಸಲು, ಹೆಚ್ಚು ಪರಿಣಾಮಕಾರಿಯಾದ ಪ್ರಜಾಸತ್ತಾತ್ಮಕ ಪರಿವರ್ತನೆಯನ್ನು ಸಾಧಿಸಲು, ಸರ್ವತೋಮುಖ ಸಾಮಾಜಿಕ ಪ್ರಗತಿಯನ್ನು ಕಾಣಲು ಈ ಸಖ್ಯತೆಯು ಅತ್ಯಂತ ಪ್ರಾಮುಖ್ಯವಾದ ಶಕ್ತಿಯಾಗುತ್ತದೆ. ರಾಷ್ಟ್ರೀಯ ಬಂಡವಾಳಗಾರರ ವಿವಿಧ ವಿಭಾಗಗಳು ಎಷ್ಟರ ಮಟ್ಟಿಗೆ ಪಾಳೆಯಗಾರಿ ವಿರೋಧಿ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಕರ್ತವ್ಯಗಳನ್ನು ನಿರ್ವಹಿಸುವುದರಲ್ಲಿ ಭಾಗವಹಿಸುತ್ತದೆ ಎಂಬುದು ಬಹುಮಟ್ಟಿಗೆ ಕಾರ್ಮಿಕರ ಮತ್ತು ರೈತರ ಸಖ್ಯತೆಯ ಬಲ ಮತ್ತು ದೃಢತೆಯನ್ನು ಅವಲಂಬಿಸುತ್ತದೆ ಎನ್ನುವುದನ್ನು ಗಮನಿಸಬೇಕು. ಕೆಲವೇ ಮಾತುಗಳಲ್ಲಿ ಹೇಳುವುದಾದರೆ ಕ್ರಾಂತಿಯನ್ನು ವಿಜಯದತ್ತ ಮುನ್ನಡೆಸಲು ವಿಶಾಲವಾದ ಜನತಾ ಪ್ರಜಾಪ್ರಭುತ್ವ ರಂಗವನ್ನು ಕಟ್ಟುವಲ್ಲಿರುವ ಜಯಾಪಜಯಗಳು ದೃಢವಾದ ಕಾರ್ಮಿಕ ರೈತ ಸಖ್ಯತೆಯನ್ನೇ ಹೊಂದಿ ಕೊಂಡಿವೆ'' ಎಂದು ಸಿಪಿಐ(ಎಂ) ಕಾರ್ಯಕ್ರಮವು ಹೇಳುತ್ತದೆ (ಪ್ಯಾರಾ ೧೦೧)

ರೈತರೊಡನೆ ಸಖ್ಯತೆ

ಬಿ.ಟಿ. ರಣದಿವೆಯವರು ಸಿಐಟಿಯು ಸಮ್ಮೇಳನಗಳಲ್ಲಿ ಕಾರ್ಮಿಕ ರೈತರ ಸಖ್ಯತೆಯನ್ನು ಬಲವಾಗಿ ಪ್ರತಿಪಾದಿಸುತ್ತಿದ್ದರು. ರೈತರ ಬೇಡಿಕೆಗಳನ್ನು ಬೆಂಬಲಿಸಬೇಕೆಂದೂ, ಜನಪ್ರಿಯಗೊಳಿಸಬೇಕೆಂದೂ, ರೈತರು ಚಳುವಳಿ ಹೋರಾಟಗಳನ್ನು ನಡೆಸುವಾಗ ಸಂಘಟಿತ ಕಾರ್ಮಿಕರು ರೈತರ ಭುಜಕ್ಕೆ ಭುಜಕೊಟ್ಟು ಆ ಚಳುವಳಿ ಹೋರಾಟಗಳಲ್ಲಿ ದೈಹಿಕವಾಗಿ ಭಾಗವಹಿಸುವ ಮೂಲಕ ರೈತರಿಗೆ ಬೆಂಬಲ ಸೂಚಿಸಬೇಕೆಂದು ಅವರು ಹೇಳುತ್ತಿದ್ದರು. ರೈತರಿಗೆ ಕಾರ್ಮಿಕರು ಬೆಂಬಲಕೊಡುವ ಘಟನೆಗಳನ್ನು ತಮ್ಮ ಭಾಷಣದಲ್ಲಿ, ವರದಿಗಳಲ್ಲಿ ಸೇರಿಸುತ್ತಿದ್ದರು. ಅವುಗಳನ್ನು ನಿರೂಪಿಸಲು ಸಭೆ, ಸಮ್ಮೇಳನಗಳಲ್ಲಿ ಅವಕಾಶ ಕೊಡುತ್ತಿದ್ದರು. ಕರ್ನಾಟಕದಲ್ಲಿ ರೈತರ ಪಿಕೆಟಿಂಗ್ ಚಳುವಳಿಯಲ್ಲಿ ಕಾರ್ಮಿಕರು ದೈಹಿಕವಾಗಿ ಭಾಗವಹಿಸಿ ಬಂಧನಕ್ಕೆ ಗುರಿಯಾಗುತ್ತಿದ್ದುದನ್ನು, ಬರಗಾಲದಲ್ಲಿ ಬೆಂಗಳೂರಿನ ಸಂಘಟಿತ ಕಾರ್ಮಿಕರು, ಮೈಕೋ ಕಾರ್ಮಿಕರು ಹಳ್ಳಿಗಳಿಗೆ ಹೋಗಿ ಬಡ ರೈತರಿಗೆ, ಕೃಷಿ ಕೂಲಿಕಾರರಿಗೆ ಅಕ್ಕಿ, ರಾಗಿ, ಜೋಳ ಮೊದಲಾದ ಧಾನ್ಯಗಳನ್ನು ಹಂಚಿದುದನ್ನು ಅವರು ಗಮನಿಸಿದ್ದರು. ಕಾರ್ಮಿಕ ರೈತರ ಸಖ್ಯತೆಯ ಬೆಳವಣಿಗೆ ಸಹಾಯಕವಾಗುವ ಎಲ್ಲಾ ಚಟುವಟಿಕೆಗಳನ್ನೂ ಅವರು ಪ್ರೋತ್ಸಾಹಿಸುತ್ತಿದ್ದರು.

ಕಾರ್ಮಿಕ ಸಂಘಗಳಲ್ಲಿ ಪಕ್ಷದ ಸದಸ್ಯರು ಕೆಲಸ ಮಾಡುತ್ತಿದ್ದಾರೆ ಎಂದರೆ ಕಾರ್ಮಿಕರ ನಡುವೆ ಪಕ್ಷದ ಪ್ರಭಾವ ಬೆಳೆಯಬೇಕು, ಪಕ್ಷದ ಸದಸ್ಯರ ಸಂಖ್ಯೆ ಬೆಳೆಯಬೇಕು, ಯಾವುದೇ ಕಾರ್ಮಿಕ ಸಂಘ ಚಟುವಟಿಕೆಯು, ಅದು ಕ್ರಾಂತಿಕಾರಿಯೆಂದು ಎಷ್ಟೇ ತೋರಿಸಿಕೊಂಡರೂ, ಕಾರ್ಮಿಕರ ಮಧ್ಯದಲ್ಲಿ ಪಕ್ಷದ ತೀವ್ರ ವಿಸ್ತರಣೆಗೆ ಮುನ್ನಡೆಯದಿದ್ದರೆ ಅದು ಬರೇ ಸುಧಾರಣಾವಾದಿ ಚಟುವಟಿಕೆಯಾಗುತ್ತದೆ ಎಂದು ಅವರು ಹೇಳುತ್ತಿದ್ದರು.

ಕಾರ್ಮಿಕ ಸಂಘಗಳ ಸದಸ್ಯರ ತಿಳುವಳಿಕೆಯ ಮಟ್ಟವನ್ನು ಹೆಚ್ಚಿಸುವುದಕ್ಕೆ ಅವರು ಮಹತ್ವ ಕೊಡುತ್ತಿದ್ದರು. ಸದಸ್ಯರ ತಿಳುವಳಿಕೆಯ ಮಟ್ಟವನ್ನು ಹೆಚ್ಚಿಸುವುದು ಕಾನ್‌ಪುರದಲ್ಲಿ ನಡೆದ ಸಿಐಟಿಯುವಿನ ಐದನೆಯ ಸಮ್ಮೇಳನವು ಕೊಟ್ಟ ಮುಖ್ಯ ಕರೆಯಾಗಿದ್ದಿತು.

ಭಾರತದ ವಿರುದ್ಧವಾಗಿ ಸಾಮ್ರಾಜ್ಯಶಾಹಿಗಳು ನಡೆಸುವ ಗುಪ್ತ ಕಾರಸ್ಥಾನಗಳ ಬಗ್ಗೆ, ಅವರ ಏಜೆಂಟರು ಸಿಪಿಐ(ಎಂ)ನೊಳಗೆ ನುಸುಳುವುದು, ಸಾಮೂಹಿಕ ಸಂಘಟನೆಗಳೊಳಗೆ ನುಸುಳುವುದರ ಬಗ್ಗೆ ಬಿ.ಟಿ. ರಣದಿವೆಯವರಿಗೆ ಜಾಗೃತಿಯಿದ್ದಿತು.

೧೯೮೩ರ ಜನವರಿಯಲ್ಲಿ ನಡೆದ ಸಿಐಟಿಯು ಜನರಲ್ ಕೌನ್ಸಿಲಿನ ಸಭೆಯಲ್ಲಿ ಸಮಾರೋಪ ಭಾಷಣ ಮಾಡುವಾಗ ಈ ವಿಚಾರವು ವ್ಯಕ್ತವಾಯಿತು. ಇದನ್ನು ನನ್ನದೇ ಆದ ಮಾತುಗಳಲ್ಲಿ ಬರೆಯುತ್ತೇನೆ. ಸಿಪಿಐ(ಎಂ) ಭಾರತದ ಕಾರ್ಮಿಕ ವರ್ಗದ ರಾಜಕೀಯ ಪಕ್ಷ. ಕಲ್ಕತ್ತ ಮತ್ತು ಮುಂಬಯಿ ಭಾರತದಲ್ಲಿ ಎರಡು ಅತಿ ದೊಡ್ಡ ಕೈಗಾರಿಕಾ ಕೇಂದ್ರಗಳು. ಈ ದೊಡ್ಡ ಕೈಗಾರಿಕಾ ಕೇಂದ್ರಗಳ ಪೈಕಿ ಒಂದರಲ್ಲಿ ಕಲ್ಕತ್ತದಲ್ಲಿ ಸಿಐಟಿಯು ಬೆಳೆದಿದೆ. ಪಶ್ಚಿಮ ಬಂಗಾಳದಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರವು ೧೯೭೭ ರಿಂದ ಸತತವಾಗಿಅಧಿಕಾರದಲ್ಲಿದೆ. ಮುಂಬಯಿಯಲ್ಲಿಯೂ ಸಿಐಟಿಯು ಪ್ರಬಲವಾಗಿ ಬೆಳೆದಿದ್ದೇ ಆದರೆ ಭಾರತದಲ್ಲಿ ಸಿಐಟಿಯು ಒಂದು ಅಜೇಯ ಶಕ್ತಿಯಾಗುತ್ತದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮುಂಬಯಿಯಲ್ಲಿ ಸಮರ ಶೀಲ ಕಾರ್ಮಿಕ ಸಂಘಟನೆಯ ಇಳಿಮುಖ, ಕಾರ್ಮಿಕ ಚಳುವಳಿಯಲ್ಲಿ ಸುಧಾರಣಾವಾದದ ಬೆಳವಣಿಗೆ ೧೯೫೦ರ ದಶಕದ ಉತ್ತರಾರ್ಧದಲ್ಲಿ, ತರುವಾಯದ ದಶಕದಲ್ಲಿ ಜಾರ್ಜ್‌ಫೆರ್ನಾಂಡಿಸ್ ಒಬ್ಬ ಸಮರ ಶೀಲ ಕಾರ್ಮಿಕ ಧುರೀಣನಾಗಿ ಬೆಳೆದುದು, ೧೯೭೦ರ ದಶಕದ ಉತ್ತರಾರ್ಧದಲ್ಲಿ ಮತ್ತು ತರುವಾಯ ದತ್ತಾ ಸಾಮಂತ ಮುಂಬಯಿಯಲ್ಲಿ ಒಬ್ಬ ಸಮರ ಶೀಲ ಕಾರ್ಮಿಕ ಮುಖಂಡನಾಗಿ ಬೆಳೆದಿದ್ದು- ಇವೆಲ್ಲವೂ ಒಂದಕ್ಕೊಂದು ಸಂಬಂಧವಿರುವ ಬೆಳವಣಿಗೆಗಳು. ಇವೆಲ್ಲವುಗಳ ಏಕೈಕ ಉದ್ದೇಶ ಸಮರ ಶೀಲ ಕ್ರಾಂತಿಕಾರಿ ಕಾರ್ಮಿಕ ಸಂಘಟನೆಯ ಬೆಳವಣಿಗೆಯನ್ನು ತಡೆಯುವುದು. ತತ್ಪರಿಣಾಮವಾಗಿ ಕಾರ್ಮಿಕ ವರ್ಗದ ರಾಜಕೀಯ ಪಕ್ಷದ ಬೆಳವಣಿಗೆಯನ್ನು ತಡೆಯುವುದೇ ಆಗಿದೆ. ೧೯೮೨ರಲ್ಲಿ ಮುಂಬಯಿಯ ಲಕ್ಷಾಂತರ ಜವಳಿ ಕಾರ್ಮಿಕರ ಒಂದು ವರ್ಷದಷ್ಟು ದೀರ್ಘ ಕಾಲದ ಮುಷ್ಕರ ನಡೆಯಿತು. ಮುಷ್ಕರ ನಡೆಯುವ ಅವಧಿಯಲ್ಲಿ ಒಬ್ಬೊಬ್ಬ ಕಾರ್ಮಿಕನಿಗೆ ತಿಂಗಳಿಗೆ ಐನೂರು ರೂಪಾಯಿಯಂತೆ ಪ್ರತಿತಿಂಗಳೂ ಸಿಕ್ಕುತ್ತಿದ್ದಿತು. ಇಷ್ಟು ದೊಡ್ಡ ಮೊತ್ತದ ಹಣ ಎಲ್ಲಿಂದ ಬಂದಿತು ಎಂಬುದು ಮುಖ್ಯ ಪ್ರಶ್ನೆ. ಈ ಬೆಳವಣಿಗೆಗಳ ಹಿಂದೆ ಸಾಮ್ರಾಜ್ಯಶಾಹಿಗಳ ಕೈವಾಡವಿದೆ. ಭಾರತದ ಕ್ರಾಂತಿಯನ್ನು ತಡೆಯುವುದು ಸಾಮ್ರಾಜ್ಯಶಾಹಿಗಳ ಉದ್ದೇಶವಾಗಿದೆ.

೧೯೮೭ ರ ಮೇ ತಿಂಗಳಲ್ಲಿ ಮುಂಬಯಿಯಲ್ಲಿ ನಡೆದ ಸಿಐಟಿಯು ಆರನೆಯ ಸಮ್ಮೇಳನದಲ್ಲಿ ಬಿ.ಟಿ.ರಣದಿವೆಯವರು ಮಾಡಿದ ಅಧ್ಯಕ್ಷ ಭಾಷಣ ಮತ್ತು ಸಮಾರೋಪ ಭಾಷಣಗಳಲ್ಲಿ ಸಾಮ್ರಾಜ್ಯಶಾಹಿಗಳು ಭಾರತದ ವಿರುದ್ಧ ನಡೆಸುವ ಪಿತೂರಿಯ ಕುರಿತ ಈ ವಿಚಾರಗಳು ಗಮನಾರ್ಹವಾದುವು. ಸಾಮ್ರಾಜ್ಯಶಾಹಿಗಳು ಭಾರತದ ನೆರೆಹೊರೆಯ ದೇಶಗಳನ್ನು: ಪಾಕಿಸ್ತಾನ, ಬಾಂಗ್ಲಾದೇಶ್, ಶ್ರೀಲಂಕಾ, ನೇಪಾಳಗಳನ್ನು ಭಾರತದ ವಿರುದ್ಧವಾಗಿ ಎತ್ತಿ ಕಟ್ಟುತ್ತಾರೆ. ಹಿಂದೂ ಮಹಾಸಾಗರದಲ್ಲಿ ಡಯಾಗೋಗಾರ್ಸಿಯಾ ದ್ವೀಪಗಳಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಸಾಮ್ರಾಜ್ಯಶಾಹಿಗಳು ತಮ್ಮ ಅಣ್ವಸ್ತ್ರ ನೆಲೆಯನ್ನು ಸ್ಥಾಪಿಸಿದ್ದಾರೆ. ಇದರ ಪರಿಣಾಮವಾಗಿ ಭಾರತ ಸರ್ಕಾರದ ರಕ್ಷಣಾ ವೆಚ್ಚ ಹೆಚ್ಚುತ್ತಿದೆ. ಸಾಮ್ರಾಜ್ಯಶಾಹಿಗಳು ಪಂಜಾಬ್‌ನ್ನು ಭಾರತದಿಂದ ಪ್ರತ್ಯೇಕಿಸಲು ಉದ್ದೇಶಿಸಿರುವ ಖಾಲಿಸ್ತಾನಿ ಉಗ್ರಗಾಮಿಗಳಿಗೆ ತರಬೇತಿ ಕೊಡುತ್ತಾರೆ, ಎಲ್ಲಾ ರೀತಿಯ ನೆರವು ನೀಡುತ್ತಾರೆ. ಈಶಾನ್ಯ ಭಾರತದಲ್ಲಿರುವ ಪ್ರತ್ಯೇಕತಾವಾದಿಗಳಿಗೆ, ವಿಭಜನಕಾರಿಗಳಿಗೆ ಸಾಮ್ರಾಜ್ಯಶಾಹಿಗಳು ಧನ, ಶಸ್ತ್ರಾಸ್ತ್ರಗಳನ್ನು ಕೊಡುತ್ತಾರೆ. ಭಾರತದ ಸೈನ್ಯದಲ್ಲಿ ಕಾಲು ಭಾಗದಷ್ಟು ಸಿಖ್ ಸೈನಿಕರು, ಸಿಖ್ ಅಧಿಕಾರಿಗಳು ಇದ್ದಾರೆ. ಅವರ ನಂತರ ಗೂರ್ಖಾ ರೆಜಿಮೆಂಟ್ ಮುಖ್ಯವಾದುದು. ಪಂಜಾಬಿನ ಕುರಿತು ಕೇಂದ್ರದಲ್ಲಿದ್ದ ಕಾಂಗ್ರೆಸ್(ಐ) ಸರ್ಕಾರದ ನೀತಿಯಿಂದ, ಗೂರ್ಖಾಲ್ಯಾಂಡ್ ಚಳುವಳಿಗಳಿಂದ ಸೈನ್ಯದಲ್ಲಿ ಅಶಿಸ್ತು ಹುಟ್ಟಬಾರದು. ದೇಶವು ಒಂದಾಗಿರಬೇಕಾದರೆ, ಸೈನ್ಯವು ಒಂದಾಗಿರುವುದು ಅಗತ್ಯ, ಸೈನ್ಯದಲ್ಲಿ ಬಿರುಕುಂಟಾದರೆ ಭಾರತದ ಐಕ್ಯತೆಯನ್ನು ಒಡೆಯಬಹುದು ಎಂಬುದು ಸಾಮ್ರಾಜ್ಯಶಾಹಿಗಳ ಲೆಕ್ಕಾಚಾರ.

> ಸಿ.ಪಿ.ಐ(ಎಂ) ಭಾರತದ ಕಾರ್ಮಿಕ ವರ್ಗದ ಪಕ್ಷ. ಕಲ್ಕತ್ತ ಮತ್ತು ಮುಂಬಯಿ ಭಾರತದಲ್ಲಿ ಎರಡು ಅತಿ ದೊಡ್ಡ ಕೈಗಾರಿಕಾ ಕೇಂದ್ರಗಳು. ಇವುಗಳ ಪೈಕಿ ಒಂದರಲ್ಲಿ (ಕಲ್ಕತ್ತದಲ್ಲಿ) ಸಿ.ಐ.ಟಿ.ಯು. ಬೆಳೆದಿದೆ. ಪಶ್ಚಿಮ ಬಂಗಾಳದಲ್ಲಿ ಸಿ.ಪಿ.ಐ(ಎಂ) ನೇತೃತ್ವದ ಎಡರಂಗ ಸರ್ಕಾರ ೧೯೭೭ ರಿಂದ ಸತತವಾಗಿ ಅಧಿಕಾರದಲ್ಲಿದೆ. ಮುಂಬಯಿಯಲ್ಲಿಯೂ ಸಿ.ಐ.ಟಿ.ಯು. ಪ್ರಬಲವಾಗಿ ಬೆಳೆದಿದ್ದೇ ಆದರೆ ಭಾರತದಲ್ಲಿ ಸಿ.ಐ.ಟಿ.ಯು. ಒಂದು ಅಜೇಯ ಶಕ್ತಿಯಾಗುತ್ತದೆ. ಸ್ವಾತಂತ್ರ್ಯೋತ್ತರ ಮುಂಬೈಯ ಕಾರ್ಮಿಕ ಚಳುವಳಿಯ ರಂಗದಲ್ಲಿನ ಬೆಳವಣಿಗೆಗಳ ಏಕೈಕ ಉದ್ದೇಶ ಸಮರ ಶೀಲ ಕ್ರಾಂತಿಕಾರಿ ಸಂಘಟನೆಯ ಬೆಳವಣಿಗೆಯನ್ನು ತಡೆಯುವುದು. ತತ್ಪರಿಣಾಮವಾಗಿ ಕಾರ್ಮಿಕ ವರ್ಗದ ರಾಜಕೀಯದ ಬೆಳವಣಿಗೆಯನ್ನು ತಡೆಯುವುದೇ ಆಗಿದೆ.

ಅವರು ದೇಶದಲ್ಲಿ ಎಲ್ಲಾ ಕಡೆಯಿರುವ ಧಾರ್ಮಿಕ ಮೂಲಭೂತವಾದಿಗಳಿಗೆ, ವಿಭಜನಕಾರಿಗಳಿಗೆ ಒಳಗಿಂದೊಳಗೇ ಸಹಾಯ ಮಾಡುತ್ತಾರೆ. ಪ್ರಚೋದಿಸುತ್ತಾರೆ. ಜನರ ಐಕ್ಯತೆ, ಪ್ರಜಾಸತ್ತಾತ್ಮಕ ಚಳುವಳಿಯ ಐಕ್ಯತೆಯನ್ನು ಅವರು ಧರ್ಮ, ಜಾತಿ, ಭಾಷೆ, ನೀರು, ಗಡಿ ಪ್ರಾದೇಶಿಕತೆಗಳನ್ನು ಉಪಯೋಗಿಸಿ ಒಡೆದು ಛಿದ್ರಮಾಡುತ್ತಾರೆ.

ಸಾಮ್ರಾಜ್ಯ ಶಾಹಿಗಳ ನಿಯಂತ್ರಣದಲ್ಲಿರುವ ವಿಶ್ವ ಬ್ಯಾಂಕ್ ಮತ್ತು ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಭಾರತ ಸರ್ಕಾರಕ್ಕೆ ಸಾಲ ಕೊಡುವಾಗ, ಐದು ವರ್ಷಗಳಲ್ಲಿ ಎರಡು ಬಾರಿ ವಿದ್ಯುಚ್ಛಕ್ತಿ, ನೀರು, ಬಸ್ ದರ, ಸಾರಿಗೆ ದರ, ಅಂಚೆ-ತಂತಿ, ಟೆಲಿಫೋನ್ ದರಗಳನ್ನು ಹೆಚ್ಚಿಸಬೇಕು, ಎಲ್ಲಾ ಸೇವೆಗಳನ್ನು ಲಾಭದಾಯಕವಾಗಿ ನಡೆಸಬೇಕು, ಪೇಟೆಗಳಲ್ಲಿ ಪಡಿತರ ವ್ಯವಸ್ಥೆಯಲ್ಲಿ ವಿತರಣೆ ಮಾಡುವ ಅಕ್ಕಿ, ಎಣ್ಣೆ, ಮೊದಲಾದ ಸಾಮಗ್ರಿಗಳಿಗೆ ಕೊಡುವ ಸಬ್ಸಿಡಿಯನ್ನು ನಿಲ್ಲಿಸಬೇಕು, ಹೊರದೇಶಗಳಲ್ಲಿ ರಫ್ತು ಮಾಡುವ ಸರಕುಗಳಿಗೆ ಕೊಡುವ ಸಬ್ಸಿಡಿಯನ್ನು ನಿಲ್ಲಿಸಬೇಕು, ಆಮದಿನ ಮೇಲೆ ಇರುವ ನಿಯಂತ್ರಣವನ್ನು ತೆಗೆದು ಹಾಕಬೇಕು, ವಿದೇಶಿ ಬಂಡವಾಳವನ್ನು ಹೂಡಲು ಮುಕ್ತ ವಾತಾವರಣವನ್ನು ನಿರ್ಮಿಸಬೇಕು ಮುಂತಾದ ಷರತ್ತುಗಳನ್ನು ಹಾಕುತ್ತವೆ. ಇದರ ಪರಿಣಾಮವಾಗಿ ಸೇವೆಗಳು ದರಗಳು ಹೆಚ್ಚಾಗುತ್ತವೆ, ಬೆಲೆಗಳು ಹೆಚ್ಚಾಗುತ್ತವೆ. ರಕ್ಷಣಾ ವೆಚ್ಚವು ಹೆಚ್ಚಿಸುವುದರಿಂದ ಜನರ ಮೇಲೆ ತೆರಿಗೆಗಳು ಹೆಚ್ಚಾಗುತ್ತವೆ. ಜನರ ಜೀವನ ಮಟ್ಟವು ಕೆಳಗೆ ಇಳಿಯುತ್ತದೆ. ಕಾರ್ಖಾನೆಗಳು ಹೆಚ್ಚುತ್ತವೆ, ನಿರುದ್ಯೋಗವು ಹೆಚ್ಚುತ್ತದೆ. ದೇಶದ ಆರ್ಥಿಕ ಸ್ವಾವಲಂಬನೆಗೆ ಧಕ್ಕೆ ಬರುತ್ತದೆ.

ಸಾಮ್ರಾಜ್ಯಶಾಹಿಗಳ ಭಾಗಗಳಾದ ಬಹುರಾಷ್ಟ್ರೀಯ ಸಂಸ್ಥೆಗಳು ದೇಶದ ಜನರನ್ನು ಸುಲಿಗೆ ಮಾಡುತ್ತವೆ, ದೇಶವನ್ನು ಕೊಳ್ಳೆ ಹೊಡೆಯುತ್ತವೆ.

ಬೆಲೆ ಏರಿಕೆ, ಕರಾಕರಣೆ ಮತ್ತು ಸರ್ಕಾರದ ಇತರ ವಿರೋಧಿ ಧೋರಣೆಗಳನ್ನು ಜನರು ಒಗ್ಗಟ್ಟಾಗಿ ವಿರೋಧಿಸಬೇಕು, ದೇಶದ ಆರ್ಥಿಕ ಸ್ವಾವಲಂಬನೆಯ ರಕ್ಷಣೆ, ದೇಶದ ಐಕ್ಯತೆ ಸಮಗ್ರತೆಗಳ ರಕ್ಷಣೆಗಾಗಿ ಒಗ್ಗಟ್ಟಾಗಿ ಹೋರಾಡಬೇಕು. ಆದರೆ ಮೇಲೆ ಹೇಳಿದಂತೆ ವಿಭಜನಕಾರಿಗಳು ಜನರ ಒಗ್ಗಟ್ಟನ್ನು ಒಡೆಯಲು ಸಿದ್ಧರಿದ್ದಾರೆ.

ಇವೆಲ್ಲಾ ಸಾಲದೆಂಬಂತೆ ಸಾಮ್ರಾಜ್ಯಶಾಹಿಗಳು ಈ ದೇಶದಲ್ಲಿ ಹಲವಾರು ಸ್ವಯಂಸೇವಾ ಸಂಘಟನೆಗಳನ್ನೂ ಹುಟ್ಟಿ ಹಾಕಿ ಸಾಕುತ್ತಿದ್ದಾರೆ. ಈ ಸ್ವಯಂ ಸೇವಾ ಸಂಘಟನೆಗಳು ಎಡ ಮುಖವಾಡವನ್ನು ಹಾಕಿ, ಕ್ರಾಂತಿಕಾರಿ ವಿಚಾರಧಾರೆಯತ್ತ, ಸಿಪಿಐ (ಎಂ)ವತ್ತ ಆಕರ್ಷಿತರಾಗುವ ವಿದ್ಯಾವಂತ ಯುವಕ, ಯುವತಿಯರನ್ನು ಗುರುತಿಸಿ, ತಮ್ಮ ಬುಟ್ಟಿಗೆ ಹಾಕಿಕೊಂಡು, ಕ್ರಾಂತಿಕಾರಿ ಚಳುವಳಿಗೆ ವಿವಿಧ ಹಂತಗಳ ಕಾರ್ಯ ಕರ್ತರ, ನಾಯಕರು ಸಿಕ್ಕುವುದನ್ನು ತಪ್ಪಿಸುತ್ತಾರೆ ಮತ್ತು ಕ್ರಮೇಣವಾಗಿ ಅವರನ್ನು ಪ್ರತಿಕ್ರಾಂತಿಕಾರಿಗಳನ್ನಾಗಿ ಕ್ರಾಂತಿಯ ವಿರೋಧಿಗಳನ್ನಾಗಿ ಪರಿವರ್ತಿಸುತ್ತಾರೆ. ಭಾರತದ ವಿರುದ್ಧವಾಗಿ ಸಾಮ್ರಾಜ್ಯಶಾಹಿಗಳು ಈ ಎಲ್ಲಾ ರೀತಿಗಳಲ್ಲಿ ಕತ್ತಿ ಮಸೆದು, ಪಿತೂರಿ ಮಾಡುತ್ತಿದ್ದಾರೆ ಎಂದು ಅವರು ಕಾರ್ಮಿಕ ವರ್ಗವನ್ನು, ಜನತೆಯನ್ನು ಎಚ್ಚರಿಸಿದರು.

ಅವರಿಗೆ ಪಕ್ಷದ ಸಂಘಟನೆಯ ಸುಭದ್ರತೆಯ ಬಗ್ಗೆ ವಿಶೇಷವಾದ ಕಾಳಜಿ ಇದ್ದಿತು.

ಕಾಂ. ಬಿ.ಟಿ. ರಣದಿವೆಯವರು ಕಾರ್ಮಿಕ ಚಳುವಳಿಯಲ್ಲಿ, ಸುಧಾರಣಾವಾದ, ಆರ್ಥಿಕವಾದಗಳ ವಿರುದ್ಧವಾಗಿ, ಸಮಯಸಾಧಕತನ ಮತ್ತು ವರ್ಗ ಸಹಯೋಗ

ಪುಟ ೬ ಕ್ಕೆ

ಒಂದು ವರದಿ

ದುರ್ಗಾಪುರದ ಚಾರಿತ್ರಿಕ ಸಮಾವೇಶ

ಎಪ್ರಿಲ್ ೨ ಮತ್ತು ೩ ರಂದು ದುರ್ಗಾಪುರದಲ್ಲಿ ನಡೆದ ಕೆಲಸದ ಹಕ್ಕು ಸಮಾವೇಶದಲ್ಲಿ ವಿವಿಧ ರಾಜ್ಯಗಳಿಂದ ಸುಮಾರು ೧೧೦೦ ಪ್ರತಿನಿಧಿಗಳು ಭಾಗ ವಹಿಸಿದ್ದರು. ಸಮ್ಮೇಳನ ನಡೆಯುವ ಮುನ್ನ ಯುವಕ, ಯುವತಿಯರು ಪಾದಯಾತ್ರೆಯನ್ನು ನಡೆಸಿದರು. ಸಮ್ಮೇಳನದ ಸ್ವಾಗತ ಸಮಿತಿಯ ಸಂಚಾಲಕರಾದ ಕಾಂ. ಕೆ.ಎಂ. ಮಜೂಮ್‌ದಾರ್ ಎಮ್.ಎಲ್.ಎ. ಹಾಗೂ ಕಾಂ. ಸುಕೋಮಲ್ ಸೇನ್ ಎಂ.ಪಿ. ರವರು ಪಾದಯಾತ್ರಿಗಳನ್ನು ಸ್ವಾಗತಿಸುತ್ತಾ, ಕೆಲಸದ ಹಕ್ಕಿಗಾಗಿ ನಡೆಯುತ್ತಿರುವ ಹೋರಾಟಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ಘೋಷಿಸಿದರು.

ವಿವಿಧ ಕಾರ್ಮಿಕ ಕ್ಷೇತ್ರದಲ್ಲಿ ದುಡಿಯುತ್ತಿರುವ ಕಾರ್ಮಿಕ ನಾಯಕರನ್ನು ಒಳಗೊಂಡ ೧೨ ಜನರ ಅಧ್ಯಕ್ಷೀಯ ಸಮಿತಿಯನ್ನು ಸಮ್ಮೇಳನದ ಕಾರ್ಯಕಲಾಪಗಳನ್ನುನಡೆಸಲು ರಚಿಸಲಾಯಿತು.

ಸಮ್ಮೇಳನದ ಆರಂಭದಲ್ಲಿ, ನಮ್ಮನ್ನು ಅಗಲಿದ ನಾಯಕರಾದ ಕಾಂ. ಸರೋಜ್ ಮುಖರ್ಜಿ, ಮತ್ತು ಕಾಂ.ಕನ್ನೆ ಬೋಮಿಕ್ (ಮಂತ್ರಿಗಳು ಪಶ್ಚಿಮ ಬಂಗಾಳ) ರವರಿಗೆ ಸಂತಾಪ ಸೂಚಕ ನಿರ್ಣಯವನ್ನು ಅಂಗೀಕರಿಸಿದರು. ಕಾಂ. ಸುನಿಲ್ ಬಸು ರವರು, ಸ್ವಾಗತ ಸಮಿತಿಯ ಅಧ್ಯಕ್ಷರ ಭಾಷಣವನ್ನು ಓದಿದರು.

ಸಮ್ಮೇಳನವನ್ನು ಉದ್ಘಾಟಿಸುತ್ತಾ ಸಿಐಟಿಯುವಿನ ಪ್ರಧಾನ ಕಾರ್ಯದರ್ಶಿಗಳಾದ ಕಾಂ.ಸಮರ್‌ಮುಖರ್ಜಿಯವರು, ಕೇಂದ್ರ ಸರಕಾರದ ಆರ್ಥಿಕ ಮತ್ತು ಸಾಮಾಜಿಕ ನೀತಿಗಳಲ್ಲಿ ಬದಲಾವಣೆಗಳಾಗಬೇಕು. ಈ ಬದಲಾವಣೆಗಳಿಂದ ಕೆಲಸದ ಅವಕಾಶಗಳನ್ನು ಉಂಟು ಮಾಡಬಹುದು ಎಂದೂ ಸಾಮೂಹಿಕ ಚಳುವಳಿ, ಹೋರಾಟಗಳ ಮೂಲಕ ಕೆಲಸದ ಹಕ್ಕನ್ನು ಮೂಲಭೂತ ಹಕ್ಕಾಗಿ ಪಡೆಯಬಹುದು ಎಂದು ಹೇಳಿದರು. ಆದಕ್ಕಾಗಿ ಎಲ್ಲ ಸಾಮೂಹಿಕ ಸಂಘಟನೆಗಳೂ ಈ ಹೋರಾಟಕ್ಕೆ ಬೆಂಬಲ ಕೊಡಬೇಕೆಂದು ಒತ್ತಿ ಹೇಳಿದರು.

ಕಾಂ. ಬಿ.ಟಿ.ಆರ್. ಅಧ್ಯಕ್ಷರು, ಸಿ.ಪಿ.ಐ.ಯು. ರವರು ತಯಾರಿಸಿದ ಕೆಲಸದ ಹಕ್ಕು ಹಾಗೂ ನಿರುದ್ಯೋಗದ ಸಮಸ್ಯೆ ಭಾಷಣವನ್ನು ಕಾಂ. ಪಿ. ಕೆ. ಗಂಗೂಲಿ ಓದಿದರು.

ಕಾಂ. ಎಮ್.ಕೆ. ಪಂಧೆ ರವರು, ಸಂಘಟನಾ ಸಮಿತಿಯ ಪರವಾಗಿ ಕೆಲಸದ ಹಕ್ಕಿನ ಬಗ್ಗೆ ಒಂದು ಪ್ರಬಂಧವನ್ನು ಮಂಡಿಸಿದರು. ಈ ಪ್ರಬಂಧ ಕೆಲಸದ ಹಕ್ಕನ್ನು ಮೂಲಭೂತ ಹಕ್ಕಾಗಿ ಮಾರ್ಪಡಿಸಲು ತೆಗೆದುಕೊಳ್ಳಬೇಕಾದ ತಕ್ಷಣದ ಕ್ರಮಗಳನ್ನು ಸೂಚಿಸಿದೆ. ಎಲ್ಲಾ ಸಾಮೂಹಿಕ ಸಂಘಟನೆಗಳೂ ಒಟ್ಟಾಗಿ, ಈ ಹೋರಾಟವನ್ನು ಮಾಡಿದರೆ ನಾವು ಖಂಡಿತವಾಗಿ ಈ ಹಕ್ಕನ್ನು ಪಡೆಯಬಹುದೆಂದು ಸೂಚ್ಯವಾಗಿ ತಿಳಿಸಿದ್ದಾರೆ.

ಅನೇಕ ಸೌಹಾರ್ದ ಪ್ರತಿನಿಧಿಗಳು ಬಂದು ಈ ಸಮ್ಮೇಳನಕ್ಕೆ ಯಶಸ್ಸು ಕೋರಿದರು. ಅವರಲ್ಲಿ, ಕಾಂ. ಹನನ್ ಮುಲ್ಲಾ, ಎಂ.ಪಿ. (ಡಿ.ವೈ.ಎಫ್.ಐ.), ಕಾಂ. ನಿಲೋತ್ಪಲ್ ಬಸು ಎಸ್.ಎಫ್.ಐ., ಕಾಂ. ಬಿನಾಯ್ ಕೋನಾರ್, ಎಐಕೆಎಸ್, ಕಾಂ. ಶ್ಯಾಮಲಿ ಗುಪ್ತ, ಎಐಡಿಡಬ್ಲ್ಯುಎ, ಕಾಂ. ಬಿಕಾಶ್ ಭಟ್ಟಾಚಾರ್ಯ, (ಎ.ಐ.ಎಲ್.ಯು.) ಪ್ರಮುಖರು.

ಡಾ॥ ಅಶೋಕ್ ಮಿತ್ರ (ಹೆಸರಾಂತ ಅರ್ಥಶಾಸ್ತ್ರಜ್ಞ) ಮಾತನಾಡುತ್ತಾ, ಹಿಂದಿನ ಸರಕಾರ ಅನುಸರಿಸಿದ ಆರ್ಥಿಕ ನೀತಿಯನ್ನು ಖಂಡಿಸುತ್ತಾ, ಕಾಂಗ್ರೆಸ್ ಸರಕಾರವು ಕೇವಲ ವ್ಯಾಪಾರಸ್ಥರ ಭೂಮಾಲಕರ ಹಿತ ರಕ್ಷಣೆ ಮಾಡುವ ನೀತಿಗಳನ್ನು ಮಾತ್ರ ಅನುಸರಿಸುತ್ತಿದ್ದರು ಎಂದು ಹೇಳಿದರು. ಆದ್ದರಿಂದ ಈ ಆರ್ಥಿಕ ನೀತಿಗಳನ್ನು ಶೀಘ್ರವೇ ಬದಲಾಯಿಸಬೇಕು ಎಂದರು. ಅನೇಕ ಹೊಸ ಆರ್ಥಿಕ ಕ್ರಮಗಳನ್ನು ಅನುಸರಿಸುವಂತೆ ಹಾಗೂ ಇದರಿಂದ ಮತ್ತಷ್ಟು ಉದ್ಯೋಗಾವಕಾಶಗಳನ್ನು ಸೃಷ್ಟಿಸುವಂತೆ ಕೇಂದ್ರ ಸರಕಾರಕ್ಕೆ ಸಲಹೆ ನೀಡಿದರು. ನಂತರ ಕಾಂ. ಶಾಂತಿ ಗೋಟಕ್, ಕಾರ್ಮಿಕ ಮಂತ್ರಿ, ಪಶ್ಚಿಮ ಬಂಗಾಳ, ಇವರು ಮಾತನಾಡುತ್ತಾ, ಹೊಸ ನೀತಿಗಳಿಂದ ಯಾವ ಯಾವ ರೀತಿಗಳಲ್ಲಿ, ಅನೇಕ ಕಾರ್ಖಾನೆಗಳಲ್ಲಿ ಹೆಚ್ಚು ಹೆಚ್ಚು ಕೆಲಸಗಳನ್ನು ಸೃಷ್ಟಿಸಬಹುದು ಎಂದು ವಿವರಿಸಿದರು.

ಈ ಸಮ್ಮೇಳನವು ಒಂದು ನಿರ್ದೇಶನಾ ಸಮಿತಿಯನ್ನು ರಚಿಸಿತು. ಇದರ ಸಂಚಾಲಕರಾಗಿ ಕಾಂ. ಎಂ.ಕೆ. ಪಂಧೆ ಆಯ್ಕೆಗೊಂಡರು. ಈ ಸಮಿತಿಯು ಏಪ್ರಿಲ್ ೧೦ ರೊಳಗೆ ಪ್ರಸ್ತಾವನಾ ಪತ್ರವನ್ನು ಪೂರ್ಣಗೊಳಿಸಿ ಅದನ್ನು ಪ್ರಧಾನ ಮಂತ್ರಿ, ಆರ್ಥಿಕ ಮಂತ್ರಿ, ಕೈಗಾರಿಕೆ ಮತ್ತು ಕಾರ್ಮಿಕ ಮಂತ್ರಿಗಳಿಗೆ ನೀಡಬೇಕೆಂದು ಸಲಹೆ ಮಾಡಲಾಯಿತು.

'ಕೆಲಸದ ಹಕ್ಕು' ವಿಷಯವಾಗಿ ದೇಶದ ಎಲ್ಲಾ ಸಾಮೂಹಿಕ ಸಂಘಟನೆಗಳು, ಯುವಕರು, ಮಹಿಳೆಯರು, ವಿದ್ಯಾರ್ಥಿಗಳು, ರೈತರು, ಕೃಷಿಕಾರ್ಮಿಕರು, ವಕೀಲರು, ಬರಹಗಾರರು ಮತ್ತು ಬುದ್ಧಿಜೀವಿಗಳನ್ನು ಒಳಗೊಂಡ ಒಂದು ರಾಷ್ಟ್ರೀಯ ವಿಚಾರ ಸಂಕಿರಣವನ್ನು ಅತಿ ಶೀಘ್ರದಲ್ಲೆ ಏರ್ಪಡಿಸುವಂತೆ ಈ ನಿರ್ದೇಶನಾ ಸಮಿತಿಗೆ ಈ ಸಮ್ಮೇಳನವು ಅವಕಾಶ ನೀಡಿದೆ.

ದೇಶದ ಎಲ್ಲಾ ರಾಜ್ಯಗಳ, ಪ್ರತಿ ಜಿಲ್ಲೆಗಳಲ್ಲಿ ಕೆಲಸದ ಹಕ್ಕಿನ ವಿಷಯವಾಗಿ ಸಮ್ಮೇಳನ, ವಿಚಾರ ಸಂಕಿರಣಗಳನ್ನು ರಾಷ್ಟ್ರಾದ್ಯಂತ ನಡೆಸಿ, ಒಂದು ಬಲಿಷ್ಠವಾದ ಹೋರಾಟವನ್ನು ರೂಪಿಸಲು ಕರೆ ನೀಡಿತು ಮತ್ತು ನಿರುದ್ಯೋಗಗಳಿಗೆ ನಿರುದ್ಯೋಗ ಮತ್ತು ಕೆಲಸದ ಹಕ್ಕು ಎಂಬ ವಿಷಯಗಳ ಬಗ್ಗೆ ತೀವ್ರವಾದ ಚಳುವಳಿಯನ್ನು ಆಹ್ವಾನಿಸಬೇಕೆಂದು ಈ ಸಮ್ಮೇಳನವು ಕರೆ ನೀಡಿತು.

ಈ ಸಮ್ಮೇಳನದ ಸಮಾರೋಪ ಭಾಷಣ ಮಾಡುತ್ತಾ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳಾದ ಕಾಂ. ಜ್ಯೋತಿ ಬಸುರವರು ಕೇಂದ್ರ ಸರಕಾರದ ನೀತಿಗಳ ಬದಲಾವಣೆಗಳಿಂದ ಮಾತ್ರ ನಾವು ಕೆಲಸದ ಹಕ್ಕನ್ನು ಮೂಲಭೂತ ಹಕ್ಕಾಗಿ ಪಡೆಯಬಹುದು ಎಂದು ಹೇಳಿದರು.

ಈ ಸಮ್ಮೇಳನದ ನಂತರ ನಡೆದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಕಾಂ॥ ಜ್ಯೋತಿಬಸು, ಕಾಂ॥ ಎಂ.ಕೆ. ಪಂಧೆ, ಮುಂತಾದ ನಾಯಕರುಗಳು ಮಾತನಾಡಿದರು.

ವರದಿ - ಸಿ. ರಾಮಯ್ಯ

ದುಡಿಯುವ ಮಹಿಳೆಯರ ಸಮಾವೇಶ

ಹೊಸ ಸಮನ್ವಯ ಸಮಿತಿ

ದುಡಿಯುವ ಮಹಿಳೆಯರ ಎರಡನೇ ರಾಜ್ಯ ಸಮಾವೇಶ ಆರಿಸಿದ ಸಮನ್ವಯ ಸಮಿತಿ ಸದಸ್ಯರು.

ಎಂ.ಎಂ. ರಾಜಮ್ಮ (ಸಂಚಾಲಕಿ), ಖುರ್ಷಿದಾ ಬೇಗಂ, ಭಾಗ್ಯಮ್ಮ, ಕೆ.ಎಸ್. ವಿಮಾಲಾ, ವಿಜಯಾ, ಪದ್ಮಾವತಮ್ಮ, ಟಿ. ಗುಲಾಬಿ, ಎಸ್. ಆರ್. ಲೀಲಾವತಿ, ಮುಮ್ತಾಝ್, ಖೈರುನೀಸಾ, ಪಾರಿಜಾ, ಪುಟ್ಟಮ್ಮ, ಅಮೀನಾಬಿ, ಹುರಾಬೀ, ನಾಗರತ್ನಮೂರ್ತಿ, ಸುಲೋಚನಾ ಸಂಘ, ಎಂಎಸ್, ಕೃಷ್ಣಕುಮಾರಿ, ಮಂಜಮ್ಮ, ಛಾಯಾ, ಶಾರದಮ್ಮ, ಮಹದೇವಿ ಸಜ್ಜನ್ ಮತ್ತು, ಇಂದಿರಾ ಟಿ. ಅಮೀನ್

ಇನ್ನು ೩ ಸ್ಥಾನಗಳನ್ನು ಖಾಲಿ ಇಡಲಾಗಿದೆ.

ಮುಂದುವರೆದ ಭೂ ಹೋರಾಟ

ಶಿರಗುಪ್ಪ ತಾಲ್ಲೂಕಿನಲ್ಲಿ ಭೂ ಚಳುವಳಿ ೧೫ ದಿನಗಳಿಂದ ಪ್ರಾರಂಭವಾಗಿದ್ದು ಮತ್ತಷ್ಟು ಭೂಮಿಯನ್ನು ಹಿಡಿಯಲಾಗಿದೆ. ಕಾಂ॥ ಕೆ. ಬಸವನಗೌಡ, ಕಾಂ। ಬಿ. ಈರಣ್ಣನವರ ನೇತೃತ್ವದಲ್ಲಿ, ಶಾನವಾಸಪುರದಲ್ಲಿ ೧೦೦ ಎಕರೆ, ಕೂಬ್ಯಾಳು ಸಣಗೂರಿನಲ್ಲಿ ೧೨ ಎಕರೆ ಭೂಮಿಯನ್ನು ಹಿಡಿಯಲಾಗಿ... ಇದರಿಂದ ತಾಲ್ಲೂಕಿನ ರೈತರಲ್ಲಿ ಸ್ಫೂರ್ತಿ ಹುಮ್ಮಸ್ಸು ಮೂಡಿ ಬಂದಿದ್ದು ಬೇ... ಬೇರೆ ಗ್ರಾಮಗಳಿಂದ ರೈತರು ಭೂ ಹೋರಾಟದತ್ತ ಮುನ್ನುಗ್ಗಿ ಬರುತ್ತಿದ್ದಾರೆ. ಹೋರಾಟವೂ ಇನ್ನಷ್ಟು ತೀವ್ರಗೊಳ್ಳುತ್ತಿದೆ.

ದೊಡ್ಡ ಬಳ್ಳಾಪುರ

ತಾರೀಖು ೯-೪-೯೦ ರಂದು, ದೊಡ್ಡ ಬಳ್ಳಾಪುರದ ಸಿ.ಪಿ.ಐ.(ಎಂ) ತಾಲ್ಲೂಕು ಸಮಿತಿಯು, ಕಾಂ॥ ಬಿ.ಟಿ.ಆರ್. ರವರಿಗೆ ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಕಾಂ॥ ಸಿ. ವೀರಭದ್ರಯ್ಯನವರು ವಹಿಸಿದ್ದರು. ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಕಾಂ॥ ಎ.ಕೆ. ರಮೇಶ್, ಹಾಜರಿದ್ದರು. ಕಾಂ॥ ರಾಮಾಂಜನೇಯಲು, ಕಾಂ॥ ಎಂ. ಕೃಷ್ಣಾಮೂರ್ತಿ ಕಾಂ॥ರೇಣುಕಾರಾಧ್ಯರವರು ಸಂತಾಪ ಸೂಚಿಸಿದರು. ಶಿಸ್ತು ಬದ್ಧವಾದ ಪಕ್ಷದ ಸಂಘಟನೆ ಮತ್ತು ಅಸಂಘಟಿತ ಕಾರ್ಮಿಕರನ್ನು ಸಂಘಟಿಸುವ ಕೆಲಸಗಳನ್ನು ಮಾಡುವುದೇ, ಕಾಂ॥ ಬಿ.ಟಿ.ಆರ್. ರವರಿಗೆ ನಾವು ಸಲ್ಲಿಸುವ ಶ್ರದ್ಧಾಂಜಲಿ ಎಂದು ಕರೆ ನೀಡಿದರು.

ಪುಟ ೫ರಿಂದ

ಗಳ ವಿರುದ್ಧವಾಗಿ, ವರ್ಗ ಹೋರಾಟದ ಕ್ರಾಂತಿಕಾರಿ ಧೋರಣೆಗಾಗಿ, ಕಾರ್ಮಿಕ ವರ್ಗದ ಐಕ್ಯತೆಗಾಗಿ ಹೋರಾಡಿದರು. ಕಾರ್ಮಿಕ ವರ್ಗದ ಅಂತರ ರಾಷ್ಟ್ರೀಯತೆಯ ಧೋರಣೆಯನ್ನು ಎತ್ತಿ ಹಿಡಿದರು.

೧೯೭೭ ರ ಆಗಸ್ಟ್ ತಿಂಗಳಲ್ಲಿ ಕಲ್ಕತ್ತದಲ್ಲಿ ನಡೆದ ಸಿಐಟಿಯು ಜನರಲ್ ಕೌನ್ಸಿಲ್‌ನ ಸಭೆಯಲ್ಲಿ ಮಾಡಿದ ಅಧ್ಯಕ್ಷ ಭಾಷಣದಲ್ಲಿ ಸರ್ಕಾರವು ಕಾರ್ಮಿಕರ ಮೇಲೆ ಜನರ ಮೇಲೆ ದಬ್ಬಾಳಿಕೆ ನಡೆಸಲು ನೀತಿಗಳನ್ನು ರೂಪಿಸುವ ಹಂತದಲ್ಲಿಯೇ ಅವುಗಳನ್ನು ವಿರೋಧಿಸಲು ಕಾರ್ಮಿಕ ಸಂಘಗಳು ಚಳುವಳಿಯನ್ನು ಹೂಡಬೇಕು, ಆ ನೀತಿಗಳು ಕಾಯಿದೆಗಳಿಗೆ, ಅಥವಾ ಬೇರೆ ರೀತಿಯಲ್ಲಿ ಜನರನ್ನು ಬಾಧಿಸುವವರೆಗೆ ಕಾಯಬಾರದು ಎಂದ ಬಿ.ಟಿ. ರಣದಿವೆ ಕರೆ ಕೊಟ್ಟದ್ದು ಅನಂತರ ೧೯೭೭, ೭೮ ರಲ್ಲಿ ಅಂದಿನ ಕೇಂದ್ರ ಸರ್ಕಾರವು ತರಲು ಎಣಿಸಿದ ಭೂತಲಿಂಗಂ ವರದಿಯನ್ನು ಕೈಗಾರಿಕಾ ಬಾಂಧವ್ಯಗಳ ಮಸೂದೆಯನ್ನು ಸೋಲಿಸಿ ಇತಿಹಾಸದ ಕಸದ ಬುಟ್ಟಿಗೆ ಹಾಕಲು ಅಂದು ಐಕ್ಯಕಾರ್ಮಿಕ ಸಂಘ ಚಳುವಳಿಗೆ ಸಾಧ್ಯವಾಯಿತು.

ಅನಂತರ ಕೇಂದ್ರಸರ್ಕಾರವು ಕಾರ್ಮಿಕ ಸಂಘಗಳ ಮೇಲೆ ಧಾಳಿ ಮಾಡಲು, ಅದು ಕಾರ್ಮಿಕ ಕಾಯಿದೆಗಳಿಗೆ ತಿದ್ದುಪಡಿ ಮಾಡುವ ಮೂಲಕವಾಗಲಿ, ಗ್ರಾಹಕರ ಬೆಲೆ ಸೂಚ್ಯಂಕವನ್ನು ಬದಲಿಸುವ ಮೂಲಕವಾಗಲಿ, ಬಜೆಟ್ ಮೂಲಕವಾಗಲಿ ಯೋಚಿಸಿದರೆ ಕಾಂ॥ ಬಿ.ಟಿ. ರಣದಿವೆಯವರು ಕೂಡಲೇ ಆ ಯೋಜನೆಗಳ ವಿರುದ್ಧವಾಗಿ ಕಾರ್ಮಿಕ ವರ್ಗವನ್ನು ಎಚ್ಚರಿಸುತ್ತಿದ್ದರು.

ಕಾರ್ಮಿಕ ವರ್ಗವು ತಮ್ಮ ದೇಶದ ವಿದೇಶಾಂಗ ನೀತಿಯನ್ನು ಆಸಕ್ತಿಯಿಂದ ಅಭ್ಯಸಿಸಬೇಕೆಂದು ಕಾಂ. ಬಿ.ಟಿ. ರಣದಿವೆ ಹೇಳುತ್ತಿದ್ದರು.

ಇವರು ಜಾಗತಿಕ ಬಂಡವಾಳಶಾಹಿ ... ಬಿಕ್ಕಟ್ಟನ್ನು ಅಧ್ಯಯನ ಮಾಡುತ್ತಿದ್ದರು. ವಿದ್ವತ್ ಪೂರ್ಣವಾದ ಅವರ ಲಿಖಿತ ಭಾಷಣಗಳು ಭಾರತ ಸರ್ಕಾರದ ಬಂಡವಾಳ ಶಾಹಿ ಪಂಚವಾರ್ಷಿಕ ಯೋಜನೆಗಳ ವಿಮರ್ಶೆಯನ್ನು ಭಾರತ ಸರ್ಕಾರದ ಆರ್ಥಿಕ ನೀತಿಗಳ ವಿಶ್ಲೇಷಣೆ ಮತ್ತು ಟೀಕೆಗಳನ್ನು, ಸಾಮ್ರಾಜ್ಯಶಾಹಿ ಹಳೆ ಪಿತೂರಿಗಳ ಬಗ್ಗೆ ಎಚ್ಚರಿಕೆಗಳನ್ನು ಒಳಗೊಂಡಿರುತ್ತಿದ್ದವು.

ಚುನಾವಣಾ ಭಾಷಣಗಳು, ಸಭೆ, ಸಮ್ಮೇಳನಗಳ ಕೊನೆಯಲ್ಲಿ ಮಾಡುವ ಸಮಾರೋಪ ಭಾಷಣಗಳನ್ನು ಬಿಟ್ಟರೆ ಸಾಮಾನ್ಯವಾಗಿ ಅವರ ಎಲ್ಲಾ ಭಾಷಣಗಳು ಮೊದಲೇ ಸಿದ್ಧಪಡಿಸಿದ, ಲಿಖಿತ, ಮುದ್ರಿತ ಭಾಷಣಗಳಾಗಿದ್ದು, ಅವುಗಳನ್ನು ಅವರು ಓದುತ್ತಿದ್ದರು. ಬೇರಾವ ದೇಶದಲ್ಲೂ ಮೊದಲೇ ಬರೆದು ಸಿದ್ಧಪಡಿಸಿದ ಭಾಷಣಗಳನ್ನು ಬಿಟ್ಟು ಹಾಗೆಯೇ ಭಾಷಣ ಮಾಡುವ ಕ್ರಮವಿಲ್ಲವೆಂದು ಹೇಳುತ್ತಿದ್ದರು. ನಮ್ಮ ಭಾಷಣಕಾರರು ಕವಿಗಳಿದ್ದಂತೆ ಎಂದು ಹಾಸ್ಯ ಮಾಡುತ್ತಿದ್ದರು.

ಕಮ್ಯುನಿಸ್ಟ್ ಚಳುವಳಿಯಲ್ಲಿ ಬಲ ಪರಿಷ್ಕರಣವಾದ ಮತ್ತು ಎಡ ಪರಿಷ್ಕರಣವಾದಗಳ ವಿರುದ್ಧವಾಗಿ, ಮಾರ್ಕ್ಸ್‌ವಾದ-ಲೆನಿನ್‌ವಾದದ ಪರಿಶುದ್ಧತೆಯನ್ನು ಎತ್ತಿ ಹಿಡಿಯಲು ಅವರು ಹೋರಾಡಿದರು.

ಪಕ್ಷದ ಬೆಳವಣಿಗೆಯಲ್ಲಿ ಹಿಂದೆ ಬಿದ್ದಿರುವ ರಾಜ್ಯಗಳಲ್ಲಿ ಪಕ್ಷವನ್ನು, ಸಾಮೂಹಿಕ ಸಂಘಟನೆಗಳನ್ನು ಬೆಳೆಸಲು ಬಿ.ಟಿ.ರಣದಿವೆ ಗಮನ ಕೊಡುತ್ತಿದ್ದರು. ಪಕ್ಷವು ಬಲಿಷ್ಠವಾಗಿರುವ ಪಶ್ಚಿಮಬಂಗಾಳ ಮತ್ತು ಕೇರಳಗಳು ಹಿಂದುಳಿದಿರುವ ರಾಜ್ಯಗಳಿಗೆ ಕಾರ್ಯಕರ್ತರನ್ನು ಕಳುಹಿಸಿ ಕೊಡುವ ಮೂಲಕ, ಧನ ಸಹಾಯ ಮಾಡುವ ಮೂಲಕ ಆ ರಾಜ್ಯಗಳಲ್ಲಿ ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ಬೆಳವಣಿಗೆಗೆ ಸಹಾಯ ಮಾಡಬೇಕೆಂದುಅವರು ಆಗಾಗ್ಗೆ ಹೇಳುತ್ತಿದ್ದರು. ಅವರು ಹಾಗೆ ಗಂಭೀರವಾಗಿ ಕರೆ ಕೊಡುವುದನ್ನು, ೧೯೮೭ರ ಡಿಸೆಂಬರ್ ೧ ರಿಂದ ೩ರವರೆಗೆ ಚಂಡೀಗಡದಲ್ಲಿ ನಡೆದ ಸಿಐಟಿಯು ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಕೊನೆಯ ಬಾರಿಗೆ ನಾನು ಕೇಳಿದೆ.

ಪಕ್ಷವು ಅಲ್ಪಸಂಖ್ಯಾತರ ರಕ್ಷಣೆಗೆ ವಿಶೇಷ ಗಮನವನ್ನು ಕೊಡಬೇಕೆಂದು ಅವರು ಹೇಳುತ್ತಿದ್ದರು. ಹಾಗೂ ಸ್ವತಃ ಕೊಡುತ್ತಿದ್ದರು.

ಜಗತ್ತಿನ ಎಲ್ಲಾ ಕಾರ್ಮಿಕ ವರ್ಗ ಒಂದು ಎಂದ ದೃಢವಾಗಿ ನಂಬಿದ್ದ, ಕಾರ್ಮಿಕ ವರ್ಗದ ಅಂತರ ರಾಷ್ಟ್ರೀಯತೆಯ ಧ್ವಜವನ್ನು ತಮ್ಮ ಕ್ರಾಂತಿಕಾರಿ ಜೀವನದುದ್ದಕ್ಕೂ ನಿಷ್ಠೆಯಿಂದ ಎತ್ತಿ ಹಿಡಿದಿದ್ದ ಕಾಂ. ಬಿ.ಟಿ. ರದಿವೆಯವರಿಗೆ ೧೯೮೯ರ ಉತ್ತರಾರ್ಧದ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ವಿದ್ಯಮಾನಗಳು ಬಹಳ ಆತಂಕವನ್ನುಂಟು ಮಾಡಿದುವು. ಅವರು ೧೯೮೯ ರ ನವೆಂಬರ್ ತಿಂಗಳಿನ 'ದಿ ವರ್ಕಿಂಗ್ ಕ್ಲಾಸ್' ಮಾಸಿಕದಲ್ಲಿ '೧೯೮೯ರ ನವೆಂಬರ್ ೭' ಎಂಬ ಲೇಖನದಲ್ಲಿ ಹೀಗೆ ಬರೆದಿದ್ದಾರೆ. "....... ಕಾರ್ಮಿಕ ವರ್ಗವು ಸೋವಿಯತ್ ಒಕ್ಕೂಟ ಮತ್ತು ಸಮಾಜವಾದಿ ಶಿಬಿರವನ್ನು ಸುತ್ತುವರದಿರುವ ಅಪಾಯಗಳನ್ನು ಮತ್ತು ಗಂಡಾಂತರಗಳನ್ನು ಕಡೆಗಣಿಸಲಾಗದು. ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿ ಇದರ ಅರಿವು ಬಹಳ ಕಡಿಮೆ ಮಟ್ಟದಲ್ಲಿರುವಂತೆ ಕಾಣುತ್ತದೆ. ಕೆಲವು ಕಮ್ಯುನಿಸ್ಟ್ ಪಕ್ಷಗಳು ಭೂತ ಕಾಲದ ಸಾಧನೆಗಳನ್ನು ಮರೆತು, ಕಳೆದ ವರ್ಷ ಹಿಂದಿನ ತಪ್ಪುಗಳ ಮೇಲೆ ಮಾಡಿದ ಅಳತೆಗೆಟ್ಟ ಅಚಾರಿತ್ರಿಕ ಟೀಕೆಗಳನ್ನು ಉಪಯೋಗಿಸಿ ಕೊಂಡು ಸಾಮ್ರಾಜ್ಯಶಾಹಿಗಳು ಇಡೀ ವರ್ಷ ಸಮಾಜವಾದದ ವಿರುದ್ಧವಾಗಿ ಅತಿಕೆಟ್ಟ ಅಪಪ್ರಚಾರವನ್ನು ಮಾಡಿದರು. ಸಮಾಜವಾದವು ವಿಫಲವಾಯಿತೆಂದೂ, ಬಂಡವಾಳ ಶಾಹಿಯ ಮೇಲ್ಮೆ ವ್ಯಕ್ತವಾಯಿತೆಂದೂ ಅಬ್ಬರದ ಪ್ರಚಾರವನ್ನು ಮಾಡಿದರು. ಬಂಡವಾಳಶಾಹಿ ದೇಶಗಳಲ್ಲಿ ಹೋರಾಡುತ್ತಿರುವ ಜನರ ಮೇಲೆ ... ವಾದ ಮತ್ತು ಸಮಾಜವಾದಿ ದೇಶಗಳ ವರ್ಚಸ್ಸನ್ನು ಒಡೆಯುವ ಪ್ರಯತ್ನವು ಆದಾಗಿದ್ದಿತು. ಕೆಲವು ಸಮಾಜವಾದಿ ದೇಶಗಳಲ್ಲಿ ಸೈದ್ಧಾಂತಿಕ ಗೊಂದಲದಿಂದ ಉಂಟಾದ ಪರಿಸ್ಥಿತಿಯನ್ನು ಅವರು ಸಂಪೂರ್ಣವಾಗಿ ಬಳಸಿಕೊಂಡರು. ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಶಕ್ತಿಹೀನಮಾಡುವ ಚೀನದಲ್ಲಿನ ಬಂಡವಾಳಶಾಹಿ ಉದಾರವಾದದ ಪ್ರವೃತ್ತಿಗಳಿಂದ ಘೋಷಿಸಲ್ಪಟ್ಟ ಚೀನದ ಪ್ರತಿಕ್ರಾಂತಿಕಾರಿ ಹೋರಾಟವನ್ನು ಅವರು ಸಂಪೂರ್ಣವಾಗಿ ವಿರೋಧಿಸಿದರು. ಚೀನದ ಕಮ್ಯುನಿಸ್ಟ್ ಪಕ್ಷವು ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ದೃಢವಾಗಿ ಆಧಾರವಾಗಿಟ್ಟುಕೊಂಡುಏಕಾಂಗಿಯಾಗಿ ಹೋರಾಟ ಮಾಡಿ, ಬಹಳ ಕಷ್ಟಪಟ್ಟು ಧಾಳಿಯನ್ನು ಸೋಲಿಸಿತು. ಆದರೆ ಅದೇ ಸಾಮ್ರಾಜ್ಯಶಾಹಿ ಶಕ್ತಿಗಳು ಸೋವಿಯತ್ ಒಕ್ಕೂಟದ ಹೊಸ್ತಿಲಲ್ಲಿ, ಪೋಲೆಂಡ್ ಮತ್ತು ಹಂಗೇರಿಗಳಲ್ಲಿ ಶಾಂತಿಯುತವಾಗಿ ಪ್ರತಿ ಕ್ರಾಂತಿಗಳನ್ನು ನಡೆಸುವುದರಲ್ಲಿ ಯಶಸ್ವಿಯಾಗಿದ್ದಾರೆ. ತಮ್ಮ ಬುಡಮೇಲು ಕೃತ್ಯಗಳಿಗೆ ಈ ಎರಡು ದೇಶಗಳಲ್ಲಿ ಮಾರ್ಕ್ಸ್‌ವಾದ ಲೆನಿನವಾದದಿಂದ ಅಲಿಪ್ತತೆ ಹಾಗೂ ದಾರಿತಪ್ಪಿದುದನ್ನು ಅವರು ಅವಲಂಬಿಸಿದರು. ಎರಡೂ ದೇಶಗಳ ಕಮ್ಯುನಿಸ್ಟ್ ಪಕ್ಷಗಳು ಕುಸಿದು ಬಿದ್ದಿವೆ. ಪೋಲೆಂಡಿನಲ್ಲಿ ಸಿಐಎ ಬೆಂಬಲಿಸಿ ಧನ ಸಹಾಯ ಮಾಡುತ್ತಿರುವ 'ಸಾಲಿಡಾರಿಟಿ'ಯೊಂದಿಗೆಪಿ.ಯು.ಡಬ್ಲ್ಯು.ಪಿ. ಸಮ್ಮಿಶ್ರ ಸರ್ಕಾರದಲ್ಲಿರಲು ನಿರ್ಬಂಧಿಸಲ್ಪಟ್ಟಿದೆ. ತಾನು ಮಾರುಕಟ್ಟೆ ಆರ್ಥಿಕತೆ ಮತ್ತು ಬಂಡವಾಳಶಾಹಿಯ ಪರವಾಗಿ ಇರುವುದಾಗಿ ಬಹಿರಂಗವಾಗಿ ಘೋಷಿಸಿದ್ದಾರೆ. ಹಂಗೇರಿಯಲ್ಲಿ ಅತ್ಯಂತ ವಿಶ್ವಾಸಘಾತುಕವಾದ ವಿದ್ಯಮಾನ ನಡೆದಿದೆ. ಕಮ್ಯುನಿಸ್ಟ್ ಪಕ್ಷದಲ್ಲಿ ಬಹುಸಂಖ್ಯಾತರು ಪಕ್ಷವನ್ನು ವಿಸರ್ಜಿಸಿ, ಬಹಿರಂಗವಾಗಿ ಕಮ್ಯುನಿಸಂಅನ್ನು ತಿರಸ್ಕರಿಸಿ, ಮಾರುಕಟ್ಟೆಯ ಆರ್ಥಿಕತೆ ಮತ್ತು ಬಂಡವಾಳಶಾಹಿ... ಕ್ರಾಟಿಕ್ ಪಕ್ಷವನ್ನು ರಚಿಸಿ ಕೊಂಡಿದ್ದಾರೆ. ವೈರುಧ್ಯಗಳು ಶಮನವಾಗುತ್ತಿವೆ ಎಂಬ ಕತೆಗಳನ್ನು ಪ್ರಪಂಚವು ಆಲಿಸುತ್ತಿರುವಾಗಲೇ ಸಾಮ್ರಾಜ್ಯ ಶಾಹಿಗಳು ಸಮಾಜವಾದದ ವಿರುದ್ಧವಾಗಿ ಅತಿ ದೊಡ್ಡ ವಿಜಯವನ್ನು ಪಡೆದರು.

"ಈ ಎರಡು ಸಮಾಜವಾದಿ ದೇಶಗಳ ಕುಸಿತದಿಂದ ಅಂತರರಾಷ್ಟ್ರೀಯ ಚಳುವಳಿಯು ಪಾಠಗಳನ್ನು ಕಲಿಯುವುದೇ? ಕಳೆದ ಕೆಲವು ವರ್ಷಗಳಿಂದ ಬೆಳೆಯುತ್ತಿದ್ದ ಸೈದ್ಧಾಂತಿಕ ಸಂದೇಹಗಳು ಮತ್ತು ಲೆನಿನ್ನರ ಬೋಧೆಗಳಿಗನುಸಾರವಾಗಿ ನಡೆಯದಿದ್ದುದು ಕುಸಿತಕ್ಕೆಭೂಮಿಕೆಯನ್ನು ಸಿದ್ಧಪಡಿಸುತ್ತಿದ್ದುವು. ಆದರೆ ಅಂತರರಾಷ್ಟ್ರೀಯಚಳುವಳಿಯು ಪ್ರತಿಯೊಂದು ಪಕ್ಷವೂ ತನ್ನದೇ ಆದ ದಾರಿಯಲ್ಲಿ ಹೋಗಲು ರಾಷ್ಟ್ರೀಯ ಸಾರ್ವಭೌಮತ್ವವನ್ನು ಪಡೆದಿದೆ ಎಂದು ಒತ್ತಿ ಹೇಳಿ ಸುಮ್ಮನಿದ್ದು ಬಿಟ್ಟಿತು.

ಇದನ್ನು ಬರೆದ ನಂತರ ಪೂರ್ವ ಯುರೋಪಿನ ಇನ್ನೂ ಕೆಲವು ಸಮಾಜವಾದಿ ದೇಶಗಳಲ್ಲಿ ಸಮಾಜವಾದಕ್ಕೆ ಪ್ರತಿಕೂಲಕರವಾದ ಬೆಳವಣಿಗೆಗಳಾದುವು.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಬಹುಮುಖ ಪ್ರತಿಭೆಯ ಕಾಂ. ಬಿ.ಟಿ. ರಣದಿವೆ ಇಲ್ಲದಿರುವುದು ನಮಗೆಲ್ಲರಿಗೂ ಅನುಭವವಾಗುತ್ತಿದೆ.

ಕಾಂ. ಬಿ.ಟಿ. ರಣದಿವೆಯವರು ತಮ್ಮ ಜೀವನದುದ್ದಕ್ಕೂ ಸಮಾಜವಾದಕ್ಕಾಗಿ ಹೋರಾಡಿ ಅಮರರಾಗಿದ್ದಾರೆ.

ಕಾಂ. ಬಿ.ಟಿ.ರಣದಿವೆಯವರು ಉಳಿಸಿ ಹೋಗಿರುವ ಕೆಲಸವನ್ನು ಮಾಡಲು, ಮಾರ್ಕ್ಸ್‌ವಾದ-ಲೆನಿನ್‌ವಾದದ ಪರಿಶುದ್ಧತೆಯನ್ನು ಕಾರ್ಮಿಕ ವರ್ಗದ ಅಂತರರಾಷ್ಟ್ರೀಯತೆಯನ್ನುಎತ್ತಿಹಿಡಿದು, ಭಾರತದ

ನೇಪಾಳದಲ್ಲಿ ಪ್ರಜಾಪ್ರಭುತ್ವ ಶಕ್ತಿಗಳ ವಿಜಯ



ಏಪ್ರಿಲ್‌೮. ನೇಪಾಳದ ಅರಸೊತ್ತಿಗೆ ಎಷ್ಟೇ ದಮನ, ದಬ್ಬಾಳಿಕೆ ನಡೆಸಿದರೂ ಜಗ್ಗದ ಪ್ರಜಾಪ್ರಭುತ್ವ ಆಂದೋಲನಕ್ಕೆ ಕೊನೆಗೂ ತಲೆಬಾಗಬೇಕಾಯಿತು. ನೇಪಾಳೀ ಸಂವಿಧಾನದಲ್ಲಿನ 'ಪಕ್ಷಾತೀತ' ಎಂಬ ಪದವನ್ನು ತೆಗೆದುಹಾಕಿರುವುದಾಗಿ, ಡಿಸೆಂಬರ್ ೧೫, ೧೯೬೦ರಂದು ರಾಜಕೀಯ ಪಕ್ಷಗಳ ಮೇಲೆ ಹೇರಿದ ನಿಷೇಧವನ್ನು ರದ್ದು ಪಡಿಸಿರುವುದಾಗಿ ಘೋಷಿಸಲೇಬೇಕಾಗಿ ಬಂದಿದೆ. ಈ ಘೋಷಣೆಯ ನಂತರ ಫೆಬ್ರವರಿ ೧೮ರಿಂದ ಈ ಆಂದೋಲನವನ್ನು ನೇಪಾಳೀ ಕಾಂಗ್ರೆಸ್ ಹಾಗೂ ಎಡ ಸಂಯುಕ್ತರಂಗ ವಾಪಸು ಪಡೆದು ಎಲ್ಲಾ ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡಬೇಕು, ರಾಷ್ಟ್ರೀಯ ಮಧ್ಯಂತರ ಸರ್ಕಾರ ರಚಿಸಬೇಕೆಂದು ಒತ್ತಾಯಿಸಿವೆ. ಎರಡು ಅಂಶಗಳ ಬೇಡಿಕೆ ಪಟ್ಟಿ ಸಲ್ಲಿಸಿವೆ. ಈ ಬಗ್ಗೆ ೧೫ ಗಂಟೆಯ ಮಾತುಕತೆಗಳು ನಡೆದು ಸದ್ಯ ವಿಫಲಗೊಂಡಿದೆ. ಆದರೆ ಜನತೆ ತಮ್ಮ ಹೋರಾಟ ಮುಂದುವರಿಸುವ ಛಲ ವ್ಯಕ್ತಪಡಿಸಿದ್ದಾರೆ.

ನೇಪಾಳ ಪ್ರಜಾಪ್ರಭುತ್ವ ಆಂದೋಲನ ಈ ಐತಿಹಾಸಿಕ ಗೆಲುವಿಗಾಗಿ ದೊಡ್ಡ ಬೆಲೆ ತೆರಬೇಕಾಗುತ್ತಿದೆ. ಅರಸೊತ್ತಿಗೆಯ ದಮನ ಚಕ್ರ ೧೫೦ ಮುಗ್ಧರ ಬಲಿ ತೆಗೆದುಕೊಂಡಿತು. ತಲೆ ಬಾಗುವ ಎರಡೇ ದಿನಗಳ ಮೊದಲು ಏಪ್ರಿಲ್ ೬ರಂದು ಹೆಲಿಕಾಪ್ಟರುಗಳಿಂದ ಗುಂಡಿನ ಸುರಿಮಳೆಗರೆದು ನೂರಕ್ಕೂ ಹೆಚ್ಚು ಮಂದಿಯನ್ನು ಕೊಲ್ಲುವ ಶೌರ್ಯ ಪ್ರದರ್ಶಿಸಿತು. ಸುಮಾರು ಒಂಭತ್ತು ಸಾವಿರ ಮಂದಿಯನ್ನು ಜೈಲಿಗೆ ತಳ್ಳಿತು. ಏಪ್ರಿಲ್ ೫ ರಂದು ಮಾರಿಚ್ ಮಾನ್‌ಸಿಂಗ್ ಶ್ರೇಷ್ಠರ ಸರ್ಕಾರವನ್ನು ವಜಾ ಮಾಡಿ ಲೋಕೇಂದ್ರ ಬಹಾದೂರ್ ಚಂದ್ ನೇತೃತ್ವದ ಸರ್ಕಾರವನ್ನು ನೇಮಿಸಿ ಪ್ರಜಾಪ್ರಭುತ್ವ ಶಕ್ತಿಗಳಲ್ಲಿ ಒಡಕು ತರಲು ಕೂಡಾ ಪ್ರಯತ್ನಿಸಿತು. ಯಾವುದೂ ಫಲಕಾರಿಯಾಗಲಿಲ್ಲ. ದ್ವಿತೀಯ ಮಹಾಯುದ್ಧನಂತರದ ಜನಾಂದೋಲನದ ಒತ್ತಡದಿಂದ ಫೆಬ್ರವರಿ ೧೮, ೧೯೫೧ರಂದು ರಾಣಾ ಪಾಳೆಯಗಾರಿಕೆ ಕೊನೆಗಂಡು ಬಂದಿದ್ದ ಪ್ರಜಾಪ್ರಭುತ್ವ ಮೂರು ದಶಕಗಳ ಹೋರಾಟದ ನಂತರ ಮತ್ತೆ ನೆಲೆಗೊಳ್ಳಲು ಈಗ ರಂಗ ಸಿದ್ಧವಾಗಿದೆ.

ಕೊನೆಗೂ ನೇಪಾಳದ ಅರಸೊತ್ತಿಗೆ ಮಣಿಯಬೇಕಾಗಿ ಬಂದಿದೆ. ನೇಪಾಳ ಕಾಂಗ್ರೆಸ್ಸಿನ ಮುಖಂಡ ಕೆ.ಪಿ. ಭಟ್ಟಾರಾಯ್ ಅವರ ನೇತೃತ್ವದಲ್ಲಿ ಹೊಸ ಸರ್ಕಾರವೊಂದು ಅಲ್ಲಿ ರಚನೆಯಾಗುತ್ತಿದೆ. ಇದರಲ್ಲಿ ನಾಲ್ಕು ಸದಸ್ಯರು ನೇಪಾಳೀ ಕಾಂಗ್ರೆಸ್‌ನ ಮುಖಂಡರು, ಮೂವರು ಎಡಸಂಯುಕ್ತರಂಗದ ಮುಂದಾಳುಗಳು, ಇಬ್ಬರು ಪಕ್ಷಾತೀತರು ಹಾಗೂ ಇಬ್ಬರು ಅರಸರು ಸೂಚಿಸುವ ವ್ಯಕ್ತಿಗಳು.

ನೇಪಾಳೀ ಜನತೆಯ ಈ ಹೋರಾಟದಲ್ಲಿ ಸಿ.ಪಿ.ಐ.(ಎಂ), ಸಿ.ಪಿ.ಐ. ಹಾಗೂ ಇತರೆಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಸಂಪೂರ್ಣ ನೈತಿಕ ಬೆಂಬಲ ನೀಡುತ್ತಾ ಬಂದವು. ಈ ಚಳುವಳಿ ಆರಂಭಿಸಲು ನಿರ್ಧರಿಸಿದ್ದ ನೇಪಾಳೀ ಕಾಂಗ್ರೆಸ್ಸಿನ ಜನವರಿ ೧೮ ರಿಂದ ೨೦ ರ ವರೆಗಿನ ಸಮ್ಮೇಳನದಲ್ಲಿ ಜನತಾದಳ, ಸಿ.ಪಿ.ಐ.(ಎಂ), ಸಿ.ಪಿ.ಐ. ಹಾಗೂ ಕಾಂಗ್ರೆಸ್ (ಐ) ಪ್ರತಿನಿಧಿಗಳೂ ಭಾಗವಹಿಸಿದ್ದರು. ನೇಪಾಳಿಗಳ ಪ್ರಜಾಪ್ರಭುತ್ವ ಹೋರಾಟವನ್ನು ಬೆಂಬಲಿಸದೆ ವಿರೋಧಿಸಿದ ಭಾರತದ ಪ್ರಮುಖ ರಾಜಕೀಯ ಪಕ್ಷವೆಂದರೆ ಬಿ.ಜೆ.ಪಿ. ಯೊಂದೇ. ಭಾರತದಲ್ಲಿ ಪ್ರಜಾಪ್ರಭುತ್ವ ಪರವೆಂದು ಬೊಬ್ಬೆಹಾಕುವ ಈ ಪಕ್ಷಕ್ಕೆ ಗಡಿಯಾಚೆಯ ಜನಸಾಮಾನ್ಯರ ಹಕ್ಕುಗಳಿಗಿಂತ ವಿಶ್ವದ ಏಕಮಾತ್ರ ಹಿಂದೂ ಅರಸೊತ್ತಿಗೆಯ ರಕ್ಷಣೆಯೇ ಹೆಚ್ಚೆನಿಸಿತು! ತನ್ನ ನಿಜ ಬಣ್ಣವನ್ನು ಭಾರತದ ಜನತೆಗೂ ತೋರಿಸಿಕೊಟ್ಟಿತು!

ಪೂರ್ವ ಜರ್ಮನಿ ಬದಲಾವಣೆ ಸಲ್ಲದು

ಜರ್ಮನ್ ಪ್ರಜಾವಾದಿ ಗಣತಂತ್ರದಲ್ಲಿ ೧೯೪೫ರಿಂದ ೧೯೪೯ರ ನಡುವೆ ನಾಝೀ ಜರ್ಮನಿಯ ಶರಣಾಗತಿ ಒಪ್ಪಂದ, ೧೯೪೫ರ ಪೋಟ್ಸ್‌ಡಾಮ್ ಒಪ್ಪಂದ ಹಾಗೂ ಇತರ ನಾಲ್ಕುಮಿತ್ರಕೂಟದ ದೇಶಗಳ ನಿರ್ಣಯಗಳು ಹಾಗೂ ಠರಾವುಗಳ ಮೂಲಕ ಜರ್ಮನಿಯ ಸೋವಿಯೆತ್ ಮಿಲಿಟರಿ ಆಡಳಿತದ ಕ್ರಮಗಳಿಂದಾಗಿ ಹಲವು ಕೈಗಾರಿಕೆಗಳು ಹಾಗೂ ಜಮೀನು ಸಾರ್ವಜನಿಕ ಒಡೆತನಕ್ಕೆ ಬಂತು. ನಾಝಿಗಳ ಮುದ್ಧಾಪರಾಧಗಳಿಗೆ ಪರಿಹಾರವಾಗಿ ಸೋವಿಯೆತ್ ಒಕ್ಕೂಟಕ್ಕೆ ದೊರೆತ ಕೈಗಾರಿಕೆಗಳನ್ನು ಪೂರ್ವ ಜರ್ಮನಿಯ ಜನರ ಒಡೆತನಕ್ಕೆ ಒಪ್ಪಿಸಲಾಯಿತು. ೧೯೪೫-೪೬ರ ಒಂದೇ ವರ್ಷದಲ್ಲಿ ೨೮.೫೨ ಲಕ್ಷ ಹೆಕ್ಟೇರ್ ಪ್ರಶಿಯನ್ ಭೂಮಾಲಿಕರ ಹಿಡಿತದಲ್ಲಿದ್ದ ಭೂಮಿಯನ್ನು, ನಾಝೀ ಅಪರಾಧಿಗಳ ಹಿಡಿತದಲ್ಲಿದ್ದ ಜಮೀನನ್ನು ಭೂಹೀನ ರೈತರಿಗೆ, ಜನತಾ ಎಸ್ಟೇಟುಗಳ ಒಡೆತನಕ್ಕೆ ನೀಡಲಾಯಿತು. ಜರ್ಮನಿಯನ್ನು ಮಿಲಿಟರಿ ಮುಕ್ತ, ನಾಝಿ-ಮುಕ್ತಗೊಳಿಸುವ, ಕೈಗಾರಿಕೆಗಳ ಗುತ್ತೇದಾರಿಕೆ ಅಂತ್ಯಗೊಳಿಸುವ ಈ ಕ್ರಮಗಳು ಆಧುನಿಕ ಜರ್ಮನ್ ಗಣತಂತ್ರದ ಪ್ರದೇಶದಲ್ಲಿ ಫ್ಯಾಸಿಸ್ಟ್ ವಿರೋಧಿ ಪ್ರಜಾಪ್ರಭುತ್ವ ರಚನೆ ಆರಂಭಿಸಿದ ಮೂಲಭೂತ ಅಂಶಗಳು ಎಂದು ವರ್ಣಿಸಿರುವ ಸೋವಿಯೆತ್ ಒಕ್ಕೂಟ ಸರ್ಕಾರದ ಮಾರ್ಚ್ ೨೮, ೧೯೯೦ ರ ಒಂದು ಹೇಳಿಕೆ ಪಶ್ಚಿಮ ಜರ್ಮನಿಯೊಂದಿಗೆ ಜರ್ಮನ್ ಗಣತಂತ್ರದ ಏಕೀಕರಣದ ಪ್ರಕ್ರಿಯೆಯಲ್ಲಿ ಈ ಕಾನೂನು ಬದ್ಧ ಆಸ್ತಿ ಸಂಬಂಧಗಳನ್ನು ಪ್ರಶ್ನಿಸುವ ಪ್ರಯತ್ನ ನಡೆಸಬಾರದೆಂದು ಕರೆ ನೀಡಿದೆ. ಇಂತಹ ಯಾವುದೇ ಪ್ರಯತ್ನವನ್ನು ತಾನು ವಿರೋಧಿಸುವುದಾಗಿ ಸೋವಿಯೆತ್ ಸರ್ಕಾರ ಹೇಳಿದೆ.

ಭವಿಷ್ಯದ ಏಕೀಕೃತ ಜರ್ಮನಿ ಸಂಕ್ರಮಣ ಘಟ್ಟದಲ್ಲಿ ತಾತ್ಕಾಲಿಕವಾಗಿ ನಾಟೋ ಮಿಲಿಟರಿ ಕೂಟದ ಸದಸ್ಯತ್ವ ಪಡೆಯಬೇಕೆಂಬ ಪೂರ್ವ ಜರ್ಮನಿಯ ಹೊಸ ಸರ್ಕಾರದ ಪ್ರಸ್ತಾಪವನ್ನು ಕೂಡಾ ತಾನು ಒಪ್ಪುವುದಿಲ್ಲವೆಂದು ಸೋವಿಯೆತ್ ಸರ್ಕಾರ ಏಪ್ರಿಲ್ ೧೩ ರಂದು ನೀಡಿದ ಹೇಳಿಕೆಯೊಂದರಲ್ಲಿ ತಿಳಿಸಿದೆ.

ಚೀಣೀ ಪ್ರಧಾನಿಯ ಸೋವಿಯತ್ ಭೇಟಿ

ಚೀನಾ ಜನತಾ ಗಣತಂತ್ರದ ಪ್ರಧಾನ ಮಂತ್ರಿ ಲಿಪೆಂಗ್ ಏಪ್ರಿಲ್ ೨೩ ರಿಂದ ೨೬ರ ವರೆಗೆ ಸೋವಿಯೆತ್ ಒಕ್ಕೂಟಕ್ಕೆ ಭೇಟಿ ನೀಡಲಿರುವರು ಎಂದು ಚೀನೀ ವಿದೇಶಾಂಗ ಮಂತ್ರಾಲಯ ತಿಳಿಸಿದೆ. ೧೯೬೪ರ ನಂತರ ಇದು ಚೀಣೀ ಪ್ರಧಾನ ಮಂತ್ರಿಯ ಮೊದಲ ಮಾಸ್ಕೋ ಭೇಟಿಯಾಗಲಿದೆ. ಕಳೆದ ಮೇ ತಿಂಗಳಲ್ಲಿ ಗೋರ್ಬಚೆವ್‌ರ ಬೀಜಿಂಗ್ ಪ್ರವಾಸದೊಂದಿಗೆ ಮತ್ತೆ ನೆಲೆಗೊಂಡಿರುವ ಈ ಎರಡು ದೊಡ್ಡ ಸಮಾಜವಾದಿ ದೇಶಗಳ ನಡುವಿನ ಸಂಬಂಧಗಳು ಮತ್ತಷ್ಟು ಬಲಗೊಳ್ಳುತ್ತಿರುವುದನ್ನು ಇದು ತೋರಿಸುತ್ತದೆ ಎಂದು ಹೇಳಲಾಗಿದೆ.

ಡಾರ್ಜಿಲಿಂಗ್‌ನಲ್ಲಿ ಸಿಪಿಐ(ಎಂ) ಮುನ್ನಡೆ

ಪತ್ರಿಕೆಯ ವರದಿ

ಗೂರ್ಖಾ ಚಳುವಳಿಯ ಪ್ರಕೋಪಗಳಿಂದ ಹಿಡಿದು ಇತ್ತೀಚಿನವರೆಗೆ ಪಕ್ಷದ ಅಥವಾ ಅದರ ಯಾವುದೇ ಸಾಮೂಹಿಕ ಸಂಘಟನೆಗಳ ನೇತೃತ್ವದಲ್ಲಿ ಬಹಿರಂಗ ಸಭೆ ನಡೆಸಲು ಸಾಧ್ಯವಾಗದ ಕುರಸಾಂಗ್ (ಒಂದು ಸಬ್ ಡಿವಿಜನ್ ಕೇಂದ್ರ)ನಲ್ಲಿ ಇತ್ತೀಚೆಗೆ ಡಿವೈಎಫ್‌ಐ ನೇತೃತ್ವದಲ್ಲಿ ನಡೆದ ಬೃಹತ್ ಸಭೆಯು ಬೆರಗು ಮೂಡಿಸಿದೆ. ಕೆಲವು ದಿನಗಳ ಹಿಂದೆ ಜಿಎನ್‌ಎಲ್‌ಎಫ್‌ನವರು ಸಂಘಟಿಸಿದ ೨ ದಿನಗಳ ಮುಷ್ಕರದ ನಂತರ ಈ ಬಹಿರಂಗ ಸಭೆ ನಡೆಯಿತು ಎನ್ನುವುದು ಮತ್ತೊಂದು ವಿಶೇಷ. ಡಾರ್ಜಿಲಿಂಗ್ ಜಿಲ್ಲೆಯ ಕುರಸಾಂಗ್ ಪ್ರದೇಶದಲ್ಲಿ ಅತ್ಯಂತ ಹೆಚ್ಚಿನ ಆಘಾತಕ್ಕೆ ಒಳಗಾಗಿದ್ದ ಸಿಪಿಐ(ಎಂ) ಮತ್ತು ಅದರ ಸಾಮೂಹಿಕ ಸಂಘಟನೆಗಳು ದಾಪುಗಾಲು ಹಾಕುತ್ತಾ ಮುನ್ನಡೆಯಲಾರಂಬಿಸಿದೆ. ಈ ಪ್ರದೇಶದಲ್ಲಿ ತಪ್ಪು ಹಾದಿಗೆಳೆಯಲ್ಪಟ್ಟಿದ್ದ ಅನೇಕ ಗೂರ್ಖಾ ಯುವಜನರು ಡಿವೈಎಫ್‌ಐ ಸಂಘಟನೆಯ ಎಡೆಗೆ ಆಕರ್ಷಿತರಾಗುತ್ತಿದ್ದಾರೆ. ಅಲ್ಲಿ ನಡೆಯುವ ಅನೇಕ ಬಹಿರಂಗ ಸಭೆಗಳಲ್ಲಿ ಮುಖ್ಯ ಭಾಷಣಕಾರರಾಗಿದ್ದಾರೆ ಎಂದು ಹಿಂದುಸ್ಥಾನ್ ಟೈಮ್ಸ್‌ನ ವಿಶೇಷ ಬಾತ್ಮಿದಾರ ವರದಿ ಮಾಡಿದ್ದಾರೆ.

ಕುರಸಾಂಗ್ ಪ್ರದೇಶಗಳಲ್ಲಿ ಮಾತ್ರವಲ್ಲ, ಸಿಲಿಗುಡಿ, ಡಾರ್ಜಿಲಿಂಗ್ ಪ್ರದೇಶದಲ್ಲಿಯೂ ಸಿಪಿಐ(ಎಂ) ಹಾಗೂ ಅದರ ನೇತೃತ್ವದ ಸಾಮೂಹಿಕ ಸಂಘಟನೆಗಳು ತೀವ್ರವಾಗಿ ಬೆಳೆಯುತ್ತಿವೆ ಎಂದು ಅವರು ವರದಿ ಮಾಡಿದ್ದಾರೆ.

ಗೂರ್ಖಾ ಹೋರಾಟದ ವೀರ ವನಿತೆ ಎಂದು ಪ್ರಸಿದ್ಧಳಾಗಿದ್ದ ಕರುಣಾಗುರಂಗ ಅನೇಕ ಮಹಿಳೆಯರೊಡನೆ ಸಿಪಿಐಯು ಸೇರಿದ್ದು, ಅನೇಕ ಯುವಕ ಯುವತಿಯರು ಆಕರ್ಷಿತರಾಗಿರುವ ಅಲ್ಲಿಯ ಕಮ್ಯುನಿಸ್ಟ್ ಚಳುವಳಿಯನ್ನು ಬಲಪಡಿಸಲಾಗಿದೆ ಎಂದು ಅವರುವರದಿ ಮಾಡಿದ್ದಾರೆ.

ಡಾರ್ಜಿಲಿಂಗ್ ಪ್ರದೇಶ ಗೂರ್ಖಾ ಪರ್ವತಾಭಿವೃದ್ಧಿ ಮಂಡಳಿ ಚುನಾವಣೆಯಾಗಿ ಸುಭಾಷ್‌ಘೀಸಿಂಗ್ ಅದರ ಅಧಿಕಾರ ವಹಿಸಿದ ನಂತರದ ಒಂದು ವರ್ಷದಲ್ಲಿ ಜಿಎನ್‌ಎಲ್‌ಎಫ್ ನಾಯಕರುಗಳ ಭ್ರಷ್ಟಾಚಾರದಿಂದ ಮತ್ತು ದುರಾಡಳಿತದಿಂದ ಗೂರ್ಖಾ ಜನತೆಯ ಬೇಸತ್ತಿದ್ದಾರೆ. ಅಲ್ಲಿ ಪ್ರತಿ ದಿನವೂ ಅನೇಕ ಹಗರಣಗಳನ್ನು ಅಲ್ಲಿನ ಪತ್ರಿಕೆಗಳು ಬಯಲಿಗೆಳೆಯುತ್ತಿವೆ. ಇದು ಜನರಲ್ಲಿ ಅತೃಪ್ತಿ ಅಸಮಧಾನ ಮೂಡಿಸಿದೆ ಎಂದು ವರದಿಗಾರ ತಿಳಿಸಿದ್ದಾರೆ.

ಕೇರಳ: ಕೊರತೆ, ತೆರಿಗೆಗಳಿಲ್ಲದ ಬಜೆಟ್

ಕೇರಳದ ಎಡ ಪ್ರಜಾಪ್ರಭುತ್ವ ರಂಗ ಹಣಕಾಸು ಮಂತ್ರಿ ವಿಶ್ವನಾಥ ಮೆನನ್ ವಿಧಾನ ಸಭೆಯಲ್ಲಿ ಮಂಡಿಸಿದ ಕೇರಳದ ೧೯೯೦-೯೧ರ ಬಜೆಟ್‌ನಲ್ಲಿ ಒಟ್ಟಾರೆ ಕೊರತೆ ಕೇವಲ ೨೪ ಲಕ್ಷ ರೂ. ಇದನ್ನು ಸಮರ್ಪಕವಾದ ತೆರಿಗೆ ವಸೂಲಿಯಿಂದ ತುಂಬಲಾಗುವುದು. ಜನತೆಯ ಮೇಲೆ ಹೊಸ ತೆರಿಗೆಗಳನ್ನು ಹೇರದೆ, ದುಡಿಯುವ ಜನಗಳಿಗೆ ಹಲವಾರು ಕಲ್ಯಾಣ ಯೋಜನೆಗಳನ್ನು, ಸಣ್ಣ ಉದ್ಯಮಗಳು: ವ್ಯಾಪಾರಿಗಳು ಹಾಗೂ ರೈತರಿಗೆ ೨.೨ ರೂ. ಕೋಟಿ ರೂ. ಗಳಷ್ಟು ಹಲವಾರು ರಿಯಾಯ್ತಿಗಳನ್ನು ನೀಡಲು ಶಕ್ತವಾಗಿರುವ ಈ ಬಜೆಟ್ ರಾಜ್ಯದ ಕೈಗಾರಿಕೀಕರಣ ಹಾಗೂ ಕೃಷಿ ವಿಸ್ತರಣೆಗೆ ಹೆಚ್ಚು ಒತ್ತುನೀಡಿದೆ.

ಈ ಹಣಕಾಸು ವರ್ಷದ ಅಂತ್ಯದೊಳಗೆ ಹಿಂದಿನ ಸರಕಾರ ತೆಗೆದುಕೊಂಡ ೨೪೦ ಕೋಟಿ ರೂ. ಗಳ ಓವರ್ ಡ್ರಾಫ್ಟ್ ಸಾಲವನ್ನು ರಾಜ್ಯ ಹಿಂತಿರುಗಿಸುವುದಾಗಿಯೂ ಹಣಕಾಸು ಮಂತ್ರಿ ವಿಶ್ವನಾಥ ಮೆನನ್ ತಿಳಿಸಿದ್ದಾರೆ.

ಕೇಂದ್ರದಲ್ಲಿ ಸರಕಾರದ ಬದಲಾವಣೆಯಿಂದಾಗಿ ರಾಜ್ಯದ ವಿರುದ್ಧ ತಳೆದಿದ್ದ ಪಕ್ಷಪಾತ ಧೋರಣೆ ಅಂತ್ಯಗೊಂಡು ಆಹಾರ ಧಾನ್ಯ ಪೂರೈಕೆ ಬಹಳ ಸುಧಾರಿಸಿದೆ. ಒಂಭತ್ತನೇ ಹಣಕಾಸು ಆಯೋಗದ ಸಲಹೆಯ ಪ್ರಕಾರ ಕೇಂದ್ರದಿಂದ ರಾಜ್ಯಕ್ಕೆ ನ್ಯಾಯಯುತ ಸಂಪನ್ಮೂಲ ವರ್ಗಾವಣೆ ಪಡೆಯಲು ಸಾಧ್ಯವಾಗಿರುವುದರಿಂದ (ಸುಮಾರು ೧೧೪.೧೯ ಕೋಟಿ ರೂ. ಗಳು) ತೆರಿಗೆ ಹೇರದೆ, ರಿಯಾಯ್ತಿಗಳನ್ನು ನೀಡಿದರೂ ಕೊರತೆಯಿಲ್ಲದ ಬಜೆಟ್ ರಾಜ್ಯದ ಜನತೆಗೆ ನೀಡಲು ನೆರವಾಗಿದೆ ಎಂದು ಮೆನನ್ ತಿಳಿಸುತ್ತಾ ಕೇಂದ್ರ ಕೈಗಾರಿಕೆಗಳಲ್ಲಿ ರಾಜ್ಯದಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆ, ರಾಜ್ಯದ ಹಣದ ಬೆಳೆ ಬೆಳೆಯುವವರಿಗೆ ಅನುಕೂಲವಾದ ನೀತಿ ಹಾಗೂ ಇತರ ಸೌಲಭ್ಯಗಳನ್ನು ಪಡೆಯಲೂ ಎಡ ರಂಗ ಸರ್ಕಾರ ಸರ್ವ ಪ್ರಯತ್ನ ನಡೆಸುವುದಾಗಿ ಅವರು ಹೇಳಿದ್ದಾರೆ. ಎಡ ಪ್ರಜಾಪ್ರಭುತ್ವ ರಂಗದ ಈ ಪ್ರಯತ್ನಗಳಿಂದಾಗಿ ೯೦ ರ ದಶಕ ಕೇರಳಕ್ಕೆ ಕೈಗಾರಿಕೀಕರಣದ ದಶಕವಾಗಲಿದೆ. ರಾಜ್ಯದಲ್ಲಿ ಸಾಮಾಜಿಕ ಪ್ರಗತಿಯಲ್ಲಿ ಜನ ಸಮೂಹಗಳು ಭಾಗವಹಿಸುವ ವಿಕೇಂದ್ರೀಕೃತ ಯೋಜನಾ ಪ್ರಕ್ರಿಯೆಯ ಹೊಸ ಯುಗ ಆರಂಭವಾಗುತ್ತಿದೆ ಎಂದೂ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪಶ್ಚಿಮ ಬಂಗಾಳದ ಮುಂಗಡ ಪತ್ರ

ಪಶ್ಚಿಮ ಬಂಗಾಳದ ವಿಧಾನ ಸಭೆ ಅಂಗೀಕರಿಸಿದ ರಾಜ್ಯದ ೧೯೯೦-೯೧ರ ಮುಂಗಡ ಪತ್ರ ವಿಕೇಂದ್ರೀಕರಣ ಹಾಗೂ ಜನ ಸಮೂಹಗಳ ಭಾಗವಹಿಸುವಿಕೆಯೊಂದಿಗೆ ಪರ್ಯಾಯ ಧೋರಣೆಗಳ ಅನುಷ್ಠಾನದ ನೀತಿಯನ್ನು ಮುಂದುವರಿಸುವುದರೊಂದಿಗೆ ಹೊಸ ಉದ್ಯಮಗಳನ್ನು ಸ್ಥಾಪಿಸಿ ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದರ ಮೇಲೆ ಹೆಚ್ಚಿನ ಒತ್ತು ನೀಡಿದೆ. ಜನ ಸಾಮಾನ್ಯರ ಹೊರೆಗಳನ್ನು ಕಡಿಮೆ ಮಾಡುವ ಗಂಭೀರ ಪ್ರಯತ್ನಗಳ ಜತೆಗೆ ಹೊಸ ಉದ್ಯಮಗಳಿಗೆ ವಿಶೇಷ ರಿಯಾಯ್ತಿಗಳನ್ನು ಬಜೆಟ್ ಪ್ರಕಟಿಸಿ ಉದ್ಯೋಗ ಸೃಷ್ಟಿಯ ಪ್ರಯತ್ನವನ್ನು ನಡೆಸಿದೆ.

ವಿದ್ಯುತ್ ವಲಯಕ್ಕೆ ಅತೀ ಹೆಚ್ಚಿನ ಹಣ ನೀಡಿಕೆ. ನಂತರ ಆದ್ಯತೆಯಾಗಿ ಕೃಷಿ, ನೀರಾವರಿ, ಉದ್ಯಮ ಮತ್ತು ಗಣಿಗಾರಿಕೆ, ಶಿಕ್ಷಣ ಹಾಗೂ ಸಾರಿಗೆಗೆ ಆದ್ಯತೆ ನೀಡಲಾಗಿದೆ. ಶಿಕ್ಷಣಕ್ಕೆ ೧೫.೬೬ ಕೋಟಿ ರೂ. ನೀಡಲಾಗಿದೆ. ಇದು ಕಳೆದ ವರ್ಷದ ಒಂದೂವರೆ ಪಟ್ಟು ಗ್ರಾಮೀಣ ಕುಶಲ ಕರ್ಮಿಗಳಿಗೆ ನಿವೃತ್ತಿ ಸೌಲಭ್ಯಗಳನ್ನು ಮುಂಗಡ ಪತ್ರ ಪ್ರಕಟಿಸಿದೆ.

ಯೋಜನಾ ವೆಚ್ಚ ಕಳೆದ ಬಾರಿಗಿಂತ ೧೯% ಹೆಚ್ಚಿಸಲಾಗಿದೆ. ರೆವಿನ್ಯೂ ಆದಾಯವನ್ನು ಜನಸಾಮಾನ್ಯರನ್ನು ತಟ್ಟದ ರೀತಿಯಲ್ಲಿ ರೂಪಿಸಲಾಗಿದೆ. ವಾಶಿಂಗ್‌ಮೆಶಿನ್‌ಗಳು, ವ್ಯಾಕ್ಯೂಮ್ ಕ್ಲೀನರ್‌ಗಳು, ವಿ.ಸಿ.ಆರ್. ಮುಂತಾದ ಲಕ್ಷುರಿ ಬಾಬ್ತುಗಳಿಗೆ ತೆರಿಗೆ ಹಾಕಿ ಸಂಪನ್ಮೂಲ ಹೆಚ್ಚಿಸಲಾಗುವುದು. ಇನ್ನೊಂದೆಡೆ ಬೊಂಬಿನ ಸರಕುಗಳಿಗೆ, ಮೀನುಗಾರಿಕಾ ಸಾಧನಗಳಿಗೆ ರಿಯಾಯ್ತಿಗಳನ್ನು ಈ ಬಜೆಟ್ ಘೋಷಿಸಿದೆ.

ವಿಕೇಂದ್ರೀಕರಣವನ್ನು ಇನ್ನೂ ಕೆಳಗಿನ ಹಂತಗಳಿಗೆ ವಿಸ್ತರಿಸಲಾಗುವುದೆಂದೂ, ಪಟ್ಟಣಗಳಲ್ಲಿ, ಆರೋಗ್ಯ, ಶಿಕ್ಷಣ ಮುಂತಾದ ರಂಗಗಳಲ್ಲಿ ಚಟುವಟಿಕೆಗಳಿಗೆ ಅನುಕೂಲ ಒದಗಿಸಲು ಜಿಲ್ಲಾ ಹಾಗೂ ಪಟ್ಟಣ ಮಟ್ಟದ ಅಭಿವೃದ್ಧಿ ಮಂಡಳಿಗಳನ್ನು ಈ ವರ್ಷ ರಚಿಸಲಾಗುವುದು ಎಂದೂ ಮುಂಗಡ ಪತ್ರ ಹೇಳಿದೆ.


ಬಟಾಲಾ ಹತ್ಯಾಕಾಂಡ - ಪಿ.ಬಿ.ಯ ತೀವ್ರ ಖಂಡನೆ

ಏಪ್ರಿಲ್ ೬ ರಂದು ಪಂಜಾಬಿನ ಬಟಾಲಾದಲ್ಲಿ ೪೦೦೦ ಜನರ ಮೆರವಣಿಗೆಯೊಂದರ ಮೇಲೆ ಖಾಲಿಸ್ತಾನಿಗಳ ಬಾಂಬೆಸೆತ, ಅದರಿಂದುಂಟಾದ ಗಲಭೆ, ಪೋಲೀಸ್ ಗೋಳಿಬಾರ್ ಇತ್ಯಾದಿಗಳು ಬಟಾಲಾ ನಗರದಲ್ಲಿ ಗಂಭೀರ ಪರಿಸ್ಥಿತಿ ನಿರ್ಮಿಸಿದವು. ಕನಿಷ್ಠ ೩೬ ಮಂದಿ ಸತ್ತು, ೯೫ ಮಂದಿಗೆ ಗಾಯಗಳಾಗಿವೆ ಎಂದು ಹೇಳಲಾಗಿದೆ. ಇದು ಮುಗ್ಧ ಜನರ ಭಯಾನಕ ಹತ್ಯಾಕಾಂಡ, ಖಾಲಿಸ್ತಾನಿಗಳ ಅಮಾನುಷ ಹಿಂಸಾಚಾರ ಎಂದು ಸಿ.ಪಿ.ಐ(ಎಂ)ನ ಪೊಲಿಟ್ ಬ್ಯೂರೋ ತೀವ್ರವಾಗಿ ಖಂಡಿಸಿದೆ. ಸರಕಾರ ಜನರಲ್ಲಿ ವಿಶ್ವಾಸ, ಧೈರ್ಯ ಮೂಡಿಸುವ ಕ್ರಮಗಳನ್ನು ತಕ್ಷಣ ಕೈಗೊಳ್ಳಬೇಕು. ಈ ವಿದೇಶಿ ಪ್ರೇರಿತ ಭಯೋತ್ಪಾದನೆಯ ವಿರುದ್ಧ ಧೃಢ ಹೋರಾಟದ ವಾತಾವರಣ ನಿರ್ಮಿಸಲು, ಪಂಜಾಬ್ ಸಮಸ್ಯೆಯ ರಾಜಕೀಯ ಪರಿಹಾರದ ದಾರಿ ಹುಡುಕಲು ಜನರನ್ನು ಒಟ್ಟುಗೂಡಿಸಬೇಕು ಎಂದು ಪಿ.ಬಿ. ಹೇಳಿದೆ.

ಹಲವಾರು ಮುಗ್ಧ ಜೀವಗಳ ಬಲಿ ತೆಗೆದುಕೊಳ್ಳುತ್ತಿರುವ ಈ ಭಯೋತ್ಪಾದಕ ಚಟುವಟಿಕೆಗಳಿಗೆ ತಕ್ಕ ಉತ್ತರ ನೀಡಲು ಒಗ್ಗಟ್ಟಿನಿಂದ ಎದ್ದು ನಿಲ್ಲಬೇಕೆಂದು ದೇಶದ ಎಲ್ಲಾ ಜಾತ್ಯತೀತ ಪ್ರಜಾತಾಂತ್ರಿಕ ವ್ಯಕ್ತಿಗಳಿಗೆ ಪಿ.ಬಿ. ಕರೆ ನೀಡಿದೆ.

ಮಹಿಳೆಯ ದುಡಿಮೆ ಪೂರಕ ವೇತನಕ್ಕಾಗಿಯಲ್ಲ

– ಮೈಥಿಲಿ ಶಿವರಾಮನ್



ಪುಟ ೧ ರಿಂದ
ಯುವ ಕಾರ್ಯಕರ್ತೆಯರು, ಶಿಕ್ಷಣಿಯರ ಈ ಸಮಾವೇಶದಲ್ಲಿ ಪಾಲ್ಗೊಂಡರು.

ದುಡಿಯುವ ಮಹಿಳೆಯರ ಸಮಾವೇಶಗಳು ನಡೆಯುವಂತೆ ಮಾಡಿ, ತಮ್ಮ ಸಮಸ್ಯೆಗಳನ್ನಷ್ಟೇ ಅಲ್ಲದೆ ಟ್ರೇಡ್ ಯೂನಿಯನ್‌ಗಳಲ್ಲಿ, ಸಮಾಜದಲ್ಲಿ ಮತ್ತು ಮನೆಗಳಲ್ಲಿ ಎದುರಿಸುವ ಪಾಳೇಗಾರಿ ಪುರುಷ ಪಕ್ಷಪಾತಿ ಪ್ರವೃತ್ತಿಗಳ ವಿರುದ್ಧ ಪ್ರತಿಭಟನೆಗೈಯುವ ಆತ್ಮ ವಿಶ್ವಾಸದ ಕಿಡಿಯನ್ನು ಮಹಿಳೆಯರಲ್ಲಿ ಹೊತ್ತಿಸಿದ, ಮೂರು ದಿನಗಳ ಹಿಂದೆಯಷ್ಟೇ ಅಗಲಿದ ಧೀಮಂತ ನಾಯಕ ಬಿ.ಟಿ. ಆರ್. ರವರಿಗೆ ಆರಂಭದಲ್ಲಿ ಶ್ರದ್ಧಾಂಜಲಿ ಅರ್ಪಿಸಿ ಆರಂಭವಾದ ಸಮಾವೇಶವನ್ನು ಸಿ.ಐ.ಟಿ.ಯು.ವಿನ ತಮಿಳುನಾಡು ರಾಜ್ಯ ಉಪಾಧ್ಯಕ್ಷೆ ಕಾಂ. ಮೈಥಿಲೀ ಶಿವರಾಂ ಉದ್ಘಾಟಿಸಿದರು.

ಸರಿಯಾಗಿ ಹನ್ನೊಂದು ವರ್ಷಗಳ ಹಿಂದೆ ಇದೇ ದಿನದಂದು ಅಂದರೆ ಏಪ್ರಿಲ್ ೯ ಮತ್ತು ೧೦, ೧೯೭೯ರಂದು ಮದ್ರಾಸಿನಲ್ಲಿ ಪ್ರಥಮ ಅಖಿಲ ಭಾರತ ಮಟ್ಟದ ಸಮಾವೇಶವು ನಡೆದಿದ್ದುದನ್ನು ತಿಳಿಸುತ್ತಾ, ಇತರೆಲ್ಲಾ ಟ್ರೇಡ್ ಯೂನಿಯನ್‌ಗಳಂತೆ ಮಹಿಳೆಯರನ್ನು ಸಮಾನ ನಾಯಕತ್ವದಲ್ಲಿ ತರಲು, ಕೇವಲ ಬಾಯಿ ಮಾತಿನಲ್ಲಷ್ಟೆ ಮುಗಿಸದೆ, ಅದನ್ನು ಕಾರ್ಯಗತಗೊಳಿಸಲು ಕೇವಲ ಸಿ.ಐ.ಟಿ.ಯು. ಸಂಘಟನೆಯಷ್ಟೇ ಪ್ರಯತ್ನಮಾಡುತ್ತಿರುವುದನ್ನು ಹೆಮ್ಮೆಯ ವಿಷಯವೆಂದು ತಿಳಿಸಿದರು.

ಮಹಿಳೆಯ ಸ್ಥಾನ ಮನೆಯಲ್ಲಿ, 'ಗೃಹ ಲಕ್ಷ್ಮಿ' ಎಂದೆಲ್ಲಾ ಹೆಸರಿಸುವ ನಮ್ಮ ಸಮಾಜದ ವಿಚಾರವು ಚಾರಿತ್ರಿಕವಾಗಿ ತದ್ವಿರುದ್ಧವಾಗಿದ್ದು, ತಲತಲಾಂತರದಿಂದಲೂ ಮಹಿಳೆ, ಹೊಲಗದ್ದೆ, ತೋಟ-ಕಾರ್ಖಾನೆ, ಗಣಿಗಳಲ್ಲಿಯೂ ಸಹ ದುಡಿಯುತ್ತಿದ್ದಾಳೆ. ಬ್ರಿಟೀಷರ ಕಾಲದಲ್ಲಿ ಕಾಫಿ, ಟೀ ತೋಟಗಳಲ್ಲಿ ದುಡಿಯುವ, ಮಹಿಳೆಯರ ನಿಕೃಷ್ಟ ಜೀವನವನ್ನು, ಮಹಾತ್ಮ ಗಾಂಧಿಯವರು ತಮ್ಮ ಚಹಾದ ಬಟ್ಟಲಿನಲ್ಲಿ, ರಕ್ತದ ಬಿಂದುಗಳನ್ನಾಗಿ ನೋಡುತ್ತಿದ್ದು ಚಹಾ ಕುಡಿಯುವುದನ್ನೇ ಬಿಟ್ಟಿದ್ದರು. ಆದರೆ ಇದರಿಂದ ಈ ಮಹಿಳಾ ಕಾರ್ಮಿಕರ ಶೋಷಣೆ ಏನೂ ಕಡಿಮೆಯಾಗಲಿಲ್ಲ. ಅದು ಕಡಿಮೆಯಾಗಬೇಕಾದರೆ ಹೋರಾಟದ ದಾರಿಯೊಂದೇ ಮಾರ್ಗವೆಂದು ತಿಳಿಸಿದರು. ಈ ಸಂಕಷ್ಟಗಳನ್ನು ಮಹಿಳೆ ಎದುರಿಸುತ್ತಿದ್ದರೂ, ನಮ್ಮ ಹಿಂದಿನ ಕಾಂಗ್ರೆಸ್ ಸರ್ಕಾರ ಸಂಘಟಿತ ವಲಯದಲ್ಲಿ ದುಡಿಯುತ್ತಿದ್ದ ಮಹಿಳೆಯರನ್ನು ಹೊಸ ಯಂತ್ರಗಳ ಅಳವಡಿಕೆಯಿಂದ, ಕೆಲಸದಿಂದ ಹೊರಗಟ್ಟಿದ್ದಲ್ಲದೆ, ಅಸಂಘಟಿತ ಸ್ವಯಂ ಉದ್ಯೋಗದ ಭ್ರಮೆಯನ್ನು ಹೇಗೆ ಉಂಟು ಮಾಡಿತೆಂಬುದನ್ನು, ಸರ್ಕಾರವೇ ರಚಿಸಿದ 'ಇಳಾಭಟ್ ಆಯೋಗದ' ವರದಿಯ ಆಧಾರದ ಮೇಲೆ ತಿಳಿಸಿ ಕೊಟ್ಟರು. ಹೊಸ ಉದ್ಯೋಗಗಳನ್ನು ಕಲ್ಪಿಸಿ ಕೊಡುವುದೊಂದು 'ಶುದ್ಧ ಮೋಸ', ಇರುವಂಥಹ ಉದ್ಯೋಗಗಳನ್ನೇ ಖಾತ್ರಿ ಮಾಡಬೇಕೆಂಬ ಸಿ.ಐ.ಟಿ.ಯು.ವಿನ ನಿಲುವನ್ನು ತಿಳಿಸುತ್ತಾ, ಮಹಿಳೆಯರಿಗೆ ಮೂವತ್ತು ಪ್ರತಿಶತ ಮೀಸಲಾತಿಯನ್ನು ಕಾಗದದ ಮೇಲೆ ಘೋಷಿಸುವ ಇದರಿಂದ ಲಿಂಗಭೇದವನ್ನು ಉಂಟುಮಾಡುವ ಸರ್ಕಾರದ ಒಡೆದಾಳುವ ನೀತಿಯ ಬಗ್ಗೆ ಸಿ.ಐ.ಟಿ.ಯು.ವಿನ ನಿಲುವನ್ನು ತಿಳಿಸಿದರು. ಅದೇ ವೇಳೆಯಲ್ಲಿ ಅತಿ ಕಡಿಮೆ ಸಂಬಳವನ್ನು, ಪೂರಕ ವೇತನವಾಗಿ ಮಾತ್ರ ಮಹಿಳೆಯರ ಶ್ರಮವನ್ನು ಪರಿಗಣಿಸಿ, ಅಂಗನವಾಡಿ ಬಾಲವಾಡಿಗಳಂತಹ ಕೆಲಸಗಳನ್ನು ಒದಗಿಸುತ್ತಿರುವುದನ್ನು ಖಂಡಿಸಿದರು. ಸರ್ಕಾರದ ಅಂಕಿ-ಅಂಶಗಳೇ ತಿಳಿಸುವಂತೆ ಗ್ರಾಮಗಳಲ್ಲಿಯ ಮೂವತ್ತು ಪ್ರತಿಶತ ಮನೆಗಳಲ್ಲಿ ಇಡೀ ಕುಟುಂಬದ ಪೋಷಣೆಯ ಹೊಣೆ, ಪುರುಷ ಕೆಲಸವಿಲ್ಲದೆ ಪಟ್ಟಣಕ್ಕೆ ವಲಸೆಹೋದಾಗ, ಮಹಿಳೆಯ ಮೇಲೆ ಸಂಪೂರ್ಣವಾಗಿ ಬಿದ್ದಂತಹುದು, ಇನ್ನೂ ೩೦% ಮನೆಗಳಲ್ಲಿ ೫೦% ಭಾಗದ ಸಂಸಾರದ ಹೊಣೆಯನ್ನು ಮಹಿಳೆ ವಹಿಸುತ್ತಿರುವುದೂ ಇದ್ದೂ ಸಹ ಆಕೆಯ ವೇತನವನ್ನು ಪೂರಕ ವೇತನವಾಗಿ ಪರಿಗಣಿಸುವ ಸರ್ಕಾರದ ನೀಚತನವನ್ನು ಬಯಲು ಮಾಡಿದರು. ಇಂದು ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ರಾಷ್ಟ್ರೀಯ ರಂಗವು, ಹಿಂದಿನ ಸರ್ಕಾರದ ಮಹಿಳಾ ವಿರೋಧಿ ನೀತಿಗಳನ್ನು ಕೈ ಬಿಡುವುದಷ್ಟೇ ಅಲ್ಲ, ಪರ್ಯಾಯ ನೀತಿಯನ್ನು ತಾಳಲು ಒತ್ತಾಯಿಸಬೇಕೆಂದರು. ಕಡೆಯಲ್ಲಿ ಸಮಾಜವಾದೀ ದೇಶಗಳಲ್ಲಿಯ ಮಹಿಳೆಯರ ಶ್ರಮವು ಹೇಗೆ ಗೌರವಿಸಲ್ಪಡುತ್ತದೆ ಎಂಬುದನ್ನು ವಿಶ್ಲೇಷಿಸಿ ತಿಳಿಸಿದರು.

ರಾಜ್ಯ ಸಂಚಾಲಕಿ ಕಾ. ರಾಜಮ್ಮನವರು ಮಂಡಿಸಿದ ಕಳೆದ ಹತ್ತು ವರ್ಷಗಳಿಂದೀಚೆಗಿನ ಸಮನ್ವಯ ಸಮಿತಿಯ ಚಟುವಟಿಕೆಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿದ್ದ ೧೮ ಪುಟಗಳ ವರದಿಯ ಮೇಲೆ ಚರ್ಚೆ ನಡೆಯಿತು.

ಈ ವರದಿಯನ್ನು ಅಂಗೀಕರಿಸುವುದರ ಜೊತೆಗೆ ಮಹಿಳಾ ಕಾರ್ಮಿಕರ ನಿರ್ದಿಷ್ಟ ಸಮಸ್ಯೆಗಳನ್ನು ಕುರಿತಾದ ಹಲವು ನಿರ್ಣಯಗಳನ್ನು ಅಂಗೀಕರಿಸಲಾಯಿತು. ಬೀಡಿ, ಪ್ಲಾಂಟೇಶನ್, ಕಾಫಿ ಕ್ಯೂರಿಂಗ್, ಕೈ ಮಗ್ಗ ಕಾರ್ಮಿಕರು, ಅಂಗನವಾಡಿ ಕಾರ್ಯಕರ್ತೆಯರ ಸಮಸ್ಯೆಗಳನ್ನು ಕುರಿತಂತೆ ಪ್ರತ್ಯೇಕ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಬಾಲಪಾಲಿಕೆಗಳು, ಮಹಿಳಾ ಮತ್ತು ಮಕ್ಕಳ ಆರೋಗ್ಯ ಕೇಂದ್ರಗಳಿಗಾಗಿ, ಸಾರಿಗೆ ವ್ಯವಸ್ಥೆಗಾಗಿ, ದುಡಿಯುವ ಮಹಿಳೆಯರ ಹಾಸ್ಟೆಲ್‌ಗಳಿಗಾಗಿ, ರಾಜ್ಯದಲ್ಲಿ ಮಹಿಳಾ ಕಮಿಷನ್ ರಚಿಸಬೇಕೆಂದು ಒತ್ತಾಯಿಸುವ ಠರಾವುಗಳನ್ನು ಅಂಗೀಕರಿಸಲಾಯಿತು. ಗರ್ಭಿಣಿ ಮಹಿಳೆಯರ ನೇಮಕದಲ್ಲಿ ಪಕ್ಷಪಾತದ, ನಾಲ್ಕನೇ ವೇತನ ಆಯೋಗದಲ್ಲಿ ಹೆರಿಗೆ ಭತ್ಯೆಯನ್ನು ಎರಡು ಮಕ್ಕಳಿಗೆ ಸೀಮಿತಗೊಳಿಸುವ ತೀರ್ಮಾನದ, ಮಹಿಳೆಯರ ಮೇಲೆ ಅತ್ಯಾಚಾರ ದೌರ್ಜನ್ಯಗಳ ವಿರುದ್ಧ ಪ್ರತಿಭಟಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಟ್ರೇಡ್ ಯೂನಿಯನ್‌ಗಳಲ್ಲಿ ಮಹಿಳೆಯರ ಪಾತ್ರ ಕಡಿಮೆಯಿದ್ದು ಈ ಬಲಹೀನತೆಯನ್ನು ನಿವಾರಿಸಿ ಅವರಲ್ಲಿ ಜಾಗೃತಿ ತಂದು ಅವರನ್ನು ನಾಯಕತ್ವದ ಸ್ಥಾನಗಳಿಗೆ ತರಬೇಕೆನ್ನುವ ನಿರ್ಣಯವನ್ನು ಸಮಾವೇಶ ಅಂಗೀಕರಿಸಿತು. ಈ ಎಲ್ಲಾ ಬೇಡಿಕೆಗಳು ಮತ್ತು ಇನ್ನೂ ಜಾರಿಯಾಗದ ಇತರ ಹಲವು ಬೇಡಿಕೆಗಳಬಗ್ಗೆ ಪ್ರಚಾರ ನಡೆಸಲು ರಾಜ್ಯಾದ್ಯಂತ ಬೇಡಿಕೆ ದಿನಾಚರಣೆ ನಡೆಸಲೂ ಸಮಾವೇಶ ನಿರ್ಧರಿಸಿತು.

ನಂತರ ಸಮಾವೇಶ ಕಾ. ಎಂ.ಎಂ. ರಾಜಮ್ಮನವರ ಸಂಚಾಲಕತ್ವದ ೨೨ ಸದಸ್ಯೆಯರಿರುವ ಸಮನ್ವಯ ಸಮಿತಿಯನ್ನು ಆರಿಸಿತು. (ಪುಟ 6 ನೋಡಿ)

ಸಿ.ಐ.ಟಿ.ಯು. ರಾಜ್ಯ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್ ಮಹಿಳಾ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು. ಆರಂಭದಲ್ಲಿ ಸಮಾವೇಶದ ಸ್ವಾಗತ ಸಮಿತಿಯ ಅಧ್ಯಕ್ಷೆ ಕಾಂ. ವಿಮಲಾ ಸ್ವಾಗತಿಸಿದರು, ಕಾಂ. ನಾಗರತ್ನ ಮೂರ್ತಿ ವಂದನಾರ್ಪಣೆ ಮಾಡಿದರು. ಸಂಗಾತಿಗಳಾದ ಪದ್ಮಾವತಿ, ವಾರಜ, ಚಂದ್ರಮ್ಮ, ಅಮೀನಾಬಿ, ನಾಗರತ್ನಮೂರ್ತಿ, ಕೆ.ಎಸ್. ವಿಮಲಾ, ಶಾರದಾ ಹಾಗೂ ಖುರ್ಷಿದಾ ಬೇಗಂ ರವರಿದ್ದ ಅಧ್ಯಕ್ಷ ಮಂಡಲಿ ಸಮಾವೇಶದ ಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟಿತು.

ಮತ್ತೊಮ್ಮೆ ಬಂತು ಅಗೆ (ಪುಟ 1 ರಿಂದ...)

ಜನರನ್ನು ನಂಬಿಸಲು ಮತ್ತೆ ಹಾಸ್ಯಾಸ್ಪದ ಯತ್ನ ಮಾಡಿದ್ದಾನೆ. ಈ ಯುವಕರಲ್ಲಿ ಒಬ್ಬಾತ ಸುರೇಶ್ ಕುಮಾರ್ ಅನಾಥ ಬಾಲಕನಾಗಿ ಮಾರ್ಗಿಗಳ ಮುಖ್ಯಾಲಯ 'ಆನಂದನಗರ' ಸೇರಿ ಅಲ್ಲೇ ಬೆಳೆದು ಶಿಕ್ಷಣ ಪಡೆದಾತ ಎಂದು ಬಿ.ಎಸ್.ಎಫ್. ವಿಚಾರಣೆಯಿಂದ ತಿಳಿದು ಬಂದಿದೆ.

ಈ "ಸಿ.ಪಿ.ಐ. (ಎಂ) ಹಲ್ಲೆ ನಿಜವಾಗಿ ಏನು ಎಂಬುದನ್ನು 'ಐಕ್ಯರಂಗ' ದ ಓದುಗರಿಗೆ ಈಗಾಗಲೇ ತಿಳಿದಿದೆ. (ಮಾರ್ಚ್ ೪, ೧೯೯೦ ರ ಸಂಚಿಕೆ ನೋಡಿ) ಪಂಜಾಬ್, ಕಾಶ್ಮೀರಗಳಂತೆ ಪಶ್ಚಿಮ ಬಂಗಾಳದ ಬಡರೈತರು ಹಳ್ಳಿಗರು ಮತ್ತು ಸರದಾರ ಈ ದುಷ್ಕರ ಭಯೋತ್ಪಾದಕ ಬೆದರಿಕೆ. ಕೊಲೆಪಾತಕತನಕ್ಕೆ ಇನಿತೂ ಜಗ್ಗದೆ ಒಡ್ಡಿರುವ ಬಲವಾದ ಪ್ರತಿರೋಧವೇ ಈ ಹಲ್ಲೆಗಳು" ಎಂಬುದು ಎಲ್ಲರಿಗೂ ಗೊತ್ತು.



ಪಂಜಾಬ್‌ಗಡಿಯಲ್ಲಿ ಸಿಕ್ಕಿಬಿದ್ದ ಇಬ್ಬರು ಆನಂದಮಾರ್ಗಿಗಳು ಮತ್ತು ಅವರಿಂದ ವಶಪಡಿಸಿಕೊಂಡ ಶಸ್ತ್ರಾಸ್ತ್ರಗಳು.

ಅಜ್ನಾಲಾದಲ್ಲಿ ಸಿಕ್ಕಿ ಬಿದ್ದ ತರುಣರು ಒಂದು ಅಂತರಾಷ್ಟ್ರೀಯ ಜಾಲದ ಭಾಗವೆಂಬುದೂ ವಿಚಾರಣೆಗಳಿಂದ ಸ್ಪಷ್ಟವಾಗಿದೆ.ಯುರೋಪಿನಲ್ಲಿನ ಒಬ್ಬ ವ್ಯಕ್ತಿ ಪಾಕಿಸ್ತಾನದ ಮೂಲಕ ಶಸ್ತ್ರಾಸ್ತ್ರಗಳ ಕಳ್ಳಸಾಗಣೆ ನಿರ್ದೇಶಿಸುತ್ತಿದ್ದಾನೆ ಎಂಬುದೂ ತಿಳಿದು ಬಂದಿದೆ. ಈ ಇಬ್ಬರು ಯುವಕರು ಕಳೆದ ಬಾರಿ ಮಾರ್ಚ್‌ನಲ್ಲಿ ಅಮೃತಸರಕ್ಕೆ ಬಂದಿದ್ದಾಗ ಅವರ ಜತೆಗೆ ಒಬ್ಬಳು ಯುವತಿ ಕೂಡಾ ಇದ್ದಳು ಎಂದು ಬಿ.ಎಸ್.ಎಫ್.ನವರು ಹೇಳಿದ್ದಾರೆ.

ಆನಂದಮಾರ್ಗಿಗಳ 'ಆಧ್ಯಾತ್ಮಿಕತೆ' ಸೋಗು ೧೯೭೦ ರ ದಶಕದಲ್ಲೇ ಜನರಿಗೆ ಸ್ಪಷ್ಟವಾಗಿತ್ತು. ಆದರೆ ಈ ಹೊಸ ಪಿತೂರಿಯ ಬಯಲು ಅವರಿಗಿಂತ ಹೆಚ್ಚಾಗಿ ಇತ್ತೀಚೆಗಷ್ಟೇ ಅವರ 'ಮಾನವಹಕ್ಕುಗಳ' ವಕೀಲಿ ಮಾಡಿದ ಪಿ.ಯು.ಸಿ.ಎಲ್.ವಾಲಾಗಳ ಹಾಗೂ "ಆನಂದಮಾರ್ಗಿಗಳ ವಿರುದ್ಧ ಹಲ್ಲೆಗಳ" ವಿಚಾರಣೆ ನಡೆಯಬೇಕೆಂದು ಕಲ್ಕತ್ತೆಯ ತಮ್ಮ ಸಮ್ಮೇಳನದಲ್ಲಿ ಒತ್ತಾಯಿಸಿರುವ ಬಿ.ಜೆ.ಪಿ.ಗಳ ಕುರುಡುತನವನ್ನು, ಕಮ್ಯುನಿಸ್ಟ್ ವಿರೋಧ ಅವರ ಪಟ್ಟಭದ್ರ ಹಿತಾಸಕ್ತಿ ಎಂಬುದನ್ನು ಬಯಲು ಮಾಡಿದೆ. "ಆನಂದನಗರ"ದ ಸುತ್ತುಮುತ್ತಲಿನ ಬಡರೈತರ ಮಾನವ ಹಕ್ಕುಗಳು ಪಿ.ಯು.ಸಿ.ಎಲ್.ನವರಿಗೆ ನಗಣ್ಯವಾಗಿದ್ದರೆ, ಚೌಕಿಬೇರಿಯ ಗ್ರಾಮದ ಶಾಲಾಮಾಸ್ತರ್ ಸ್ವಪನ್ ಚಕ್ರವರ್ತಿಯವರ ಮೇಲೆ ಗುಂಡುಹಾರಿಸಿದ, 'ಆನಂದನಗರ'ದ ಮಾರ್ಗಿ ಕೋಟೆಯೊಳಗೆ ಬಾಂಬ್ ಸ್ಫೋಟಗೊಂಡ ಬಗ್ಗೆ ತನಿಖೆ ನಡೆಸುವುದು ಬಿ.ಜೆ.ಪಿ.ಗೆ ಬೇಕಾಗಿಲ್ಲ

ಈ ವಾರ. . . .

★ ವೀರೇಂದ್ರ ಪಾಟೀಲರ ಸಂಪುಟ ವಿಸ್ತರಣೆ ವಿಘ್ನೇಶ್ವರನ ಮದುವೆಯಂತೆ ಮೇಲಿಂದ ಮೇಲೆ ವಿಘ್ನ ಎದುರಿಸುತ್ತಿದೆ.

– ಪ್ರಜಾವಾಣಿ, ಏ-೧೦

★ ಪಶ್ಚಿಮ ಬಂಗಾಳದಲ್ಲಿ ತನ್ನ ಪ್ರಭಾವ ಹರಡುವ ಗಂಭೀರ ಇಚ್ಛೆ ಬಿ.ಜೆ.ಪಿ.ಗಿದ್ದರೆ ಅದು ತನ್ನ ಹಿಂದೂ ಪುನರುತ್ಥಾನವಾದಿ ರೂಪವನ್ನು ಬಿಡಬೇಕಾಗುತ್ತದೆ ಎಂದು ರಾಜಕೀಯ ವೀಕ್ಷಕರ ಭಾವನೆ. ಬಿ.ಜೆ.ಪಿ.ಯ ಕೇಂದ್ರ ಮುಖಂಡರಿಗೂ ಈ ಅಂಶದ ಅರಿವಿದ್ದಂತಿದೆ. ಕಲ್ಕತ್ತೆಯ ಬ್ರಿಗೇಡ್ ಪರೇಡ್ ಮೈದಾನದಲ್ಲಿ ರ‍್ಯಾಲಿಯನ್ನುದ್ದೇಶಿಸಿ ಮಾತನಾಡುವಾಗ ಅದ್ವಾಣಿಯವರು ರಾಮಜನ್ಮಭೂಮಿ ಪ್ರಶ್ನೆಯ ಮೇಲೆ ಮಾತನಾಡಬೇಕು ಎಂಬ ಕೇಳುಗನೊಬ್ಬನ ಒತ್ತಾಯವನ್ನು ಬದಿಗೆ ತಳ್ಳಿದರು.

– ಟೈಂಸ್ ಆಫ್ ಇಂಡಿಯಾ

★ ಬಿ.ಜೆ.ಪಿ. ಈಗ ಅಯೋಧ್ಯೆಯಿಂದ ಕಾಶ್ಮೀರದತ್ತಸಾಗಿದಂತಿದೆ. ಕಾಶ್ಮೀರದ ಬಗ್ಗೆ ದೇಶಾದ್ಯಂತ ಭಾವೋನ್ಮಾದ ಎಬ್ಬಿಸಿ ಹಿಂದುತ್ವದೊಂದಿಗೆ ರಾಷ್ಟ್ರವಾದವನ್ನು ತನ್ನ ಕೋಮುವಾದಿ ದಾಳವನ್ನು ಮರೆಮಾಡಬಹುದೆಂಬ ಲೆಕ್ಕಾಚಾರವಿರಬೇಕು.

– ಇಂಡಿಯಾ ಟುಡೇ, ಏ-೧೬-೩೦.

★ ಭಯೋತ್ಪಾದಕ ಸಂಘಟನೆಗಳ ಮುಖಂಡರಿಗೆ ಅಮೆರಿಕಾ ಪ್ರವೇಶಿಸಲು ವೀಸಾ ನೀಡದಿರುವ ಬಗ್ಗೆ ಅಮೆರಿಕನ್ - ಸರ್ಕಾರ ಕಟ್ಟುನಿಟ್ಟಾಗಿದೆ. ಉದಾಹರಣೆಗೆ ಅಮೆರಿಕಾ ಭಯೋತ್ಪಾದಕ ಸಂಘಟನೆಯೆಂದು ಪರಿಗಣಿಸುವ ಪಿ.ಎಲ್.ಓ.ದ ಅಧ್ಯಕ್ಷ ಅರಾಫತ್‌ಗೆ ೧೯೮೮ರಲ್ಲಿ ವಿಶ್ವಸಂಸ್ಥೆಯನ್ನುದ್ದೇಶಿಸಿ ಮಾತನಾಡಲು ಅನುಮತಿ ಕೊಡಲಿಲ್ಲ. 'ಜಮ್ಮು ಕಾಶ್ಮೀರ ವಿಮೋಚನಾ ರಂಗ' ಒಂದು ಭಯೋತ್ಪಾದಕ ಸಂಘಟನೆ ಎಂದು ಅಮೆರಿಕಾ ವಿದೇಶಾಂಗ ಸಚಿವಾಲಯವೇ ಹೇಳಿದೆ. ಆದರೂ ಈ ಸಂಘಟನೆಯ ಅಧ್ಯಕ್ಷ ಅಮಾನುಲ್ಲಾ ಖಾನ್‌ಗೆ ಅಮೆರಿಕಾ ಪ್ರವೇಶಿಸಲು ಅನುಮತಿ ನೀಡಿದ್ದು ಆತಂಕಕಾರಿ, ಖೇದಕರ ಸಂಗತಿಯೆಂದು ಭಾರತ ಅಮೆರಿಕನ್ ಸರ್ಕಾರಕ್ಕೆ ತಿಳಿಸಿದೆ.

– ಟೈಂಸ್ ಸುದ್ಧಿ, ಏ.೧೨

★ ತಾವೇ ಪ್ರತ್ಯೇಕತಾವಾದದ, ಹಿಂಸಾಚಾರದ ಬೀಜ ಬಿತ್ತಿದ ಅಸ್ಸಾಂ ಗಣಪರಿಷತ್‌ನ ಈಗಿನ ಮುಖಂಡರಿಗೆ ತಾವು ಬಿಟ್ಟಲ್ಲಿಂದ ಮುಂದುವರೆದ ಆಂದೋಲನವನ್ನು ಎದುರಿಸಲು ಕಷ್ಟವಾಗುತ್ತಿದೆ.

– ಟೈಂಸ್ ಆಫ್ ಇಂಡಿಯಾ, ಎ.೧೪

★ ಡಾ|| ಅಂಬೇಡ್ಕರ್‌ಗೆ ಮರಣೋತ್ತರ 'ಭಾರತರತ್ನ' ನೀಡುವುದರಲ್ಲಿ ತನಗೆ ಏನೂ ಅರ್ಥ ಕಾಣುವುದಿಲ್ಲ ಎಂದು ಮಾಜಿ ಕಾನೂನು ಮಂತ್ರಿ ಎಲ್.ಜಿ. ಹಾವನೂರ್, ಮಾಜಿ ಮುಖ್ಯಮಂತ್ರಿ ಆರ್.ಗುಂಡೂರಾವ್‌ರವರು ದಲಿತರಿಗಾಗಿ ಮಾಡಿದ ಕೆಲಸವನ್ನು ಮೆಚ್ಚಿಕೊಳ್ಳುತ್ತಾ ಅವರ ಕಾಲದಲ್ಲಿ ನಗರದ ಒಂದು ಪ್ರಮುಖ ರಸ್ತೆಗೆ ಡಾ. ಅಂಬೇಡ್ಕರ್‌ರವರ ಹೆಸರಿಡಲಾಯಿತು ಎಂಬುದನ್ನು ನೆನಪಿಸಿಕೊಂಡರು.

– ಒಂದು ಪತ್ರಿಕಾ ಸುದ್ದಿ.

★ ಬಿ.ಜೆ.ಪಿ. ಈ (ಗುಜರಾತಿನ) ಘಟನೆಗಳಲ್ಲಿ ತನ್ನ ಪಾಲನ್ನು ದಕ್ಕಿಸಿಕೊಳ್ಳಲು ಪ್ರಯತ್ನಿಸಿರುವುದು ಸ್ವಯಂವೇದ್ಯ. ಅಹಮದಾಬಾದಿನ ಸರ್ಕಿಟ್ ಹೌಸ್‌ನಲ್ಲಿ (ನಗರದಲ್ಲಿ ಗಲಭೆಯಿಂದಾಗಿ ಸರಕಾರೀ ವ್ಯವಹಾರಗಳು ಇಲ್ಲಿಂದ ನಡೆಯುತ್ತಿದ್ದುದು) ನಡೆದ ಒಂದು ಘಟನೆ ಇದನ್ನು ತೋರಿಸಿಕೊಟ್ಟಿತು. ಕೆಲವು ಬಿ.ಜೆ.ಪಿ. ಮಂದಿ ಅಲ್ಲಿಗೆ ಧಾವಿಸಿ ಒಂದು ಮುಸ್ಲಿಂ ಡಿ.ಸಿ.ಪಿ. ಪಕ್ಷಪಾತಿಯಾದ್ದರಿಂದ ಅವರನ್ನು ತಕ್ಷಣ ವರ್ಗ ಮಾಡಬೇಕೆಂದು ಒತ್ತಾಯಿಸಲಾರಂಭಿಸಿದರು. ಮುಖ್ಯಮಂತ್ರಿ ಚಮನ್‌ಭಾಯಿಪಟೇಲ್ ಸ್ಪಷ್ಟವಾಗಿ ನಿರಾಕರಿಸಿದಾಗ ಗೊಂದಲ ಎಬ್ಬಿಸಿ ಗಾಜು ಮುಂತಾದವುಗಳನ್ನು ನುಚ್ಚುನೂರು ಮಾಡಿದರು.

– ಇಂಡಿಯಾ ಟುಡೇ, ಏ-೧೬-೩೦

Printed and published by R. Ramachandra Rao on behalf of Communist party of India (Marxist), Karnataka ... Temple Street, Sultanpet, Bangalore - 560 053